UNIVERSITY OF MYSORE

ORIENTAL RESEARCH INSTITUTE SERIES-155

ಮೈಸೂರು ವಿಶ್ವವಿದ್ಯಾನಿಲಯ

ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ-155

VĀTULA ŚUDDHĀGAMA

(with Kannada Translation)

Critically edited by

VIDWAN DR. H. P. MALLEDEVARU, M.A., Ph.D.

ವಾತುಲ ಶುದ್ಧಾಗಮ

(ಕನ್ನಡ ಅನುವಾದ ಸಹಿತ)

ಸಂಪಾದಕ

ವಿದ್ವಾನ್ ಡಾ. ಹೆಚ್. ಪಿ. ಮಲ್ಲೇದೇವರು, ಎಂ.ಎ., ಪಿಎಚ್.ಡಿ.

ORIENTAL RESEARCH INSTITUTE, MYSORE

ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

1988

Price : Rs. 40-00

UNIVERSITY OF MYSORE

ORIENTAL RESEARCH INSTITUTE SERIES-155

ಮೈಸೂರು ವಿಶ್ವವಿದ್ಯಾನಿಲಯ

ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ-155

VĀTULA ŚUDDHĀGAMA

(with Kannada Translation)

Critically edited by

VIDWAN DR. H. P. MALLEDEVARU, M.A., Ph.D.

ವಾತುಲ ಶುದ್ಧಾಗಮ

(ಕನ್ನಡ ಅನುವಾದ ಸಹಿತ)

ಸಂಪಾದಕ

ವಿದ್ವಾನ್ ಡಾ. ಹೆಚ್. ಪಿ. ಮಲ್ಲೇದೇವರು, ಎಂ.ಎ., ಪಿಎಚ್.ಡಿ.

ORIENTAL RESEARCH INSTITUTE, MYSORE

ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

1988

Price : Rs. 44-00

UNIVERSITY OF MYSORE

ORIENTAL RESEARCH INSTITUTE SERIES-155

ಮೈಸೂರು ವಿಶ್ವವಿದ್ಯಾನಿಲಯ

ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ–155

VĀTULA ŚUDDHĀGAMA

(with Kannada Translation)

Critically edited by

VIDWAN DR. H. P. MALLEDEVARU, M.A., Ph.D.

ವಾತುಲ ಶುದ್ಧಾಗಮ

(ಕನ್ನಡ ಅನುವಾದ ಸಹಿತ)

ಸಂಪಾದಕ

ವಿದ್ವಾನ್ ಡಾ. ಹೆಚ್. ಪಿ. ಮಲ್ಲೇದೇವರು, ಎಂ.ಎ., ಪಿಎಚ್.ಡಿ.

ORIENTAL RESEARCH INSTITUTE, MYSORE

ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

1988

First Edition : 1988
ಪ್ರಥಮ ಮುದ್ರಣ : 1988

Published by :
The Oriental Research Institute, University of Mysore
Mysore
ಪ್ರಕಾಶಕರು :
ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Price : Rs. 40–00
ಬೆಲೆ : ರೂ. 40–00

Printed at :
The University Printing Press, Mysore
ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು
1988

UNIVERSITY OF MYSORE

ORIENTAL RESEARCH INSTITUTE SERIES-155

ಮೈಸೂರು ವಿಶ್ವವಿದ್ಯಾನಿಲಯ

ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ–155

General Editor :

Vidwan Dr. H. P. MALLEDEVARU, M.A., Ph.D.

Director :

Oriental Research Institute
and Professor, Department of Post-Graduate
Studies and Research in Sanskrit, Manasagangotri
University of Mysore, Mysore

ಪ್ರಧಾನ ಸಂಪಾದಕ

ವಿದ್ವಾನ್ ಡಾ. ಹೆಚ್.ಪಿ. ಮಲ್ಲೇದೇವರು, ಎಂ.ಎ., ಪಿಎಚ್.ಡಿ.

ನಿರ್ದೇಶಕ

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮತ್ತು ಪ್ರಾಧ್ಯಾಪಕ, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಸಂಶೋಧನ
ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ORIENTAL RESEARCH INSTITUTE, MYSORE

ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

1988

UNIVERSITY OF MYSORE
ಮೈಸೂರು ವಿಶ್ವವಿದ್ಯಾನಿಲಯ
ORIENTAL RESEARCH INSTITUTE SERIES–155
ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ–155

VĀTULA ŚUDDHĀGAMA
(with Kannada Translation)

ವಾತುಲ ಶುದ್ಧಾಗಮ
(ಕನ್ನಡ ಅನುವಾದ ಸಹಿತ)

Critically edited by
Vidwan Dr. H. P. MALLEDEVARU, M.A., Ph.D.
ವಿದ್ವಾನ್ ಹೆಚ್. ಪಿ. ಮಲ್ಲೇದೇವರು, ಎಂ.ಎ., ಪಿಎಚ್.ಡಿ.

Assistant Editors
Vidwan R. Ramasastri
Vidwan H. K. Siddhagangaiah
Vidwan N.S. Venkatanathachar

ಸಹಾಯಕ ಸಂಪಾದಕರು
ವಿದ್ವಾನ್ ಆರ್. ರಾಮಶಾಸ್ತ್ರಿ
ವಿದ್ವಾನ್ ಹೆಚ್. ಕೆ. ಸಿದ್ಧಗಂಗಯ್ಯ
ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್

The Oriental Research Institute, University of Mysore, Mysore
ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
1988

ಅನುಕ್ರಮಣಿಕೆ

ಮುನ್ನುಡಿ

ಭಾರತೀಯ ಸಾಹಿತ್ಯ, ಧರ್ಮ ಮತ್ತು ಸಂಸ್ಕೃತಿ ಇವುಗಳನ್ನರಿಯಬೇಕಾದರೆ ವೇದಾದಿಗಳ ಮತ್ತು ಆಗಮಶಾಸ್ತ್ರಗಳ ಅಧ್ಯಯನ ಅತ್ಯಗತ್ಯ. ವೇದಾದಿಗಳು ಬೆಳಕಿಗೆ ಬಂದಷ್ಟು ಆಗಮಶಾಸ್ತ್ರಗಳು ಬಂದಿರುವುದಿಲ್ಲ. ಆದುದರಿಂದ ಆಗಮ ಶಾಸ್ತ್ರಗಳ ಬಗ್ಗೆ ಸಂಶೋಧನೆ ಆವಶ್ಯಕವಾಗಿದೆ.

'ಆಗಮ' ಶಬ್ದದ ನಿರ್ವಚನ ಇಂತಿದೆ. 'ಗಮ್' ಧಾತುವಿಗೆ 'ಆ' ಎಂಬ ಉಪಸರ್ಗವು ಸೇರಿ ಆಗಮ ಎಂದಾಗಿದೆ. ಸನಾತನ ಕಾಲದಿಂದಲೂ ಗುರು ಪರಂಪರೆಯಿಂದ ಬಂದ ಅಥವಾ ದೇವರಿಂದ ಅನುಗ್ರಹಿಸಲ್ಪಟ್ಟ ಶಾಸ್ತ್ರಕ್ಕೆ 'ಆಗಮ ಶಾಸ್ತ್ರ'ವೆಂದು ಹೆಸರು.[1] ಸೃಷ್ಟಿಕಾಲದಲ್ಲಿ ಸಕಲ ಜೀವಾವಳಿಯ ಕಲ್ಯಾಣಕ್ಕಾಗಿ ಪರಮೇಶ್ವರನು[2] ಪಾರ್ವತಿಗೆ ಅನುಗ್ರಹಿಸಿದ ದಿವ್ಯಜ್ಞಾನ ರಾಶಿಗೆ[3] 'ಆಗಮಶಾಸ್ತ್ರ'ವೆಂದು ಹೆಸರು. 'ಗಮ್' ಧಾತುವು ಗತ್ಯರ್ಥವನ್ನು ಸೂಚಿಸುವುದು. ಗತ್ಯರ್ಥ ಸೂಚಕ ಧಾತುಗಳೆಲ್ಲವೂ 'ಜ್ಞಾನಾರ್ಥ'ವನ್ನು ಸೂಚಿಸುವುದರಿಂದ, ಆಗಮವೆಂದರೆ 'ಜ್ಞಾನ'[4] ಎಂದೂ ಅರ್ಥವಾಗುತ್ತದೆ. ಆಗಮಗಳಲ್ಲಿ ಪ್ರತಿಪಾದಿತವಾಗಿರುವುದು ಪ್ರಶಸ್ತಜ್ಞಾನ, ಪರಾತ್ಪರಜ್ಞಾನ, ಈ ಅಂಶವು ಆಗಮಗಳ ಉಕ್ತಿಯಿಂದಲೇ ಸ್ಪಷ್ಟ ವಾಗುತ್ತದೆ. ಸೂಕ್ಷ್ಮತಂತ್ರದಲ್ಲಿ 'ಶಿವಜ್ಞಾನ'[5]ವೆಂತಲೂ, ಕಾಲೋತ್ತರಾಗಮ ದಲ್ಲಿ 'ಗುಹ್ಯಾದ್ಗುಹ್ಯತರಜ್ಞಾನ'[6]ವೆಂತಲೂ, ಮೃಗೇಂದ್ರಾಗಮದಲ್ಲಿ 'ನಿರಾಕುಲ

---

1 "ಆಗಮೋ ನಾಮ ಆಮಹೇಶ್ವರಾತ್ ಗುರುಪಾರಂಪರ್ಯಾದಾಗತಂ ಶಾಸ್ತ್ರಂ"
ಪಾಶುಪತ ಸೂತ್ರ ಕೌಂಡಿನ್ಯಭಾಷ್ಯ (ಕರ್ನಾಟಕ ಲಾಕುಳಶೈವರ ಇತಿಹಾಸ ಪು. 2)

2 ಸೃಷ್ಟಿಕಾಲೇ ಮಹೇಶಾನಃ ಪುರುಷಾರ್ಥಪ್ರಸಿದ್ಧಯೇ ।
ವಿಧತ್ತೇ ವಿಮಲಂ ಜ್ಞಾನಂ ಪಂಚಸ್ರೋತೋಭಿಲಕ್ಷಿತಂ ॥
ಮೃಗೇಂದ್ರಾಗಮ, ಉಪೋದ್ಘಾತ ಪ್ರಕರಣ. ಶ್ಲೋ. 21

3 ಆಗತಂ ಪಂಚವಕ್ತ್ರಾತ್ತು ಗತಂಚಗಿರಿಜಾನನೇ ।
ಮತಂ ಚ ವಾಮದೇವಸ್ಯ ತಸ್ಮಾದಾಗಮಮುಚ್ಯತೇ ॥
'ತಂತ್ರಸಾರ ಸಮುಚ್ಚಯ' ಭಾಗ 1, ಪೀಠಿಕೆ ಪು. 9

4 ಯೇ ಗತ್ಯರ್ಥಾಃ ಧಾತವಃ ತೇ ಜ್ಞಾನಾರ್ಥಾಃ ।
ಸಿದ್ಧಾಂತ ಕೌಮುದೀ

5 ಸೂಕ್ಷ್ಮತಂತ್ರಮಹಂ ವಕ್ಷ್ಯೇ ಶಿವಜ್ಞಾನೈಕಸಾಧನಂ ।
ಸಮಾಹಿತೇನ ಮನಸಾ ತಂತ್ರಂ ಗೋಪ್ಯಮಿದಂ ಶೃಣು ॥
ಸೂಕ್ಷ್ಮಾಗಮ, ಕ್ರಿಯಾಪಾದ, ಪಟಲ 1 ಶ್ಲೋ. 13

6 ಏತತ್ತೇ ಶಿವಸದ್ಭಾವಃ ಶಿವವಕ್ತ್ರಾದ್ವಿನಿಃ ಸೃತಾಃ ।
ಗುಹ್ಯಾದ್ಗುಹ್ಯತರಂ ಗುಹ್ಯಂ ಗ್ರಹೀತವ್ಯಂ ಪ್ರಯತ್ನತಃ ॥
ಕಾಲೋತ್ತರಾಗಮ ಪು. 29

ಜ್ಞಾನ'[7]ವೆಂತಲೂ, ಲಕ್ಷ್ಮೀತಂತ್ರದಲ್ಲಿ 'ದಿವ್ಯಶಾಸ್ತ್ರ'[8]ವೆಂದೂ, 'ಶಿವಯೋಗ ವರ್ಣನ'ವೆಂಬ ಹಸ್ತಪ್ರತಿಯಲ್ಲಿ 'ಅವಬೋಧರೂಪಜ್ಞಾನ'[9]ವೆಂದೂ ಮೃಗೇಂದ್ರಾಗಮದಲ್ಲಿ 'ವಿಮಲಜ್ಞಾನ'[10]ವೆಂದೂ ಆಗಮಗಳಲ್ಲಿ ಹೇಳಿರುವುದು ಮೇಲಿನ ಅಭಿಪ್ರಾಯಕ್ಕೆ ನಿದರ್ಶನವಾಗಿದೆ. ವಾಚಸ್ಪತಿಮಿಶ್ರರು ಮಾನವನಿಗೆ ಅಭ್ಯುದಯ ಮತ್ತು ನಿಶ್ರೇಯಸ ಇವುಗಳನ್ನು ಹೊಂದಲು ಸಾಧಕವಾದ ಶಾಸ್ತ್ರವೇ ಆಗಮ ಶಾಸ್ತ್ರವೆಂದು[11] ಹೇಳಿರುವರು.

ಆಗಮಗಳನ್ನು ಕೆಲವೆಡೆ 'ತಂತ್ರಶಾಸ್ತ್ರ'ಗಳೆಂದೂ ಕರೆದಿರುವರು. 'ತಂತ್ರ' ಶಬ್ದಕ್ಕೆ ಮೇದಿನೀಕೋಶಕಾರನು ಹತ್ತು ಅರ್ಥಗಳನ್ನು ಕೊಟ್ಟಿದ್ದಾನೆ. 'ತಂತ್ರ' ಶಬ್ದದ ನಿರ್ವಚನವು ಅಜಿತಾಗಮ,[12] ವಿಷ್ಣುಸಂಹಿತೆ,[13] ಈಶಾನಶಿವಗುರುದೇವ ಪದ್ಧತಿ, ಮೊದಲಾದ ಗ್ರಂಥಗಳಲ್ಲಿ[14] ಉಕ್ತವಾಗಿದೆ. ಈ ಎಲ್ಲ ಗ್ರಂಥಗಳ ಮಥಿತಾರ್ಥವನ್ನು ಸಂಗ್ರಹಿಸಿ ಹೇಳುವುದಾದರೆ, ತತ್ತ್ವ, ಮಂತ್ರ ಮೊದಲಾದವುಗಳ ಬಗ್ಗೆ ನಿಖರವಾದ ವಿಷಯವನ್ನು ತಿಳಿಸಿ ಮಾನವನಿಗೆ ಅಭಯವನ್ನೀಯುವುದೇ 'ತಂತ್ರ' ಶಾಸ್ತ್ರದ ಉದ್ದೇಶ. ಯಾವುದಾದರೂ ಶಾಸ್ತ್ರವನ್ನು ಸಪ್ರಮಾಣಪೂರ್ವಕವಾಗಿ

---

7 "ವಕ್ಷ್ಯೇ ನಿರಾಕುಲಂ ಜ್ಞಾನಂ ತದುಕ್ತೈರೇವ ಭೂಯಸಾ"
ಮೃಗೇಂದ್ರಾಗಮ. ಉಪೋದ್ಘಾತ ಪ್ರಕರಣ. ಶ್ಲೋ. 27

8 ದಿವ್ಯಶಾಸ್ತ್ರಾಣ್ಯಧೀಯೀತ ನಿಗಮಾಂಶ್ಚೈವ ವೈದಿಕಾನ್ ।
ಸರ್ವಾನನುಚರೇತ್ ಸಮ್ಯಕ್ ಸಿದ್ಧಾಂತಾನಾತ್ಮಸಿದ್ಧಯೇ ॥
ಲಕ್ಷ್ಮೀತಂತ್ರ, ಪಟಲ 28. ಶ್ಲೋ. 29

9 ಶಿವಂ ಶಿವಜ್ಞಾನಾತ್ಮಕಂ ಅವಬೋಧರೂಪಂ ಪರಮಶಿವೇ ವಿದ್ಯತೇ ।
ಶಿವಯೋಗವರ್ಣನಂ, ಪು. 2

10 ವಿಧತ್ತೇ ವಿಮಲಂಜ್ಞಾನಂ
ಮೃಗೇಂದ್ರಾಗಮ, ಉಪೋದ್ಘಾತ ಪ್ರಕರಣ, ಶ್ಲೋ. 21

11 ಆಗಚ್ಛಂತಿ ಬುದ್ಧಿಮಾರೋಹಂತಿ ಯಸ್ಮಾತ್ ಅಭ್ಯುದಯ
ನಿಶ್ರೇಯಸೋಪಾಯಃ ಸ ಆಗಮಃ
ತತ್ತ್ವವೈಶಾರದೀ. 1.7

12 ತನೋತಿ ವಿಪುಲಾನರ್ಥಾನ್ ತತ್ತ್ವ ಮಂತ್ರ ಸಮಾಶ್ರಿತಾನ್ ।
ತ್ರಾಣಂ ಚ ಕುರುತೇ ಪುಂಸಾಂ ತೇನ ತಂತ್ರಮಿತಿ ಸ್ಮೃತಮ್ ॥
ಅಜಿತಾಗಮ, ಕ್ರಿಯಾಪಾದ, ಪಟಲ. 1 ಶ್ಲೋ. 115

13 ಸರ್ವೇಽರ್ಥಾ ಯೇನ ತನ್ಯಂತೇ ತ್ರಾಯಂತೇ ಚ ಭಯಾಜ್ಜನಾಃ ।
ಇತಿ ತಂತ್ರಸ್ಯ ತಂತ್ರತ್ವಂ ತಂತ್ರಜ್ಞೈಃ ಪರಿಚಕ್ಷತೇ ॥
ವಿಷ್ಣುಸಂಹಿತೆ. ಪಟಲ. 2. ಶ್ಲೋ. 10

14 ತನುತೇ ತ್ರಾಯತೇ ನಿತ್ಯಂ ತಂತ್ರಮಿತ್ಥಂ ವಿದುರ್ಬುಧಾಃ
ಪಿಂಗಲಮತ (ಹಸ್ತಪ್ರತಿ, ದರ್ಬಾರ್ ಗ್ರಂಥಭಂಡಾರ, ನೇಪಾಳ)

ಪ್ರತಿಪಾದಿಸುವ ಮಹತ್ವಪೂರ್ಣ ಆಧಾರಗ್ರಂಥಗಳಿಗೂ ‘ತಂತ್ರ’ವೆಂದು ಹೇಳಿರುವುದನ್ನು ಮರೆಯಲಾಗದು. ನಿದರ್ಶನಕ್ಕೆ ಸಾಂಖ್ಯತಂತ್ರ, ನ್ಯಾಯತಂತ್ರ, ವೈನಾಶಿಕ ತಂತ್ರ, ಯೋಗತಂತ್ರ, ಆಯುರ್ವೇದತಂತ್ರ ಮೊದಲಾದವು.

ವೈಷ್ಣವಾಗಮಗಳು ‘ಸಂಹಿತೆ’ ಎಂದು ಕರೆಯಲ್ಪಟ್ಟಿವೆ. ಆದುದರಿಂದ ‘ಆಗಮ’ ‘ತಂತ್ರ’ ‘ಸಂಹಿತೆ’ ಇವುಗಳನ್ನು ಪರ್ಯಾಯಪದಗಳೆಂದು ಬಹುಮಟ್ಟಿಗೆ ಪರಿಗಣಿಸಬಹುದಾದರೂ, ‘ಆಗಮಶಾಸ್ತ್ರ’ವು ಶೈವಧರ್ಮವನ್ನೂ, ‘ತಂತ್ರಶಾಸ್ತ್ರ’ಗಳು ಶಾಕ್ತಧರ್ಮವನ್ನೂ, ‘ಸಂಹಿತೆ’ಗಳು ವೈಷ್ಣವ ಧರ್ಮವನ್ನೂ ಹೆಚ್ಚಾಗಿ ಪ್ರತಿಪಾದಿಸುವುವು. ಆದರೆ ಇದು ಖಚಿತವಾದ ನಿಯಮವೇನಲ್ಲ.

ಆಗಮಗಳನ್ನು ವೇದಕ್ಕೆ ವಿರೋಧವಾದುವೆಂತಲೂ, ವೇದಕ್ಕೆ ಅವಿರೋಧವಾದುವೆಂತಲೂ ಎರಡು ವಿಭಾಗಗಳನ್ನು ಮಾಡಬಹುದು.[15]

ಶೈವಾಗಮಗಳ ವ್ಯಾಪ್ತಿ ಅಪಾರವಾದುದು. ಪ್ರತಿಯೊಂದು ಆಗಮದಲ್ಲಿಯೂ ಉಕ್ತವಾಗಿರುವ ‘ತಂತ್ರಾವತಾರ ಪಟಲ’ಗಳ ಅಧ್ಯಯನದಿಂದ, ಕಾಮಿಕಾದಿ ವಾತುಲಾಂತವಾದ ಇಪ್ಪತ್ತೆಂಟು ಪ್ರಧಾನ ಶಿವಾಗಮಗಳು, ‘ವಕ್ತ್ರಾದಿ’ ‘ವಿಶ್ವಾತ್ಮಕಾಂತ’ವಾದ ಇನ್ನೂರ ಇಪ್ಪತ್ತೈದು ಉಪಾಗಮಗಳಿರುವುದೆಂದು ತಿಳಿದು ಬರುವುದು. ಒಟ್ಟು ಎರಡುನೂರ ಐವತ್ತುಮೂರು ಆಗಮಗಳಿವೆ. ಕಾಮಿಕಾಗಮ, ಯೋಗಜಾಗಮ, ಚಿಂತ್ಯಾಗಮ, ಕಾರಣಾಗಮ, ಅಜಿತಾಗಮ, ದೀಪ್ತಾಗಮ, ಸೂಕ್ಷ್ಮಾಗಮ, ಸಹಸ್ರಾಗಮ, ಅಂಶುಮದಾಗಮ, ಸುಪ್ರಭೇದಾಗಮ ಈ ಹತ್ತು ಆಗಮಗಳಿಗೆ ‘ಶಿವಭೇದ’ವೆಂದೂ; ವಿಜಯಾಗಮ, ನಿಶ್ವಾಸಾಗಮ, ಸ್ವಾಯಂಭುವಾಗಮ, ಅನಲಾಗಮ, ವೀರಾಗಮ, ರೌರವಾಗಮ, ಮಕುಟಾಗಮ, ವಿಮಲಾಗಮ, ಚಂದ್ರಜ್ಞಾನಾಗಮ, ಮುಖಬಿಂಬಾಗಮ, ಪ್ರೋದ್ಗೀತಾಗಮ, ಲಲಿತಾಗಮ, ಸಿದ್ಧಾಗಮ, ಸಂತಾನಾಗಮ, ಶರ್ವೋಕ್ತಾಗಮ, ಪಾರಮೇಶ್ವರಾಗಮ, ಕಿರಣಾಗಮ, ವಾತುಲಾಗಮ ಈ ಹದಿನೆಂಟು ಆಗಮಗಳಿಗೆ ‘ರುದ್ರಭೇದ’ವೆಂದೂ ಹೆಸರು.

ವೇದಗಳು ಅನಾದಿ ಹಾಗೂ ಅಪೌರುಷೇಯ ಎಂದು ಸಂಪ್ರದಾಯವಾದಿಗಳು ಭಾವಿಸಿರುವಂತೆ, ಆಗಮಗಳು ಸಹ ಅನಾದಿ ಹಾಗೂ ಅಪೌರುಷೇಯವೆಂದು ಶಿವಾದ್ವೈತಿಗಳು ಭಾವಿಸಿದ್ದಾರೆ. ಆದರೂ ಆಧುನಿಕ ವಿಮರ್ಶಕರಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಆಗಮಗಳ ಕಾಲವನ್ನು ನಿರ್ಣಯಿಸಲು ಯತ್ನಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಹತ್ವಪೂರ್ಣ ಗ್ರಂಥಗಳಾದ ವಚನಶಾಸ್ತ್ರಗಳಲ್ಲಿ ಮತ್ತು ತಮಿಳು ಸಾಹಿತ್ಯದಲ್ಲಿ ಅನರ್ಘ್ಯಕೃತಿಗಳಾದ ಶಿವಜ್ಞಾನಸಿದ್ಧಿಯಾರ್, ತಿರು

---

15 ಆಗಮಾ ದ್ವಿವಿಧಾ ಜ್ಞೇಯಾ ವೇದಾನಾಮವಿರೋಧಿನಃ ।
ವಿರೋಧಿನಶ್ಚ ತತ್ರೈತೇ ಶ್ರುತಿಮಾರ್ಗಾನುರೋಧಿನಃ ॥
ಕ್ರಿಯಾಸಾರ, ಉಪೋದ್ಘಾತ, ಭಾ. 1, ಶ್ಲೋ. 14

ಮಂದಿರಂ ಮೊದಲಾದ ಗ್ರಂಥಗಳಲ್ಲಿ ಆಗಮಗಳ ಬಗ್ಗೆ ಉಲ್ಲೇಖವಿರುವುದು ಸುಸ್ಪಷ್ಟ. ನೇಪಾಳದ ದರ್ಬಾರ್ (ಲೈಬ್ರರಿ) ಗ್ರಂಥಭಂಡಾರದಲ್ಲಿ ಸಂಗ್ರಹಿಸಲ್ಪಟ್ಟಿರುವ 'ಕಿರಣಾಗಮ' ಹಸ್ತಪ್ರತಿಯು ಕ್ರಿ.ಶ. 859ರಲ್ಲಿ ಮೂಲ ಗ್ರಂಥದಿಂದ ನಕಲು ಮಾಡಿಕೊಳ್ಳಲಾಯಿತೆಂದು ಉಲ್ಲೇಖವಿದೆ. ಶಂಕರಾಚಾರ್ಯರು 'ಸೌಂದರ್ಯ ಲಹರಿ'[16]ಯಲ್ಲಿ 64 ತಂತ್ರಗಳನ್ನು ಹೆಸರಿಸಿರುವುದು; ವೈಷ್ಣವಾಗಮಗಳಲ್ಲಿ ಶೈವಾಗಮಗಳ ಬಗೆಗೆ ಎಲ್ಲೂ ಉಲ್ಲೇಖವಿಲ್ಲದಿರುವುದು; ಕಾಂಚೀಪುರದ ಕೈಲಾಸನಾಥ ದೇವಾಲಯದಲ್ಲಿರುವ ಪಲ್ಲವ ಶಾಸನವು, ಪಲ್ಲವರಾಜನಾದ ರಾಜಸಿಂಹನು 'ಆಗಮಾನುಸಾರಿ'ಯೆಂದೂ; ಅಮರಾವತಿಯ ಶಾಸನವು ಪಲ್ಲವರ ಮೂಲ ಪುರುಷನಾದ ದ್ರೋಣಾಚಾರ್ಯನನ್ನು ವರ್ಣಿಸುತ್ತ ಆತನು 'ಸಮಸ್ತಾಗಮಪಾರದೃಶ್ವಾ' ಎಂದು ಹೇಳಿರುವುದು; ಉದಯಗಿರಿ ಗುಹೆ ದೇವಸ್ಥಾನ; ಕುಮಾರಗುಪ್ತನ ಬಿಲ್‌ಗಡಾ ಕಲ್ಲಿನ ಸ್ತಂಭದ ಶಾಸನ ಇವುಗಳು; ಡಾ. ಎಸ್. ಸಿ. ನಂದೀಮಠರು, ಡಾ. ರಮಣನ್, ಡಾ. ಶಾಮಾಶಾಸ್ತ್ರಿಗಳು ಮತ್ತು ಡಾ. ಕೆ. ಸಿ. ಪಾಂಡೆ ಇವರ ಪ್ರಮಾಣ ಪೂರ್ವಕ ಸಂಶೋಧನಾತ್ಮಕ ಲೇಖನಗಳು! ಈ ಎಲ್ಲ ಆಧಾರಗಳಿಂದ[17] ಶಿವಾಗಮಗಳು ಕ್ರಿ.ಪೂ. ಒಂದನೆಯ ಶತಮಾನಕ್ಕೆ ಮೊದಲೇ ಅಸ್ತಿತ್ವದಲ್ಲಿದ್ದುವೆಂಬುದನ್ನು ಖಚಿತವಾಗಿ ಹೇಳಬಹುದು.

ವೇದಗಳು ಅನಾದಿ ಹಾಗೂ ಅಪೌರುಷೇಯ ಎಂದು ಸಂಪ್ರದಾಯವಾದಿಗಳು ಪರಿಗಣಿಸಿರುವಂತೆ, ಶೈವಾಗಮಗಳೂ ಅನಾದಿ ಹಾಗೂ ಅಪೌರುಷೇಯವೆಂದು ಶಿವಾದ್ವೈತಿಗಳು ಪರಿಗಣಿಸಿರುವರು.

ಸ್ಕಂದ-ಶಿವಸಂವಾದಾತ್ಮಕವಾದ ವಾತುಲಶುದ್ಧಾಗಮವು ಶೈವಾಗಮಗಳಲ್ಲಿ ಮುಖ್ಯವೂ ಉತ್ತಮವೂ ಆಗಿದ್ದು ಅಪೌರುಷೇಯವಾಗಿದೆ.

ಹತ್ತು ಪಟಲಗಳಿಂದ ಕೂಡಿ ಸುಮಾರು ಸಹಸ್ರ ಶ್ಲೋಕಗಳುಳ್ಳ ಈ ಗ್ರಂಥವು ಸಮಗ್ರವಾಗಿ ದೇವತಾರಹಸ್ಯವನ್ನು ಪ್ರಕಾಶಪಡಿಸುತ್ತ ಸಾಂಗೋಪಾಂಗವೂ ವಿಜ್ಞಾನ ರಹಸ್ಯಮಯವೂ ಆದ ಪಾದಚತುಷ್ಟಯಾತ್ಮಕವಾದ ಆಗಮದ, ಅದರಲ್ಲೂ

---

16 ಚತುಷ್ಷಷ್ಟ್ಯಾ ತಂತ್ರೈಃ ಸಕಲಮಭಿಸಂಧಾಯ ಭುವನಂ

ಸೌಂದರ್ಯಲಹರೀ ಶ್ಲೋ. 31

17 A close study of the Hindu Society, tradition and the way of life of the people reveals that the society was very much influenced by the Āgamic thought. The flow of the Āgamic thought must be very ancient. "Śaivāgamas and Upaniṣads" Thesis. p. 39. By Dr. H. P. Malledevaru.

ಮುಖ್ಯವಾಗಿ ಕ್ರಿಯಾಪಾದದ ಸಾರವನ್ನೆಲ್ಲ ಒಂದೆಡೆ ಉಪದೇಶಿಸುವ ಶ್ರೇಷ್ಠಗ್ರಂಥ ನಾಗಿದೆ ಎಂದು ಹೇಳಬಹುದು.

ಇದರ ಹತ್ತು ಪಟಲಗಳು ಈ ರೀತಿ ಇವೆ:

1. ತತ್ತ್ವಭೇದ ಪಟಲ
2. ವರ್ಣಭೇದ ಪಟಲ
3. ಚಕ್ರಭೇದ ಪಟಲ
4. ವರ್ಗಭೇದ ಪಟಲ
5. ಮನ್ತ್ರಭೇದ ಪಟಲ
6. ಪ್ರಣವಭೇದ ಪಟಲ
7. ಬ್ರಹ್ಮಭೇದ ಪಟಲ
8. ಅಂಗಭೇದ ಪಟಲ
9. ಮನ್ತ್ರಜಾತ ಪಟಲ
10. ಮನ್ತ್ರಕೀಲ ಪಟಲ

ಈ ಎಲ್ಲ ಪಟಲಗಳ ಸಂಜ್ಞೆಗಳೂ ಸಹ ಅವುಗಳಲ್ಲಿ ಪ್ರತಿಪಾದ್ಯವಾದ ವಿಷಯಗಳಿಗೆ ಅನುಗುಣವಾದ ಅನ್ವರ್ಥಸಂಜ್ಞೆಗಳೇ ಆಗಿವೆ.

ಅವತರಣಿಕಾಭಾಗ

ಈ ಗ್ರಂಥದ ಪ್ರಯೋಜನವನ್ನೂ ಹಾಗೂ ಉದ್ದೇಶವನ್ನೂ ವರ್ಣಿಸುತ್ತಾ—

> " ಸರ್ವಲೋಕಹಿತಾರ್ಥಾಯ ಯೋಗಿನಾಂ ರಕ್ಷಣಾಯ ಚ
> ಪುಂಸಾಂ ಅನುಗ್ರಹಾರ್ಥಾಯ ಜ್ಞಾನಿನಾಂ ಮುಕ್ತಿಕಾರಣಮ್ "

ಎಂದು ಹೇಳಿ—ಈ ಗ್ರಂಥವು ಎಲ್ಲ ಜನರ ಹಿತಕ್ಕಾಗಿಯೂ ಯೋಗಿಗಳ ರಕ್ಷಣೆ ಗಾಗಿಯೂ, ಮಾನವರ ಅನುಗ್ರಹಕ್ಕಾಗಿಯೂ ಜ್ಞಾನಿಗಳಿಗೆ ಮುಕ್ತಿಯ ಮಾರ್ಗ ವನ್ನು ದರ್ಶಿಸುವುದಕ್ಕಾಗಿಯೂ ಅವತರಿಸಿದೆ—ಎಂದು ಈ ಗ್ರಂಥದ ಆದಿಯಲ್ಲೇ (1–6, 2) ಹೇಳಲಾಗಿದೆ.

ಒಂದನೆಯ ತತ್ತ್ವಭೇದ ಪಟಲ

ತತ್ತ್ವವನ್ನು ಶಿವ–ಸದಾಶಿವ–ಮಹೇಶ ಎಂಬ ಮೂರು ವಿಧವಾಗಿ ವಿಂಗಡಿಸಿ, ಅದರಲ್ಲಿ–ಶಿವತತ್ತ್ವವು ನಿಷ್ಕಲವೆಂದೂ, ಸದಾಶಿವ ತತ್ತ್ವವು ಸಕಲನಿಷ್ಕಲವೆಂದೂ, ಮಹೇಶತತ್ತ್ವವು ಸಕಲವೆಂದೂ ನಿರೂಪಿಸಿ, ಒಂದೊಂದು ತತ್ತ್ವಕ್ಕೂ ಲಕ್ಷಣವನ್ನು ವಿವರಿಸುತ್ತ, ಆದಿತತ್ತ್ವವಾದ ಶಿವನಮೂಲಕ–ಪರಾ–ಆದಿ–ಇಚ್ಛಾ–ಜ್ಞಾನ–ಕ್ರಿಯಾ –ರೂಪವಾದ ಪಂಚಶಕ್ತಿಗಳ ಆವಿರ್ಭಾವವನ್ನೂ, ಈ ಪಂಚಶಕ್ತಿಗಳಿಂದ–ಶಿವ–

ಅಮೂರ್ತ–ಮೂರ್ತ–ಕರ್ತೃ–ಕರ್ಮಗಳೆಂಬ ಪ್ರಪಂಚ ಸೃಷ್ಟಿಮೂಲವಾದ ಪಂಚಸಾದಾಖ್ಯಗಳ ಆವಿರ್ಭಾವವನ್ನೂ; ಇವೆಲ್ಲದರ ಉತ್ಪತ್ತಿ–ರೂಪ–ಮತ್ತು ವರ್ಣಗಳನ್ನೂ ವಿಸ್ತಾರವಾಗಿ ವರ್ಣಿಸಲಾಗಿದೆ. ಶಿವಲಿಂಗದಲ್ಲಿ ತತ್ತ್ವಧ್ಯಾನವನ್ನೂ–ಅಂಗಭೇದವನ್ನೂ ನಿರೂಪಿಸಿ, ನಂತರ–ಎರಡನೆಯ ಸದಾಶಿವತತ್ತ್ವದ–ಪಂಚಮುಖಗಳನ್ನೂ, ಆಮುಖಗಳ ದಿಗ್ವ್ಯವಸ್ಥೆಯನ್ನೂ, ಧ್ಯಾನವಿಧಿಯನ್ನೂ ವಿವರಿಸಿ; ಮೂರನೆಯ ಮಹೇಶತತ್ತ್ವದ ಇಪ್ಪತ್ತೈದು ವಿಧ ಲೀಲಾಮೂರ್ತಿಗಳ ಭೇದವನ್ನೂ ಇವುಗಳ ಆವಿರ್ಭಾವದ ಮೂಲವನ್ನೂ, ಇವುಗಳಿಂದ ಆವಿರ್ಭವಿಸುವ ನಾನಾ ದೇವತೆಗಳ ಸಮೂಹವನ್ನೂ, ಉಮಾ–ಅಂಬಿಕಾ–ಗಣಾನೀ–ಈಶ್ವರೀ–ಮನೋನ್ಮನೀ ಎಂಬ ಶಕ್ತಿಪಂಚಕವನ್ನೂ, ಅವುಗಳಲ್ಲಿ ಮನೋನ್ಮನೀ ಶಕ್ತಿಯಿಂದ ಉದ್ಭವವಾದ ಗೌರೀ ಶಕ್ತಿಯ ಮಹಿಮೆಯನ್ನೂ ತತ್ತ್ವಭೇದವೆಂಬ ಒಂದನೆಯ ಪಟಲದಲ್ಲಿ ನಿರೂಪಿಸಲಾಗಿದೆ.

ಎರಡನೆಯ ವರ್ಣಭೇದ ಪಟಲ

ಶಬ್ದಬ್ರಹ್ಮಮಯನಾದ ಭಗವಂತನಿಗೆ ವರ್ಣಗಳೆಲ್ಲ ಶರೀರರೂಪವಾಗಿರುವುದನ್ನು ಚಿತ್ರಿಸಿ, ಆ ವರ್ಣಗಳ ಸಂಖ್ಯೆ, ಸ್ವರೂಪ ಮತ್ತು ರೂಪಗಳನ್ನು ಬಣ್ಣಿಸಲಾಗಿದೆ. ಶಿವತತ್ತ್ವದಿಂದ ಕ್ರಮವಾಗಿ ಬಿಂದು–ನಾದ–ಶಕ್ತಿ–ಶಬ್ದ–ವಾಗ್ಭವ–ಎಂಬ ಕಲೆಗಳನ್ನೂ, ಆ ಕಲೆಗಳಲ್ಲಿ ಪ್ರಕೃತಿ–ವಿಕೃತಿ ವರ್ಣಗಳ ಉತ್ಪತ್ತಿಕ್ರಮವನ್ನೂ ಪ್ರಣವದಿಂದ ಅಕಾರ–ಇಕಾರ–ಉಕಾರಗಳ ಮತ್ತು ಮನ್ತ್ರಗಳ ಉದ್ಭವ ಕ್ರಮವನ್ನೂ ವಿವರಿಸಿ; ಪ್ರತಿಯೊಂದು ವರ್ಣದ–ಅಂದರೆ ಸಪ್ತಪ್ರಕೃತಿವರ್ಣಗಳ, ನವ ವಿಕೃತಿ ವರ್ಣಗಳ ಕಲಾಭೇದವನ್ನೂ, ಮುಂದಿನ ವಿಕಲಾತ್ಮಕವಾದ ವ್ಯಂಜನವರ್ಣಗಳ ಭೇದವನ್ನೂ, ಇವುಗಳ ರೂಪತ್ರಯ, ಲಿಂಗಭೇದ, ಇವುಗಳ ಪಂಚಭೂತಬೀಜತ್ವ, ತತ್ತ್ವ–ಮೂರ್ತಿ–ಪ್ರಭಾವ ಇವುಗಳ ಭೇದ ಮತ್ತು ಸ್ವರೂಪ, ಮಾತ್ರೆ, ಅಧಿದೇವತೆ, ಗುಣ, ಶರೀರ–ಶರೀರಿ ಭಾವ ಸ್ಥೂಲಸೂಕ್ಷ್ಮದ ಆಕಾರಭೇದ, ಸಂಯೋಜ್ಯಾ-ಸಂಯೋಜ್ಯವ್ಯವಸ್ಥೆ ಮತ್ತು ಪ್ರತಿಯೊಂದು ವರ್ಣದ ದೇವತಾಭೇದ ಇವುಗಳನ್ನು ವರ್ಣಿಸಲಾಗಿದೆ.

ಮೂರನೆಯ ಚಕ್ರಭೇದ ಪಟಲ

ಮಂತ್ರಗಳ ರಹಸ್ಯಗಳನ್ನು ಬೋಧಿಸುವ ಸಲುವಾಗಿ ಮಂತ್ರದೇವತಾಮಯವಾದ ಚಕ್ರಸ್ವರೂಪವನ್ನು ವಿವರಿಸುತ್ತ, ಚಕ್ರೋದ್ಧಾರಕ್ಕೆ ಯೋಗ್ಯವಾದ ಪ್ರದೇಶವನ್ನೂ, ಆ ಪ್ರದೇಶದ ಶೋಧನ ಕ್ರಮವನ್ನೂ, ಅಲ್ಲಿ ಮಂಟಪ ಮತ್ತು ಅದರ ಮಧ್ಯದಲ್ಲಿ ಚಕ್ರವಿನ್ಯಾಸ ವಿಧಿಯನ್ನೂ, ಆ ಚಕ್ರವಿಸ್ತಾರದ ಪ್ರಮಾಣ, ವೃತ್ತಸಂಖ್ಯೆ, ಪತ್ರಸಂಖ್ಯೆ, ಉಪದಲ, ರಂಧ್ರ, ಕರ್ಣಿಕೆ ಇವುಗಳ ಪ್ರಮಾಣಾದಿಗಳನ್ನೂ, ಇವುಗಳಿಗೆ

ಅನ್ವಯಿಸುವ ಬಣ್ಣ, ದೇವತಾನ್ಯಾಸ, ಶಕ್ತಿನ್ಯಾಸಗಳ ಕ್ರಮವನ್ನೂ, ಪ್ರತಿಷ್ಠಿಸ ಬೇಕಾದ ಅಂಬಿಕಾದ್ಯಷ್ಟಶಕ್ತಿಗಳ ಮತ್ತು ಶರ್ವಾದಿ ಅಷ್ಟಮೂರ್ತಿಗಳ ವಿವರಣೆ ಯನ್ನೂ, ಅಷ್ಟವಿದ್ಯೇಶ್ವರರ, ಅಷ್ಟಲೋಕಪಾಲರ ಮತ್ತು ಅಷ್ಟವಸುಗಳ ಸ್ವರೂಪ ವನ್ನೂ, ಸೂರ್ಯಚಂದ್ರಾಗ್ನಿ ರೇಖಾವಿನ್ಯಾಸಕ್ರಮವನ್ನೂ ಬೀಜಾಕ್ಷರ ಮತ್ತು ಅವುಗಳ ಅಧಿದೇವತೆಗಳ ನ್ಯಾಸ-ವಿಧಿಯನ್ನೂ ವಿವರಿಸಲಾಗಿದೆ.

ಕೊನೆಯಲ್ಲಿ ಚಕ್ರಮಹಿಮೆ, ಚಕ್ರಪೂಜಾವಿಧಿಗಳ ವಿವರಣೆಯೊಂದಿಗೆ ಪಟಲ ವನ್ನು ಮುಗಿಸಲಾಗಿದೆ.

ನಾಲ್ಕನೆಯ ವರ್ಗಭೇದ ಪಟಲ

ಹಿಂದೆ ಹೇಳಿದ ವರ್ಣಗಳಲ್ಲಿ ಸೃಷ್ಟಿವರ್ಗ, ಸ್ಥಿತಿವರ್ಗ ಮತ್ತು ಸಂಹಾರವರ್ಗ ವೆಂಬ ಮೂರು ವರ್ಗವಿಭಾಗಮಾಡಿ, ಇವುಗಳ ಅನುಬಂಧರೂಪವಾದ ಅಷ್ಟವರ್ಗ ಗಳನ್ನು ವಿವರಿಸಿ, ಇವುಗಳ ಮೂಲಕ ಮಂತ್ರಗಳ ಉದ್ಧಾರಕ್ರಮವನ್ನು ವಿವರಿಸ ಲಾಗಿದೆ. ಸೂಕ್ಷ್ಮಕರ್ಣಿಕೆಯಲ್ಲಿ ಶಿವಬೀಜವಾದ 'ಹ' ಕಾರದ ಪರ್ಯಾಯಾದಿ ಗಳನ್ನೂ, ನಾದ-ಗುಹ್ಯ-ಪರ-ಜೀವ-ದೇಹಿ-ಭೂತ-ಪಂಚಮ-ಸಾನ್ತ-ತತ್ತ್ವಾನ್ತ- ಭೂತಾಂತ-ಶಿವಾರ್ಣ ಮತ್ತು ಅವ್ಯಯಪದಾರ್ಥಗಳ ಸ್ವರೂಪವನ್ನೂ, ಬಿಂದು ರೂಪವಾದ ನಕಾರ, ಆತ್ಮಬೀಜರೂಪವಾದ ಆಕಾರ, ನಾದರೂಪವಾದ ಐಕಾರ, ಎಂಬ ಬೀಜರೂಪವಾದ ಕ್ಷಕಾರಗಳ ರಹಸ್ಯಗಳನ್ನೂ ನಿರೂಪಿಸಿ, ಪ್ರಥಮ-ಮಧ್ಯಮ- ಮತ್ತು ತೃತೀಯ ಆವರಣಗಳಲ್ಲಿರುವ ವ್ಯಂಜನಸ್ವರವರ್ಣ ಸ್ವರೂಪಾದಿಗಳ ನಿರೂಪಣೆಯೊಂದಿಗೆ ಪಟಲವನ್ನು ಮುಗಿಸಲಾಗಿದೆ.

ಐದನೆಯ ಮನ್ತ್ರಭೇದ ಪಟಲ

ಸಾಮಾನ್ಯವಾಗಿ ಮನ್ತ್ರಗಳ ಸ್ವರೂಪ, ಉಗಮ, ಉಪಯೋಗ ಮತ್ತು ವ್ಯಾಪ್ತಿಗಳನ್ನು ವಿವರಿಸುತ್ತ, ಮನ್ತ್ರಪದಾರ್ಥ, ಮನ್ತ್ರಗಳ ಮಹಿಮೆಗಳನ್ನು ತಿಳಿಸಿ, ಮಂತ್ರಗಳ ಉದ್ಧಾರಕ್ಕೆ ಬೇಕಾದ ಮಂಟಪರಚನೆ-ಚಕ್ರರಚನೆ-ಬೀಜಾಕ್ಷರ ವಿನ್ಯಾಸಗಳನ್ನು ನಿರೂಪಿಸಲಾಗಿದೆ.

ನಂತರ ನಿರ್ದಿಷ್ಟವಾದ ಪ್ರಸಾದಮಂತ್ರವನ್ನು ವ್ಯಾಖ್ಯಾನಿಸುತ್ತ, ಪ್ರಸಾದ ಶಬ್ದಾರ್ಥ, ಅದರ ಶುದ್ಧ-ಮೂಲ-ತತ್ತ್ವ-ಆದಿ-ಆತ್ಮ ಎಂಬ ಐದು ಭೇದಗಳನ್ನೂ ನಿರೂಪಿಸಲಾಗಿದೆ. ಮುಂದುವರಿದು ಶಿವ ಮತ್ತು ಸದಾಶಿವ ಮನ್ತ್ರೋದ್ಧಾರ ಕ್ರಮವನ್ನೂ, ಸದಾಶಿವಮಂತ್ರದ, ಮುಕ್ತಿದ - ಅಭಿವೃದ್ಧಿ-ಕಾಮ್ಯ - ಶಾನ್ತಿಕ- ಪೌಷ್ಟಿಕಗಳೆಂಬ ಐದು ಭೇದಗಳ ವಿವರಣೆಯನ್ನೂ ಸೂಚಿಸಿ, ಇವುಗಳ ಅಕ್ಷರಸಂಖ್ಯಾ ನಿರ್ಣಯದೊಂದಿಗೆ, ಸೃಷ್ಟಿಸ್ಥಿತಿಲಯಾತ್ಮಕವಾದ ತ್ರಿವಿಧಮಹೇಶ ಮಂತ್ರವನ್ನು ನಿರೂಪಿಸಿ, ಶಕ್ತಿಮಂತ್ರವನ್ನು ನಿರೂಪಿಸುತ್ತ ಅದರ ಐದು ವಿಧವಾದ ಸ್ವರೂಪ ಗಳನ್ನೂ, ಅವುಗಳ ಅಧಿದೇವತೆಗಳನ್ನೂ ನಿರೂಪಿಸಲಾಗಿದೆ.

ನಂತರ ಲಿಂಗಮಂತ್ರಗಳ ನ್ಯಾಸಕ್ರಮವನ್ನು ನಿರೂಪಿಸುತ್ತಾ, ಧ್ಯಾನ-ಆವಾಹನ-ಸ್ಥಾಪನ-ಸನ್ನಿಧೀಕರಣ-ಸನ್ನಿರೋಧ ಮತ್ತು ಪೂಜಾವಿಧಾನಗಳನ್ನು ತಿಳಿಯ:ಹೇಳಿ, ಮೂರ್ತಿ ಮತ್ತು ಶಕ್ತಿಗಳಿಗೆ ಅನುಗುಣವಾದ ನ್ಯಾಸಭೇದವನ್ನು ನಿರೂಪಿಸಲಾಗಿದೆ.

ನಂತರ ಕ್ರಿಯಾವಿಧಿಗಳಿಗೂ ಮಂತ್ರಗಳಿಗೂ ಇರುವ ಸಂಬಂಧಾನುಬಂಧಗಳನ್ನು ವಿವರಿಸಲಾಗಿದೆ.

ಆರನೆಯ ಪ್ರಣವಭೇದ ಪಟಲ

ಪ್ರಣವದ ಸ್ವರೂಪವನ್ನೂ, ಅದರ ಧ್ಯಾನಕ್ರಮವನ್ನೂ ಹೇಳಿ, ಪ್ರಣವ ಮೂಲ ಮತ್ತು ಅಕ್ಷರಗಳನ್ನೂ, ಅವುಗಳ ದೇವತೆಗಳನ್ನೂ ವಿವರಿಸುತ್ತ, ಪ್ರಣವವೇ ಬ್ರಹ್ಮ ಸ್ವರೂಪವೆಂದು ನಿರೂಪಿಸಲಾಗಿದೆ.

ನಂತರ ಪ್ರಣವದ ಸಾಕಲ್ಯ-ಶಾಂಭವ-ಸೌಖ್ಯ-ಸಾವಶ್ಯ-ಮತ್ತು ಸಾಯುಜ್ಯ ಎಂಬ ಐದು ಭೇದಗಳನ್ನು ವ್ಯಾಖ್ಯಾನಿಸುತ್ತ, ಅವುಗಳ ವರ್ಣ, ಛಂದಸ್ಸು, ಋಷಿ, ಭೂತತತ್ತ್ವ, ಅಧಿದೇವತೆ, ಮಾತ್ರೆ ಇವುಗಳನ್ನು ವರ್ಣಿಸಲಾಗಿದೆ. ಪ್ರಣವಗಳಲ್ಲಿ 'ಹ' ಕಾರದ ಸ್ಥಾನವನ್ನು ನಿರೂಪಿಸುತ್ತ, ಯಾವುದೇ ಪ್ರಣವದ ಜಪವನ್ನೂ ಬ್ರಹ್ಮಾರ್ಥಕವಾಗಿ ಮಾಡಬೇಕೆಂದು ಹೇಳಿ ಪಟಲವನ್ನು ಮುಗಿಸಲಾಗಿದೆ.

ಏಳನೆಯ ಬ್ರಹ್ಮಭೇದ ಪಟಲ

ಉಪಾಸ್ಯಬ್ರಹ್ಮಸ್ವರೂಪನ್ನೂ, ಮೂರ್ತಿ-ತತ್ತ್ವ-ಭೂತ-ಪಿಂಡ ಮತ್ತು ಕಲಾ ಎಂಬ ಪಂಚ ಬ್ರಹ್ಮಭೇದವನ್ನೂ ಸಪ್ರಕಾರವಾಗಿ ನಿರೂಪಿಸಲಾಗಿದೆ. ಅವುಗಳಲ್ಲಿ ಒಂದೊಂದೂ ಐದೈದು ವಿಧವಾಗಿ ಒಟ್ಟು 25 ವಿಧ ಬ್ರಹ್ಮಗಳೆಂದು ಹೇಳಲಾಗಿದೆ.

ನಾಲ್ಕು ಮತ್ತು ಐದನೆಯ ಪಿಂಡಬ್ರಹ್ಮ, ಕಲಾಬ್ರಹ್ಮಗಳ ಭೇದಗಳನ್ನು ವಿಸ್ತಾರವಾಗಿ ನಿರೂಪಿಸುತ್ತ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಪಂಚಪಿಂಡಬ್ರಹ್ಮಗಳನ್ನೂ, ಇವುಗಳ ತತ್ತ್ವಸ್ವರೂಪಗಳಾದ ಪಂಚಕಲಾಬ್ರಹ್ಮಗಳನ್ನೂ, ಈ ಪಂಚಮೂರ್ತಿಗಳ ಪ್ರಣವಸ್ವರೂಪತ್ವವನ್ನೂ, ಈ ಮೂರ್ತಿಗಳಲ್ಲಿ ಆತ್ಮಪ್ರಸಾದಾದಿ ಮತ್ತು ಭಾವನಾವಿಧಿಗಳನ್ನೂ, ಪಂಚಭೂತ ಸ್ವರೂಪಭಾವನಾವಿಧಿಗಳನ್ನೂ, ಇವುಗಳ ಸಾಮಾನ್ಯ ಸೌಮ್ಯರೂಪಗಳು ವರ್ಣ ಮೊದಲಾದವುಗಳನ್ನು ವಿವರಿಸಿ, ಎಲ್ಲ ಮೂರ್ತಿಗಳ ಸಾಧಾರಣ ರೂಪ ಮತ್ತು ಶಕ್ತಿಗಳನ್ನು ನಿರೂಪಿಸಿ ಈ ಪಟಲವನ್ನು ಮುಗಿಸಲಾಗಿದೆ.

ಎಂಟನೆಯ ಅಂಗಭೇದ ಪಟಲ

ಅಂಗಭೇದವನ್ನು ನಿರೂಪಿಸಲಾರಂಭಿಸಿ, ಅಂಗವನ್ನು ಮೊದಲಿಗೆ ಶಿವಾಂಗ-ಭೂತಾಂಗ-ಕೂಟಾಂಗ-ವಿದ್ಯಾಂಗ-ಶಕ್ತ್ಯಂಗ ಮತ್ತು ಸಾಮಾನ್ಯಾಂಗವೆಂದು ಆರು ಭಾಗವಾಗಿ ವಿವರಿಸಿ, ಆ ಒಂದೊಂದಂಗವನ್ನೂ ವಿಸ್ತಾರವಾಗಿ ವಿವರಿಸಲಾಗಿದೆ.

ಶಿವಾಂಗವನ್ನು ವಿವರಿಸುತ್ತ, ಹೃದಯಾದಿ ರೂಪದಲ್ಲಿ ಅದನ್ನು ವಿಭಜಿಸಿ, ಅವುಗಳ ಸಿದ್ಧಿಕ್ರಮವನ್ನೂ, ಎರಡನೆಯ ಭೂತಾಂಗದ ಆರು ಬೀಜಗಳನ್ನೂ, ಕೂಟಾಂಗದ ನಂತರ ವಿದ್ಯಾಂಗದ ಶಿವಾಸ್ತ್ರ–ಪಾಶ.ಪತಾಸ್ತ್ರ–ಬ್ರಹ್ಮಾಸ್ತ್ರ–ಕ್ಷುರಿಕಾಸ್ತ್ರ –ವ್ಯೋಮಾಸ್ತ್ರ ಮತ್ತು ಅಘೋರಾಸ್ತ್ರಗಳನ್ನು ನಿರೂಪಿಸಿ, ಷಡ್ಬೀಜಯುತವಾದ ಶಕ್ತ್ಯಂಗವನ್ನೂ, ನಂತರ ಸಾಮಾನ್ಯಾಂಗವನ್ನೂ ನಿರೂಪಿಸಲಾಗಿದೆ.

ನಂತರ ಈ ಅಂಗಗಳ ವರ್ಣ, ಧ್ಯಾನಾರ್ಹಸ್ವರೂಪ, ವಿಭಾಗ, ವಿನಿಯೋಗ ಗಳನ್ನು ನಿರೂಪಿಸಿ, ಶಿವಾಂಗಕ್ಕೆ ಸಂಬಂಧಿಸಿದ ಹೃದಯಮಂತ್ರದ ಸ್ವರೂಪ ವಿನಿಯೋಗಗಳನ್ನೂ, ಅಸ್ತ್ರಮಂತ್ರದ ಭೇದ, ಸಂಖ್ಯೆಗಳನ್ನೂ ನಿರೂಪಿಸಲಾಗಿದೆ.

ಒಂಬತ್ತನೆಯ ಮನ್ತ್ರಜಾತ ಪಟಲ

ಮನ್ತ್ರಮಯವಾದ ಲಿಂಗದ ಉದ್ಧರಣಕ್ರಮ, ಪೀಠಸ್ವರೂಪ, ಪೀಠದ ಆರು ಅಂಗಗಳು, ಲಿಂಗದಲ್ಲಿ ಮನ್ತ್ರನ್ಯಾಸವಿಧಿ, ಆಧಾರಾದಿ ಷಟ್ಚಕ್ರಗಳಲ್ಲಿ ಶಿವಬೀಜ ಮತ್ತು ಶಕ್ತಿ ಚಕ್ರಗಳನ್ಯಾಸವಿಧಿ, ವರ್ಣಾದಿದೇವತಾಪರಿಕಲ್ಪನ, ಸ್ಥೂಲಸೂಕ್ಷ್ಮ ಪಂಚಾಕ್ಷರ ನ್ಯಾಸವಿಧಿ, ಭುವನಾದಿ ಷಡಧ್ವನ್ಯಾಸವಿಧಿಗಳನ್ನೂ ನಿರೂಪಿಸಲಾಗಿದೆ.
ಲಿಂಗವು ಮನ್ತ್ರಮಯವೆಂದು ಹೇಳಿ, 19 ವಿಧ ಮಂತ್ರನಾಮಗಳನ್ನೂ, ಮನ್ತ್ರಗಳ ಆಕಾರ ವಾಸ–ವಾಹನಗಳನ್ನು ವರ್ಣಿಸುತ್ತ, ಶಿವನ ಸರ್ವಾವಾಸತ್ವ, ಸರ್ವವಿದ್ಯಾ ಪ್ರತಿಪಾದ್ಯತ್ವಗಳನ್ನು ನಿರೂಪಿಸಿ ಅಂತಹ ಶಿವನ ಸಾಕ್ಷಾತ್ಕಾರವೇ ಪರಮಧ್ಯೇಯ ವೆಂದು ಹೇಳಲಾಗಿದೆ.

ಅವನು ಸರ್ವದೇವತಾ ಮೂಲವಾದ ಸದಾಶಿವಸ್ವರೂಪನೆಂದೂ, ಅವನಿಂದಲೇ ಮಹೇಶ್ವರ, ಬ್ರಹ್ಮ ಇವರ ಉತ್ಪತ್ತಿಯೆಂದೂ, ಅವನೇ ಸಕಲವಿಧಮಾಯಾ ಶ್ರಯನೆಂದೂ ಹೇಳಿ ಪಟಲವನ್ನು ಮುಗಿಸಲಾಗಿದೆ.

ಹತ್ತನೆಯ ಮನ್ತ್ರಕೀಲ ಪಟಲ

ಈ ಪಟಲದ ಸಂಜ್ಞೆಗೆ ಅನುಗುಣವಾದ ಮಂತ್ರಕೀಲವು ಇದರ ಕೇವಲ ಆರೂವರೆ ಶ್ಲೋಕಗಳಲ್ಲಿ ಮಾತ್ರ ಕಾಣುತ್ತದೆ. ಈ ಭಾಗದಲ್ಲಿ–ಗ್ರಾಹ್ಯ ಮತ್ತು ತ್ಯಾಜ್ಯ ಮಂತ್ರಗಳು, ಮಂತ್ರಗಳ ಉಚ್ಚಾರಣವಿಧಿ, ಮಂತ್ರಗಳ ಅನುಕೂಲ ಮತ್ತು ಪ್ರತಿಕೂಲ ಸ್ವರೂಪಗಳನ್ನು ವರ್ಣಿಸಲಾಗಿದೆ. ಅನೇಕ ಪುಸ್ತಕಗಳಲ್ಲಿ ಇಲ್ಲಿಗೇ ಗ್ರಂಥವನ್ನು ಸಮಾಪ್ತಿಗೊಳಿಸಲಾಗಿದೆ.

ಶ್ರೀ ಗುರು–ಲಿಂಗ–ಜಪಮಾಲೆ–ಶಿವಮಂತ್ರ–ಮತ್ತು ವಿಭೂತಿ ಎಂಬ ಐದು ಶಿವಮುದ್ರೆಗಳಲ್ಲೂ ಭಕ್ತಿಯಿಡಬೇಕು. ಎಂದು ಹೇಳಿ, ಶಿವನಲ್ಲಿ ಆತ್ಮಾತ್ಮೀಯ ಸಮರ್ಪಣವಿಧಿ ಇವುಗಳನ್ನು ವಿವರಿಸಲಾಗಿದೆ.

ಸಾಮಾನ್ಯ-ಮಿಶ್ರ-ಶುದ್ಧ ಮತ್ತು ವೀರ ಎಂಬ ನಾಲ್ಕು ಶೈವಭೇದಗಳನ್ನು ನಿರೂಪಿಸಿ, ಅವುಗಳಲ್ಲಿ ಸಾಮಾನ್ಯಶೈವ ಮತ್ತು ಮಿಶ್ರಶೈವರ ಲಕ್ಷಣವನ್ನು, ಮೂರನೆಯ ಶುದ್ಧಶೈವವನ್ನು ವಿವರಿಸುವಾಗ ಆತ್ಮಾರ್ಥ-ಪರಾರ್ಥವೆಂಬ ಎರಡುವಿಧ ಲಿಂಗಪೂಜಾವಿಧಿಯನ್ನು, ಶಿವಾವರಣವನ್ನು ಬಿಟ್ಟು ಬೇರೆ ಯಾವ ದೇವತಾಂತರ ಪೂಜೆಯನ್ನು ಮಾಡಬಾರದೆಂದೂ ತಿಳಿಸಲಾಗಿದೆ.

ನಾಲ್ಕನೆಯದೇ ವೀರಶೈವನಿರೂಪಣ. ಇದರಲ್ಲಿ ವಿಧವಿಧವಾದ ವೀರಶೈವ ಶಬ್ದಾರ್ಥಗಳನ್ನು ಸಾಮಾನ್ಯ, ವಿಶೇಷ ಮತ್ತು ನಿರಾಭಾರವೆಂಬ ಮೂರುವಿಧ ವೀರ ಶೈವಭೇದಗಳನ್ನು ನಿರೂಪಿಸುತ್ತ, ಲಿಂಗಧಾರಣಯೋಗ್ಯವಾದ ಸ್ಥಾನಗಳನ್ನೂ, ವೀರಶೈವರೆಲ್ಲರಿಗೂ ಅನ್ವಯಿಸುವ ಸಾಮಾನ್ಯವಿಧಿ ವಿಶೇಷವಿಧಿಗಳನ್ನೂ, ಶುದ್ಧಶೈವರ ವಿಶೇಷ ಧರ್ಮಗಳನ್ನೂ ವಿವರಿಸುತ್ತ ಗ್ರಂಥವನ್ನು ಪರಿಸಮಾಪ್ತಿಗೊಳಿಸಲಾಗಿದೆ.

ವಾತುಲ ತಂತ್ರಟೀಕೆ-ಮಲ್ಲಿಕಾರ್ಜುನ

ಈ ವಾತುಲ ತಂತ್ರಟೀಕೆಯ ಪ್ರಾರಂಭದಲ್ಲಿ

ಶ್ರೀಮಚ್ಛಬ್ದಾಖ್ಯತಂತ್ರೇಽಸ್ಮಿನ್ ಮಲ್ಲಿಕಾರ್ಜುನಧೀಮತಾ ।
ಕರ್ನಾಟಭಾಷಯಾ ಟೀಕಾ ಕ್ರಿಯತೇಽದ್ಯ ಮಯಾ ಸ್ಫುಟಮ್ ॥

ಎಂದು ಹೇಳಿ, ಮಲ್ಲಿಕಾರ್ಜುನಶಬ್ದಕ್ಕೆ ಅಮರಗುಂಡ ಮಲ್ಲಿಕಾರ್ಜುನ ಎಂದು ಹೇಳಿದ್ದಾನೆ. ಅಮರಗುಂಡ ಅಂದರೆ ಗುಬ್ಬಿ. ಗುಬ್ಬಿಯ ಮಲ್ಲಣ್ಣನೇ ವಾತುಲ ತಂತ್ರದ ಟೀಕಾಕಾರ. ಇವನ ಕಾಲ ಸುಮಾರು 1475 ಕ್ರಿ. ಶ. ಎಂದು ತಿಳಿದು ಬರುತ್ತದೆ. (ಕನ್ನಡ ಕವಿಚರಿತೆ ಭಾಗ 2 ಪು. 60. ಕನ್ನಡಸಾಹಿತ್ಯ ಪರಿಷತ್, ಬೆಂಗಳೂರು). ಇವನ ಮತ್ತೊಂದು ಗ್ರಂಥ ಗಣಭಾಷ್ಯರತ್ನಮಾಲೆ. ಇವನು ವೀರಶೈವಾಮೃತಮಹಾಪುರಾಣವನ್ನು ಬರೆದ ಗುಬ್ಬಿಯ ಮಲ್ಲಣಾರ್ಯನ ಪಿತಾಮಹ. ಈ ಅಮರಗುಂಡ ಮಲ್ಲಿಕಾರ್ಜುನನು ತೋಂಟದ ಸಿದ್ಧಲಿಂಗಯತಿಯ ಶಿಷ್ಯನಾಗಿದ್ದಂತೆ ಶಾಂತೇಶನ (1561) ಸಿದ್ಧೇಶಪುರಾಣದಿಂದ ತಿಳಿದುಬರುತ್ತದೆ.

ಆಗಮಗಳ ರಹಸ್ಯಾರ್ಥ ಬಹುಮಟ್ಟಿಗೆ ಕಷ್ಟವಾದುದರಿಂದ ಅಮರಗುಂಡ ಮಲ್ಲಿಕಾರ್ಜುನನು ಹದಿನೈದನೆಯ ಶತಮಾನದಲ್ಲಿ ಬರೆದ ಕನ್ನಡಟೀಕೆಯನ್ನು ಆಧಾರ ವಾಗಿಟ್ಟುಕೊಂಡು ಶ್ಲೋಕಗಳ ಭಾವಾರ್ಥವನ್ನು ಕನ್ನಡದಲ್ಲಿ ಸಹೃದಯ ವಾಚಕರಿಗೆ ಕೊಡಲಾಗಿದೆ. ಈ ವಾತುಲಾಗಮಕ್ಕೆ ಸಂಸ್ಕೃತ ವ್ಯಾಖ್ಯಾನವಿರುವ ಹಸ್ತಪ್ರತಿ ಲಭ್ಯವಿದೆ. ಆದರೆ ಗ್ರಂಥದ ಐದನೆಯ ಒಂದು ಭಾಗಕ್ಕೆ ಮಾತ್ರ ಸಂಸ್ಕೃತದಲ್ಲಿ ವ್ಯಾಖ್ಯಾನವಿದೆ. ಉಳಿದ ಐದನೆಯ ನಾಲ್ಕು ಭಾಗಕ್ಕೂ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದು ಅದನ್ನು ಮೂಲಗ್ರಂಥದೊಡನೆ ಎರಡು ಸಂಪುಟಗಳಲ್ಲಿ ಪ್ರಕಟಿಸ ಲಾಗಿದೆ.

ಅನುಬಂಧಭಾಗ

ಈ ಪುಸ್ತಕದಲ್ಲಿ--ವಾತುಲಶುದ್ಧಾಗಮ ಮುಗಿದ ನಂತರ ಈ ಆಗಮದ ಕ್ರಿಯಾದಿಪಾದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಮಾತೃಕೆಗಳಲ್ಲಿ ಕಂಡುಬಂದ ಹಲವು ಅಧ್ಯಾಯಗಳನ್ನು ಮುದ್ರಿಸಲಾಗಿದೆ.

ಇವೆಲ್ಲದರ ಮಾತೃಕಾಪರಿಚಯ

1. ವಾತುಲಶುದ್ಧಾಗಮದ ಮೂಲಮಾತೃಕೆ, ಸಂಜ್ಞೆ, ಪುಸ್ತಕ ದೊರಕಿದ ಸ್ಥಳ ಇತ್ಯಾದಿ ವಿವರಗಳಿಗೆ ಮುಂದಣ ಪುಟ ನೋಡಿ.

ಕ್ರಮ ಸಂಖ್ಯೆ	ಮೂಲ ಮಾತೃಕೆಯ ಹೆಸರು	ಸಂಜ್ಞೆ	ಪುಸ್ತಕದೊರಕಿದ ಸ್ಥಳ	ಅಲ್ಲಿನ ಗುರ್ತಿನ ನಂಬರು	ಲಿಪಿ	ಪುಸ್ತಕ ಸ್ವರೂಪ (Memorial)	ಮುದ್ರಿತವೇ ? ಅಮುದ್ರಿತವೇ ?
1	2	3	4	5	6	7	8
೧	ವಾತುಲಾಗಮ ಕನ್ನಡ ವ್ಯಾಖ್ಯಾ ಸಹಿತ	ಕ	—	—	ಕನ್ನಡ	ಕಾಗದ	ಅಮುದ್ರಿತ
೨	ವಾತುಲಾಖ್ಯ ಶುದ್ಧ ತಂತ್ರಂ	ಖ	ಹುಬ್ಬಳ್ಳಿ ಪ್ರಕಟಣೆ	6	ಕನ್ನಡ		ಮುದ್ರಿತ
೩	ಆಗಮರಹಸ್ಯಂ ವಾತುಲಶುದ್ಧಾಖ್ಯಂ	ಗ	ಆಗಮಿಕ ಕೃಷ್ಣ ದೀಕ್ಷಿತರು		ದೇವನಾಗರಿ		ಮುದ್ರಿತ
೪	ವಾತುಲ ಶುದ್ಧಾಖ್ಯ ಕನ್ನಡ ವ್ಯಾಖ್ಯಾ ಸಹಿತಂ	ಘ	I. K. S.	K 1149/1- 2	ಕನ್ನಡ	ತಾಳಪತ್ರ	ಅಮುದ್ರಿತ
೫	ಆಗಮ ರಹಸ್ಯಂ ವಾತುಲ ಶುದ್ಧಾಖ್ಯಂ	ಚ	ಆಗಮಿಕ ಸುಂದರ ದೀಕ್ಷಿತ	—	ತೆಲುಗು		ಮುದ್ರಿತ
೬	ವಾತುಲಾಗಮಃ ಕನ್ನಡ ವ್ಯಾಖ್ಯಾ ಸಹಿತ	ಛ	—	1323	ಕನ್ನಡ	ತಾಳಪತ್ರ	ಅಮುದ್ರಿತ
೭	ವಾತುಲ ಶುದ್ಧಾಖ್ಯಂ ಸವ್ಯಾಖ್ಯ	ಜ	ಶಿವಜ್ಞಾನ ಬೋಧ ಪ್ರೆಸ್ ಮದರಾಸು		ಗ್ರಂಥ		ಮುದ್ರಿತ
೮	ವಾತುಲ ಶುದ್ಧಾಖ್ಯಂ ಮೂಲಮಾತ್ರ	ಝ	ಶಿವಜ್ಞಾನ ಬೋಧ ಪ್ರೆಸ್. ಮದರಾಸು		ಗ್ರಂಥ		ಮುದ್ರಿತ

1	2	3	4	5	6	7	8
೯	ವಾತುಲಾಗಮಃ ಕನ್ನಡವ್ಯಾಖ್ಯಾನಯುತ	ಟ	O.R.I. ಮೈಸೂರು	7361-7362	ಕನ್ನಡ	ತಾಳಪತ್ರ	ಅಮುದ್ರಿತ
೧೦	ವಾತುಲತಂತ್ರಂ ಶಿವಯೋಗ ಪ್ರದೀಪಿಕೆ ಯೆಂಬ ಕನ್ನಡ ವ್ಯಾಖ್ಯಾನಯುತ	ಠ	O.R.I. ಮೈಸೂರು	8901-3	ಕನ್ನಡ	ತಾಳಪತ್ರ	ಅಮುದ್ರಿತ
೧೧	ವಾತುಲ ಶುದ್ಧಾಖ್ಯತಂತ್ರಂ	ಡ	O.R.I. ಮೈಸೂರು	P. 36	ಗ್ರಂಥಲಿಪಿ	ತಾಳಪತ್ರ	ಅಮುದ್ರಿತ
೧೨	ವಾತುಲತಂತ್ರಂ ಕನ್ನಡವ್ಯಾಖ್ಯಾನಯುತ	ಢ	O.R.I. ಮೈಸೂರು	7345-50	ಕನ್ನಡ	ತಾಳಪತ್ರ	ಅಮುದ್ರಿತ
೧೩	ವಾತುಲಾಗಮಃ ಕನ್ನಡವಾಖ್ಯಾನಯುತ	ತ	O.R.I. ಮೈಸೂರು	5088	ಕನ್ನಡ	ತಾಳಪತ್ರ	ಅಮುದ್ರಿತ
೧೪	ವಾತುಲಾಗಮ ಕನ್ನಡವ್ಯಾಖ್ಯಾನಯುತ	ಥ	O.R.I. ಮೈಸೂರು	5078	ನಾಗರಿ	ತಾಳಪತ್ರ	ಅಮುದ್ರಿತ
೧೫	ವಾತುಲಶುದ್ಧಾಖ್ಯತಂತ್ರಂ ಕನ್ನಡ ವ್ಯಾಖ್ಯಾಸಹಿತ	ದ	I. K. S.	K 1145/4	ಕನ್ನಡ	ತಾಳಪತ್ರ	ಅಮುದ್ರಿತ
೧೬	ವಾತುಲತಂತ್ರಂ	ಧ	Copied from D.O.M.L.	D 5477	ದೇವನಾಗರಿ	ಕಾಗದ	ಅಮುದ್ರಿತ
೧೭	ವಾತುಲಾಗಮಃ	ಪ	O.RI. ಮೈಸೂರು	S.B. 1132	ದೇವನಾಗರಿ	ಕಾಗದ	ತಾಳಪತ್ರ
೧೮	ವಾತುಲಾಗಮಃ	ಫ	O.RI. ಮೈಸೂರು	4151	ಗ್ರಂಥಲಿಪಿ	ತಾಳಪತ್ರ	ಅಮುದ್ರಿತ
೧೯	ವಾತುಲಾಗಮಃ	ಬ	O.RI. ಮೈಸೂರು	924	ಕನ್ನಡ	ತಾಳಪತ್ರ	ಅಮುದ್ರಿತ
೨೦	ವಾತುಲಾಗಮಃ ವ್ಯಾಖ್ಯಾನಯುತ	ಭ	O.RI. ಮೈಸೂರು	3720	ಗ್ರಂಥಲಿಪಿ	ತಾಳಪತ್ರ	ಅಮುದ್ರಿತ
೨೧	ವಾತುಲಾಗಮಃ ಮೂಲಮಾತ್ರ	ಯ	O.R.I. ಮೈಸೂರು	4045	ಗ್ರಂಥಲಿಪಿ	ತಾಳಪತ್ರ	ಅಮುದ್ರಿತ

ಎಂಬ ಒಟ್ಟು 21 (ಇಪ್ಪತ್ತೊಂದು) ಮಾತೃಕೆಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಇವುಗಳ ವಿವರ—ವಾತುಲಶುದ್ಧಾಗಮದ (ದೇವನಾಗರೀ ಲಿಪಿಯಲ್ಲಿ ಮುದ್ರಿತ) 2ನೇ ಭಾಗದಲ್ಲಿಯೂ ಕೊಡಲಾಗಿದೆ.

2.	ಸರ್ವಪ್ರಾಯಶ್ಚಿತ್ತ ವಿಧಿಪಟಲ	ಓ. ಆರ್. ಐ. ಪಿ. 4996
3.	ಪುಣ್ಯಾಹವಿಧಿ	
4.	ಪಂಚಗವ್ಯವಿಧಿ	
5.	ಚರ್ಯಾಪಾದ	ಓ. ಆರ್. ಐ. ಪಿ. 4045
6.	ಶಿವೋತ್ಸವವಿಧಿ	ಓ. ಆರ್. ಐ. ಪಿ. 174
7.	ಶಿವಲಿಂಗಪ್ರತಿಷ್ಠಾವಿಧಿ	ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಪ್ರಾಧ್ಯಾಪಕ ಶ್ರೀ ವಿದ್ವಾನ್ ಸೀತಾರಾಮ ಸೋಮಯಾಜಿಗಳ ಹಸ್ತಪ್ರತಿ.
8.	ಏಕರಾತ್ರವಿಧಾನಂ	
9.	ತ್ರಿರಾತ್ರ ಕರ್ಮವಿಧಾನಂ	
10.	ಪಂಚರಾತ್ರವಿಧಿ	
11.	ಸಪ್ತರಾತ್ರವಿಧಿ	
12.	ನವರಾತ್ರೋತ್ಸವ ಕರ್ಮವಿವೃತಿ ವಿಧಾನಂ	

ಈ ಕೃತಿಯ ನ್ಯೂನತೆಗಳನ್ನು ಸಜ್ಜನರು ದಯೆಯಿಟ್ಟು ತಿಳಿಸಿದರೆ, ಮುಂದಣ ಮುದ್ರಣದಲ್ಲಿ ಸರಿಪಡಿಸಲಾಗುವುದು.

ವಾತುಲ ಶುದ್ಧಾಗಮವನ್ನು ಅನೇಕ ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ, ಕನ್ನಡ ಭಾವಾರ್ಥದೊಡನೆ ಸಹೃದಯ ವಾಚಕರಿಗೆ ಸಂತಸದಿಂದ ಸಮರ್ಪಿಸುತ್ತೇವೆ.

ಎಚ್. ಪಿ. ಮಲ್ಲೇದೇವರು

ವಾತುಲ ಶುದ್ಧಾಗಮದ

ವಿಷಯಸೂಚೀ

—o—

ವಾತುಲಶುದ್ಧಾಗಮ

(ಕನ್ನಡಾನುವಾದಸಹಿತ)

ವಾತುಲಶುದ್ಧಾಗಮ

—∞∞—

೧. ತತ್ತ್ವಭೇದ ಪಟಲ

[1]ವಂದೇ ಶಂಕರಮಾಪ್ತಮಾದ್ಯ[2]ಮಮಲಂ
ತೇಜೋನಿಧಿಂ ಶಾಶ್ವತಮ್
ಬಿಂದುಕ್ಷೋಭಕರಂ ಪರಾತ್ಪರತರಂ
ನಾದಾತ್ಮಕಂ ಬೀಜಿನಮ್[3]
ಸರ್ವಾಂತಸ್ಥಮನೇಕಲೋಕಜನಕಂ
ಸೋಮಂ ಜಗತ್ಪ್ರೇರಕಂ
ಲಿಂಗಸ್ಥಂ ಬಹುಮಂತ್ರಮಂತ್ರಿತ[4]-
ಮಹಾಲಿಂಗಂ ಲಯಾಖ್ಯಂ ಧ್ರುವಮ್ ॥ ೧ ॥

ಯತ್[5] ಬ್ರಹ್ಮ[6] ಪ್ರವದನ್ತಿ ದಿವ್ಯಮತಯಃ
ಸರ್ವಾಂತರಸ್ಥಂ ಶಿವಂ

ಆಪ್ತನೂ, ಆದ್ಯನೂ, ಪರಿಶುದ್ಧನೂ, ತೇಜೋರಾಶಿಯೂ, ಶಾಶ್ವತನೂ, ಬಿಂದುಕ್ಷೋಭವನ್ನುಂಟುಮಾಡುವವನೂ, ಪರಾತ್ಪರನೂ, ನಾದಸ್ವರೂಪಿಯೂ, ಬೀಜಾಕ್ಷರಸ್ವರೂಪನೂ, ಸರ್ವಾಂತರ್ಯಾಮಿಯೂ, ಸಕಲಲೋಕಗಳಿಗೆ ಕಾರಣನೂ, ಉಮಾಸಹಿತನೂ, ಜಗತ್ಪ್ರೇರಕನೂ, ಲಿಂಗಸ್ವರೂಪಿಯೂ, ಮಂತ್ರಗಳಿಂದ ಪ್ರತಿಪಾದ್ಯನಾದ ಮಹಾಲಿಂಗಸ್ವರೂಪನೂ, ಲಯಾಧಾರನೂ, ನಿರ್ವಿಕಾರನೂ ಆದ ಶಂಕರನನ್ನು ವಂದಿಸುತ್ತೇನೆ. ॥ ೧ ॥

ಯಾವ ಬ್ರಹ್ಮವನ್ನು ಅನುಭಾವಿಗಳು ಸರ್ವಾಂತರ್ಯಾಮಿಯಾದ ಶಿವತತ್ತ್ವವೆಂದು ಹೇಳುತ್ತಾರೋ, ಯಾವುದರಿಂದ ಈ ಸಮಸ್ತ ತತ್ತ್ವಗಳ ಸಮೂಹವೂ ಉಗಮ

---

[1] ಈ ಮಂಗಳಪದ್ಯವು ಕ, ಗ, ಘ, ಚ, ಛ, ಟ, ಠ, ಢ, ತ, ಥ, ದ, ಧ. ಪುಸ್ತಕಗಳಲ್ಲಿ ಕಂಡುಬರುತ್ತದೆ

[2] ಮಾತ್ಮಮಧ್ಯ—ಕ, ಗ, ಚ, ಛ, ಠ, ಢ, ತ, ದ, ಧ. ಮಾಪ್ತಮಧ್ಯ—ಕ, ಗ.

[3] ಬೀಜನಂ—ಕ, ಛ, ಢ, ದ.

[4] ತಂತ್ರಿತ-ಘ.

[5] ಈ ಮಂಗಳಪದ್ಯ, ಕ, ಥ, ಬ ಪುಸ್ತಕಗಳಲ್ಲಿ ಕಂಡುಬರುತ್ತದೆ.

[6] ಯಂ ಬ್ರಹ್ಮ—ಢ.

ಯಸ್ಮಾಜ್ಜಾತಮನೇಕತತ್ತ್ವನಿಚಯಂ[1]
ಯಸ್ಮಿನ್ ಪುನರ್ಲೀಯತೇ ।
ಯೇನೇದಂ ಪ್ರವಿಚಿತ್ರಿತಂ[2] ಬಹುವಿಧಂ[3]
ವಿಶ್ವಂ ಜಗತ್ ಸ್ಥೀಯತೇ
ತತ್ ತತ್ತ್ವಂ ಸತತಂ ಭಜೇಽಮೃತಮಯಂ
ತೇಜೋಮಯಂ ಚಿನ್ಮಯಮ್ ॥ ೨ ॥

[4]ಕೈಲಾಸಶಿಖರೇ ರಮ್ಯೇ
ನಾನಾರತ್ನೋಪಶೋಭಿತೇ[5]
ನಾನಾದ್ರುಮಲತಾಕೀರ್ಣೇ
ನಾನಾಪುಷ್ಪೋಪಶೋಭಿತೇ ॥ ॥ ೩ ॥

ತತ್ರ ಸಿಂಹಾಸನಾಸೀನಂ
ಶ್ರೀಕಂಠಂ[6] ತ್ರಿದಶೇಶ್ವರಮ್ ।
ಪ್ರಣಮ್ಯ ಚರಣೌ ತಸ್ಯ
ಸ್ಕಂದೋ ವಚನಮಬ್ರವೀತ್ ॥ ॥ ೪ ॥

ಹೊಂದುತ್ತದೆಯೋ, ಯಾವುದರಲ್ಲಿ ಮತ್ತೆ ಆ ತತ್ತ್ವಸಮೂಹವೆಲ್ಲವೂ ಲೀನವಾಗುತ್ತದೆಯೋ, ನಾನಾಪ್ರಕಾರವಾಗಿ ರೂಪುಗೊಂಡ ಈ ಅಖಿಲ ಜಗತ್ತೂ ಯಾವುದರಿಂದ ಸ್ಥಿತಿ ಹೊಂದಿದೆಯೋ, ಅಂತಹ ನಾಶರಹಿತವೂ ತೇಜೋಮಯವೂ ಜ್ಞಾನಸ್ವರೂಪವೂ ಆದ ಶಿವತತ್ತ್ವವನ್ನು ಅನವರತವೂ ಭಜಿಸುತ್ತೇನೆ. ॥ ೨ ॥

ರಮಣೀಯವಾದ, ವಿವಿಧ ರತ್ನಗಳಿಂದ ಶೋಭಿಸುವ, ನಾನಾಬಗೆಯ ತರುಲತೆಗಳಿಂದ ಅಲ್ಲಲ್ಲಿ ವ್ಯಾಪಿಸಿರುವ, ನಾನಾಜಾತಿಯ ಹೂಗಳಿಂದಲಂಕೃತವಾದ ಕೈಲಾಸ ಶಿಖರದಲ್ಲಿ— ॥ ೩ ॥

—ಸಿಂಹಾಸನದಲ್ಲಿ ಮಂಡಿಸಿದ್ದ ದೇವದೇವನಾದ ಶಿವನನ್ನು ನೋಡಿ, ಷಣ್ಮುಖನು ಅವನ ಪಾದಗಳಿಗಭಿವಂದಿಸಿ ಈ ಮಾತನ್ನು ವಿಜ್ಞಾಪಿಸಿಕೊಂಡನು. ॥ ೪ ॥

---

1 ನಿಚಯತತ್ತ್ವಂ–ಬ.
2 ಪ್ರತಿಚಿತ್ರಿತಂ–ಕ (ಪಾ)
3 ಬಹುತರಂ–ಬ, ಕ, (ಪಾ)
4 ಇಲ್ಲಿಂದ ೫ ಪದ್ಯಗಳು—ಕ, ಘ, ಛ, ಟ, ಠ, ಥ, ತ, ದ, ಬ. ಪುಸ್ತಕಗಳಲ್ಲಿ ಇಲ್ಲ.
5 ರತ್ನವಿರಾಜಿತೇ––ಪ.
6 ಮೃಕಂಡುಂ—ಪ.

ದೇವದೇವ! ಜಗನ್ನಾಥ!
ಸರ್ವಜ್ಞ ! ತ್ರಿಪುರಾಂತಕ!
[1]ಸ್ಥಿತ್ಯುತ್ಪತ್ತಿಲಯೇಶಾನ!
ಪ್ರಣತಾರ್ತಿಹರ! ಪ್ರಭೋ! ॥ ೫ ॥

[2]ಸರ್ವಲೋಕಹಿತಾರ್ಥಾಯ
ಯೋಗಿನಾಂ ರಕ್ಷಣಾಯ ಚ।
ಮಂತ್ರಂ ತಂತ್ರಂ[3] ಪುರಾ ದೇವ![4]
ತ್ವಯಾ ಪ್ರೋಕ್ತಂ ತು ವಿಸ್ತರಾತ್ ॥ ೬ ॥

ಪುಂಸಾಂ ಅನುಗ್ರಹಾರ್ಥಾಯ
ಜ್ಞಾನಿನಾಂ ಮುಕ್ತಿಕಾರಣಮ್ ।
ಶಿವಜ್ಞಾನಂ ಪರಂ ಗುಹ್ಯಂ
ಸಂಕ್ಷೇಪಾತ್ ವದ ಮೇ ಪ್ರಭೋ ॥ ॥ ೭ ॥

ಈಶ್ವರ ಉವಾಚ :—
ಅಥಾತಃ ಸಂಪ್ರವಕ್ಷ್ಯಾಮಿ
ಯತ್ ತ್ವಯಾ ಪರಿಚೋದಿತಮ್ ।

ದೇವದೇವನೂ, ವಿಶ್ವಪ್ರಭುವೂ, ಸರ್ವಜ್ಞನೂ, ತ್ರಿಪುರಾರಿಯೂ, ಸೃಷ್ಟಿ ಸ್ಥಿತಿಲಯುಗಳಿಗೆ ಕರ್ತೃವೂ, ಶರಣಾಗತರ ಬಾಧೆಯನ್ನು ಪರಿಹರಿಸುವವನೂ ಆದ ಪ್ರಭುವೇ!— ॥ ೫ ॥

—ಸರ್ವಲೋಕಗಳ ಕಲ್ಯಾಣ ಮತ್ತು ಯೋಗಿಗಳ ರಕ್ಷಣೆಗಾಗಿ, ನೀನು ಹಿಂದೆ ಮಂತ್ರ ಮತ್ತು ತಂತ್ರಗಳನ್ನು ವಿಸ್ತಾರವಾಗಿ ಉಪದೇಶಿಸಿದ್ದೆ ॥ ೬ ॥

ಸರ್ವೇಶ್ವರನೇ! ಮಾನವರ ಅನುಗ್ರಹಕ್ಕಾಗಿ ಜ್ಞಾನಿಗಳ ಮುಕ್ತಿಗೆ ಕಾರಣವೂ ಶ್ರೇಷ್ಠವೂ ನಿಗೂಢವೂ ಆದ ಶಿವಜ್ಞಾನವನ್ನು ಸಂಕ್ಷೇಪವಾಗಿ ನನಗೆ ಹೇಳು ॥ ೭ ॥

ಷಣ್ಮುಖನೇ! 'ವಿಸ್ತಾರವಾಗಿ ನಾನು ಹೇಳಿದ್ದ ಶಿವಜ್ಞಾನತತ್ತ್ವವನ್ನು'

---

[1] ಈ ಅರ್ಧಪದ್ಯವು 'ಡ' ಪುಸ್ತಕದಲ್ಲಿಲ್ಲ.
[2] ಈ ಅರ್ಧಪದ್ಯವು 'ಡ' ಪುಸ್ತಕದಲ್ಲಿಲ್ಲ.
[3] ಮಂತ್ರತಂತ್ರಂ—ಜ, ಝ.
[4] ಮಂತ್ರತಂತ್ರಕ್ರಿಯಾರೂಪಂ — ಥ.
ಮಂತ್ರಂ ತಂತ್ರಂ ಮಹಾದೇವ—ಖ, ಝ.

ತತ್ ಸರ್ವಂ ಹಿ ಸಮಾಸೇನ[1]
ಶ್ರೂಯತಾಮಿಹ[2] ಷಣ್ಮುಖ ! ॥ ೮ ॥
ಸಾಧಕಾನಾಂ ಹಿತಾರ್ಥಾಯ
ಭುಕ್ತಿಮುಕ್ತಿಪ್ರದಾಯಕಮ್[3] ।
ವಾತುಲಾಖ್ಯೇ[4] ಮಹಾತಂತ್ರೇ
ದಧ್ನೋ ಘೃತಮಿವೋದ್ಧೃತಮ್[5] ॥ ॥ ೯ ॥
ಸಾರಾತ್ ಸಾರಂ ಸಮುದ್ಧೃತ್ಯ
ಶುದ್ಧಾಖ್ಯಂ ತಂತ್ರಮುತ್ತಮಮ್[6] ।
ಸಹಸ್ರಗ್ರಂಥಸಂಯುಕ್ತಂ
ಸರ್ವಜ್ಞಾನಸಮುಚ್ಚಯಮ್ ॥ ೧೦ ॥
[7]ಗುಹ್ಯಾದ್ಗುಹ್ಯತಮಂ ತಂತ್ರಂ
ಸರ್ವಶಾಸ್ತ್ರಸಮುದ್ಧೃತಮ್[8] ।

ನೀನು ತಿಳಿಯಬಯಸಿದುದರಿಂದ ಅದನ್ನು ಸಂಗ್ರಹವಾಗಿ ಹೇಳುವೆನು, ಕೇಳು. ॥ ೮ ॥

ಶಿವಸಾಧಕರ ಹಿತಕ್ಕಾಗಿ, ಮೊಸರಿನಿಂದ ತುಪ್ಪವನ್ನು ತೆಗೆಯುವಂತೆ ವಾತುಲ ಮಹಾತಂತ್ರದಿಂದ ತೆಗೆದು ಸಂಗ್ರಹಿಸಿದ, ಮತ್ತು ಭೋಗಮೋಕ್ಷಗಳನ್ನು ಕೊಡುವ— ॥ ೯ ॥

—ಅತ್ಯಂತ ಸಾರವೂ ಸಾವಿರ ಶ್ಲೋಕಗಳನ್ನುಳ್ಳದ್ದೂ ಸರ್ವಜ್ಞಾನಭಂಡಾರವೂ ಶ್ರೇಷ್ಠವೂ ಆದ ಶುದ್ಧವೆಂಬ ಈ ತಂತ್ರವನ್ನು ಹೇಳುವೆನು. ॥ ೧೦ ॥

ಈ ತಂತ್ರವು ರಹಸ್ಯಕ್ಕಿಂತ ರಹಸ್ಯವೂ, ಸರ್ವಶಾಸ್ತ್ರಗಳಿಂದ ಉದ್ಧೃತವೂ,

---

[1] ಮಹಾಸೇನ—ಫ

[2] ಮಸಿ—ಕ, ಗ, ಘ, ಚ, ಛ, ಝ, ಟ. ಠ. ಡ, ಢ, ತ, ಥ, ದ, ಧ, ಬ, ಭ. ಮಿತಿ—ಫ.

[3] ಪ್ರದಾಯ ಚ—ಜ.

[4] ವಾತೂಲಾಖ್ಯೇ—ಕ, ಘ, ಛ, ತ, ಢ.

[5] ನವನೀತಮಿವೋದ್ಧೃತಂ—ಕ, ಘ, ಛ, ಟ, ಠ, ಡ, ಢ, ತ, ದ, ಬ.

[6] ಮಂತ್ರಮುತ್ತಮಂ—ಛ.
ತಂತ್ರಸಂಜ್ಞಕಂ—ಕ, ಘ, ಛ, ಟ, ಠ, ಡ.
ತಂತ್ರಸಂಜ್ಞಿಕಂ—ತ, ದ, ಢ, ಸ, ಬ.

[7] ಇಲ್ಲಿಂದ ಮುಂದೆ 'ಅತಿದುರ್ಲಭಂ' ವರೆಗೆ—'ಫ' ಪುಸ್ತಕದಲ್ಲಿಲ್ಲ.

[8] ಸಮುಚ್ಚಯಂ—ಕ, ಖ, ಘ, ಚ, ಛ, ಡ, ಢ, ತ, ದ, ಪ, ಬ.
ಸಮನ್ವಿತಂ—ಧ.

ಸೂಕ್ಷ್ಮಾತ್ ಸೂಕ್ಷ್ಮತರಂ ಸೂಕ್ಷ್ಮಂ[1]
ಸಾರಾತ್ ಸಾರಂ ಮಹೋದಯಮ್ ‖ ‖ ೧೧ ‖

ಅಪ್ರಕಾಶ್ಯಮಿದಂ ತಂತ್ರಂ
ರಹಸ್ಯಂ ಅತಿದುರ್ಲಭಮ್[2] ।
ಶಿವಜ್ಞಾನಂ ಮಹಾಸೇನ[3] !
ಸಂಕ್ಷೇಪಾತ್ ವಕ್ಷ್ಯತೇಽಧುನಾ ‖ ‖ ೧೨ ‖

*ಶಿವಸ್ಯ ಪುರುಷಾಖ್ಯಸ್ಯ
ದರ್ಶನಂ ಶೃಣು ಷಣ್ಮುಖ ।
ಪ್ರಥಮಃ ತತ್ತ್ವಭೇದಶ್ಚ[4]
ದ್ವಿತೀಯೋ ವರ್ಣಭೇದಕಃ । ‖ ೧೩ ‖

ತೃತೀಯಃ ಚಕ್ರಭೇದಶ್ಚ[5]
ಚತುರ್ಥೋ ವರ್ಗಭೇದಕಃ[6] ।

ಸೂಕ್ಷ್ಮಕ್ಕಿಂತ ಸೂಕ್ಷ್ಮವೂ, ಸಂಗ್ರಹರೂಪವೂ, ಸಾರಕ್ಕಿಂತ ಸಾರವೂ, ಮೋಕ್ಷ ಜ್ಞಾನನಿಧಿಯೂ ಆಗಿದೆ. ‖ ೧೧ ‖

ಮಹಾಸೇನನೇ ! ಶಿವಭಕ್ತಿಪರಾಙ್ಮುಖರಿಗೆ ಅಪ್ರಕಾಶ್ಯವೂ, ಅಮೂಲ್ಯವೂ, ಪರಮದುರ್ಲಭವೂ ಶಿವತತ್ತ್ವಬೋಧಕವೂ ಆದ ಈ ತಂತ್ರವನ್ನು ಈಗ ನಾನು ಹೇಳುತ್ತೇನೆ. ‖ ೧೨ ‖

ಷಣ್ಮುಖನೇ ! ಪುರುಷನೆಂದು ಪ್ರಸಿದ್ಧವಾದ ಶಿವತತ್ತ್ವವನ್ನು ಕೇಳು. ಈ ಶಾಸ್ತ್ರದಲ್ಲಿ—ಒಂದನೆಯ ಪಟಲವು ತತ್ತ್ವಭೇದ, ಎರಡನೆಯದು ವರ್ಣಭೇದ,
‖ ೧೩ ‖

---

[1] ಜೈವ—ಜ, ಝ. ಫ, ಭ.
[2] ರಹಸ್ಯಂ ಪರದುರ್ಲಭಂ—ಜ.
ಗುಹ್ಯಂ ಪರಮದುರ್ಲಭಂ—ಥ, ದ, ಧ.
[3] ಶಿವಜ್ಞಾನಮಹಾತಂತ್ರಂ—ಕ, ಘ, ಛ, ಟ, ಠ, ಡ, ಢ, ದ, ಪ, ಬ.
* ಈ ಅರ್ಧಪದ್ಯ—ಕ. ಪುಸ್ತಕದಲ್ಲಿಲ್ಲ
[4] ಪ್ರಥಮಂ ತತ್ತ್ವಭೇದಂ ತು—ಗ, ಚ, ಜ.
[5] ತೃತೀಯಂ ಚಕ್ರಭೇದಂ ತು—ಗ, ಚ, ಜ.
[6] ಚತುರ್ಥಂ ವರ್ಗಭೇದಕಂ—ಗ, ಚ, ಜ.

ಪಂಚಮೋ ಮಂತ್ರಭೇದಸ್ತು[1]
ಷಷ್ಠಃ ಪ್ರಣವ ಉಚ್ಯತೇ[2] । ॥ ೧೪ ॥

ಸಪ್ತಮೋ ಬ್ರಹ್ಮಭೇದಃ ಸ್ಯಾತ್[3]
ಅಙ್ಗಭೇಧದಸ್ತು ಚಾಷ್ಟಮಃ[4] ।
ನವಮೋ[5] ಮನ್ತ್ರಜಾತಂ ತು
ದಶಮಃ ಕೀಲಮುಚ್ಯತೇ[6] ॥ ॥ ೧೫ ॥

ಏತೇ ವೈ ದಶಭೇದಾಸ್ತು[7]
ಕೀರ್ತಿತಾಶ್ಚ[8] ಕ್ರಮೇಣ ವೈ[9] ।
ಏತೇಷಾಮೇವ ಪೂರ್ವಂ ತು
ತತ್ತ್ವಭೇದಂ ವದಾಮ್ಯಹಮ್ ॥ ॥ ೧೬ ॥

ಮೂರನೆಯದು ಚಕ್ರಭೇದ, ನಾಲ್ಕನೆಯದು ವರ್ಗಭೇದ, ಐದನೆಯದು ಮಂತ್ರಭೇದ, ಆರನೆಯದು ಪ್ರಣವಭೇದ, ॥ ೧೪ ॥

ಏಳನೆಯದು ಬ್ರಹ್ಮಭೇದ, ಎಂಟನೆಯದು ಅಂಗಭೇದ, ಒಂಭತ್ತನೆಯದು ಮಂತ್ರಜಾತ, ಹತ್ತನೆಯದು ಮಂತ್ರಕೀಲ. ॥ ೧೫ ॥

ಈ ಹತ್ತು ಭೇದಗಳನ್ನು ಕ್ರಮವಾಗಿ ನಿರೂಪಿಸುವೆನು. ಇವುಗಳಲ್ಲಿ ಮೊದಲು ತತ್ತ್ವಭೇದವನ್ನು ಹೇಳುತ್ತೇನೆ—

---

[1] ಪಂಚಮಂ ಮಂತ್ರಭೇದಂ ತು—ಗ, ಚ, ಜ.
[2] ಷಷ್ಠಂ ಪ್ರಣವಮುಚ್ಯತೇ—ಕ, ಗ, ಚ, ಜ.
[3] ಸಪ್ತಮಂ ಬ್ರಹ್ಮಭೇದಂ ಸ್ಯಾತ್—ಕ, ಗ, ಚ, ಜ, ಝ. ಭೇದಸ್ತು-ಕ.
[4] ಅಂಗಭೇದಮಥಾಷ್ಟಕಂ—ಗ, ಚ, ಜ.
[5] ನವಮಂ—ಕ, ಗ, ಘ. ಚ, ಛ. ಡ, ಢ.
[6] ದಶಮಂ ಕೀಲಕಂ ತಥಾ—ಕ, ಗ, ಘ, ಚ. ಛ, ಡ, ಢ.
[7] ಏತಾನಿ ದಶಭೇದಾನಿ—ಗ, ಚ, ಜ.
[8] ಕೀರ್ತಿತಾನಿ—ಗ, ಚ, ಜ.
[9] ಕ್ರಮೇಣ ತು—ಕ, ಗ, ಚ, ಛ, ಜ, ಟ, ಠ, ಡ, ಢ, ತ, ಥ.

ತತ್ತ್ವಂ ತು[1] ತ್ರಿವಿಧಂ ಜ್ಞೇಯಂ
 ತಸ್ಯ ಭೇದಂ ಶೃಣುಷ್ವ ಚ[2] ।
ಶಿವಃ ಸದಾಶಿವಶ್ಚೈವ
 ಮಹೇಶಶ್ಚ ತ್ರಿಧಾ ಸ್ಮೃತಮ್[3] ॥ ॥ ೧೭ ॥

ಶಿವತತ್ತ್ವಂ ಮಹಾಸೇನ !
 ನಿಷ್ಕಲಂ ತ್ವಿತಿ[4] ಕೀರ್ತಿತಮ್ ।
ಸಕಲೋ ನಿಷ್ಕಲಶ್ಚೈವ
 ಸದಾಶಿವ ಇಹೋಚ್ಯತೇ[5] ॥ ॥ ೧೮ ॥

ಮಹೇಶಂ ಸಕಲಂ ವಿದ್ಯಾತ್[6]
 ತ್ರಿವಿಧಾಸ್ತೇ ಭವಂತಿ ವೈ ।
ಶಿವಮೇಕಂ ವಿಜಾನೀಯಾತ್
 ಸಾದಾಖ್ಯಂ ಪಂಚಧಾ ಭವೇತ್ । ॥ ೧೯ ॥

ಷಣ್ಮುಖನೇ ! ಕೇಳು—ತತ್ತ್ವವು, ಶಿವ, ಸದಾಶಿವ, ಮಹೇಶವೆಂದು ಮೂರು ವಿಧವಾಗಿದೆ. ॥ ೧೭ ॥

ಅದರಲ್ಲಿ ಶಿವತತ್ತ್ವವು ನಿಷ್ಕಲವಾದುದು. ಸದಾಶಿವತತ್ತ್ವವು ಸಕಲನಿಷ್ಕಲ. ॥ ೧೮ ॥

ಮಹೇಶತತ್ತ್ವವು ಸಕಲ. ಹೀಗೆ ತತ್ತ್ವವು ಮೂರು ವಿಧ. ಅದರಲ್ಲಿ ಶಿವ ತತ್ತ್ವವನ್ನು ಒಂದೇ ಎಂಬುದಾಗಿ ತಿಳಿಯಬೇಕು ; ಸಾದಾಖ್ಯ (ಸದಾಶಿವ) ತತ್ತ್ವವು ಐದು ವಿಧ. ॥ ೧೯ ॥

---

[1] ಚ—ಭ.

[2] ಹಿ—ಚ.

[3] ಶಿವಂ ಸದಾಶಿವಂ ಚೈವ ಮಹೇಶಂ ಚ ತ್ರಿಧಾ ಸ್ಮೃತಃ—ಕ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ.

[4] ನಿಷ್ಕಲಶ್ಚೇತಿ—ಭ.
ನಿಷ್ಕಲಂ ತತ್ರ—ಫ.

[5] ಸಕಲಂ ನಿಷ್ಕಲಂ ಚೈವ ಸಾದಾಖ್ಯಮಿತಿ ಚೋಚ್ಯತೇ—ಕ, ಖ, ಗ, ಘ, ಚ, ಛ, ಜ, ಝ.

[6] ವಿಂದ್ಯಾತ್—ಟ, ಠ, ಢ, ತ, ದ.

ಮಹೇಶಸ್ತು[1] ಮಹಾಸೇನ !
ಪಂಚವಿಂಶತಿ ಭೇದಕಃ[2] ।
ಏತೇಷಾಂ[3] ತತ್ತ್ವಸಂಯುಕ್ತಂ
ಏಕತ್ರಿಂಶದಿತಿ[4] ಸ್ಮೃತಮ್ ॥ ॥ ೨೦ ॥

ಶಿವಸ್ಯ ಲಕ್ಷಣಂ ವಕ್ಷ್ಯೇ
ಸಮಾಸಾತ್ ಶೃಣು ಷಣ್ಮುಖ !
ಶಿವಂ ಪರಾತ್ಪರಂ[5] ಸೂಕ್ಷ್ಮಂ
ನಿತ್ಯಂ ಸರ್ವಗಮವ್ಯಯಮ್[6] ॥ ೨೧ ॥

ಅನಿಂದಿತಂ ಅನೌಪಮ್ಯಂ
ಅಪ್ರಮೇಯಂ[7] ಅನಾಮಯಮ್ ।
ಶುದ್ಧತ್ವಾತ್ ಶಿವಮುದ್ದಿಷ್ಟಂ
ಪರಾದೂರ್ಧ್ವಂ ಪರಾತ್ಪರಮ್[8] ॥ ॥ ೨೨ ॥

ಮಹೇಶತತ್ತ್ವದಲ್ಲಿ ಇಪ್ಪತ್ತೈದು ವಿಧಗಳಿವೆ. ಈ ಶಿವ, ಸದಾಶಿವ ಮಹೇಶ, ಇವರ ಒಟ್ಟು ಭೇದಗಳು ಮೂವತ್ತೊಂದು. ॥ ೨೦ ॥

ಷಣ್ಮುಖನೇ ! ಶಿವತತ್ತ್ವದ ಲಕ್ಷಣವನ್ನು ಸಂಗ್ರಹವಾಗಿ ಹೇಳುವೆನು, ಕೇಳು —ಈ ತತ್ತ್ವವು ಮಂಗಳವೂ ಪರಾತ್ಪರವೂ ಸೂಕ್ಷ್ಮವೂ ನಿತ್ಯವೂ ಸರ್ವಗತವೂ ಅವ್ಯಯವೂ— ॥ ೨೧ ॥

—ಅನಿಂದಿತವೂ ಉಪಮಾತೀತವೂ, ಅಪ್ರಮೇಯವೂ ಅನಾಮಯವೂ ಆಗಿದೆ. ಇದು ಅನಾದಿಕಾಲದಿಂದ ಮದಮೋಹಾದಿ ಸಪ್ತವಿಧ ಮಲಸಂಪರ್ಕವಿಲ್ಲದೇ ಶುದ್ಧವಾಗಿರುವುದರಿಂದ ಶಿವವೂ ; ಮಾನವರಿಗಿಂತ ಪರರಾದ ಬ್ರಹ್ಮಾದಿಗಳಿಗೂ ಪರವಾಗಿರುವುದರಿಂದ ಪರಾತ್ಪರವೂ ಆಗಿದೆ ॥ ೨೨ ॥

---

1 ಮಹೇಶಂ ತು—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ.
2 ಭೇದಕಂ—ಕ, ಖ, ಗ, ಘ, ಚ, ಛ, ಜ, ಝ, ಟ, ಡ, ಢ.
3 ಏತತ್ತು--ಜ.
4 ಏಕತ್ರಿಂಶಮಿತಿ—ಜ.
5 ಪರಾಪರಂ—ಥ, ಬ, ದ.
6 ಸರ್ವಗತಾವ್ಯಯಂ—ಕ, ಖ, ಘ, ಛ. ಝ, ಟ, ಠ, ದ, ಫ.
7 ಅಪ್ರಮಾಣಂ--ಕ, ಖ, ಘ, ಟ, ಠ, ಡ, ಥ, ತ, ದ, ಬ.
8 ಪರಾಪರಂ—ಥ.

ವ್ಯೋಮಾತೀತಂ ಚ ಸೂಕ್ಷ್ಮಂ ಹಿ[1]
ನಿತ್ಯಂ ಕಾರಣಶೂನ್ಯತಃ[2] ।
ವ್ಯಾಪ್ತ್ಯಾ[3] ಸರ್ವಗತಂ ಪ್ರೋಕ್ತಂ
ಅಕ್ಷೀಣಂ ಚಾವ್ಯಯಂ[4] ಭವೇತ್ ॥ ॥ ೨೩ ॥

ಅಮಲಂ ತ್ವನಿಂದಿತಂ ತತ್[5]
ಅಸಾದೃಶ್ಯಾದ್[6]ನೌಪಮಮ್ ।
[7]ಪ್ರಮಾಣ[8]ವ್ಯತಿ[9]ರಿಕ್ತತ್ವಾತ್
ಅಪ್ರಮೇಯ[10]ಮಿತಿ ಸ್ಮೃತಮ್ ॥ ॥ ೨೪ ॥

ಇದು ಚಿದಾಕಾಶವನ್ನೂ ಮೀರಿ ಆದಿಮಧ್ಯಾಂತರಹಿತವೂ ದೃಗದೃಶ್ಯವೂ ಆದ ತನ್ನ ಸ್ವರೂಪದಿಂದ ಸೂಕ್ಷ್ಮವೂ, ತನಗೊಂದು ಕಾರಣವೇ ಇಲ್ಲವಾಗಿ ನಿತ್ಯವೂ, ಬ್ರಹ್ಮಾದಿ ತೃಣಾಂತವಾದ ಪಿಂಡಗಳನ್ನೂ ಶಿವಲೋಕಾದಿ ಸಮಸ್ತವಾದ ಅಂಡಗಳನ್ನೂ ವ್ಯಾಪಿಸಿರುವುದರಿಂದ ಸರ್ವಗತವೂ, ಅನಂತಪ್ರಳಯಗಳಲ್ಲಿಯೂ ನಾಶರಹಿತವಾದ್ದರಿಂದ ಅವ್ಯಯವೂ ಆಗಿದೆ. ॥ ೨೩ ॥

ಮೋಹ ಮದ ರಾಗ ವಿಷಾದ ತಾಪ ಶೋಷ ವೈಚಿತ್ರ್ಯವೆಂಬ ಸಪ್ತ ದೋಷ ರಹಿತವಾದ್ದರಿಂದ ಅನಿಂದಿತವೂ, ಉಪಮಾತೀತವಾದ್ದರಿಂದ ಅನೌಪಮ್ಯವೂ, ಪ್ರಮಾಣಾತೀತವಾದ್ದರಿಂದ ಅಪ್ರಮೇಯವೂ ಸಹ ಇದಾಗಿದೆ ॥ ೨೪ ॥

---

1 ತೀತಂ ತನುಂ ಸೂಕ್ಷ್ಮಂ—ಖ, ಗ, ಚ, ಛ, ಜ.
2 ಕಾರಣಕಾರಣಂ—ಕ, ಖ, ಗ, ಟ, ಠ, ಡ, ಢ
ಕಾರ್ಯಕಾರಣಂ—ಘ.
3 ವ್ಯಾಪ್ತಂ—ಕ, ಖ, ಘ, ಛ, ಝ, ತ, ಡ.
4 ಅಕ್ಷೀಣಾದವ್ಯಯಂ—ಖ, ಗ, ಚ, ಛ, ಜ.
5 ಅಮಲೋಽನಿಂದಿತಂ ಜ್ಞೇಯಂ—ಗ, ಚ, ಜ, ಝ, ಟ, ಠ, ತ, ಥ.
6 ಅಸಾದೃಶ್ಯಮ—ಕ, ಘ, ಛ, ಟ, ಠ, ಢ, ತ.
7 ಇಲ್ಲಿಂದ 'ಶಿವರೂಪಮಿಹೋಚ್ಯತೇ' ವರೆಗಿನ ಭಾಗ. ಕ. ಪುಸ್ತಕದಲ್ಲಿಲ್ಲ.
8 ಪ್ರಮಾಣಾತ್—ಕ, ಘ, ಛ, ಟ, ಠ, ಡ.
9 ಪ್ರಮಾಣಾದ್ವ್ಯತಿ—ಖ, ಝ.
10 ಅಪ್ರಮಾಣ—ಕ, ತ, ದ, ಧ.

ನಿರ್ಗುಣತ್ವಾದ್ವಿಶೇಷೇಣ
ಹ್ಯ[1]ನಾಮಯಮಿತಿ ಸ್ಮೃತಮ್[2] ।
ಇತ್ಯೇತೈರ್ಲಕ್ಷಣೈರ್ಯುಕ್ತಂ
ಶಿವರೂಪಮಿಹೋಚ್ಯತೇ[3] ॥ ॥ ೨೫ ॥

ಸೃಷ್ಟ್ಯರ್ಥಂ ಸರ್ವತತ್ತ್ವಾನಾಂ
ಲೋಕಸ್ಯೋತ್ಪತ್ತಿಕಾರಣಮ್ ।
ಯೋಗಿನಾಮುಪಕಾರಾಯ
ಸ್ವೇಚ್ಛಯಾ ಚಿಂತಿತಃ ಶಿವಃ[4] ॥ ॥ ೨೬ ॥

ತಚ್ಛಿವಾತ್ತು[5] ಪರಾಶಕ್ತಿಃ
ಸಹಸ್ರಾಂಶೇನ ಜಾಯತೇ ।
ತಚ್ಛಕ್ತೇಸ್ತು[6] ಸಹಸ್ರಾಂಶಾತ್
ಆದಿಶಕ್ತಿಸಮುದ್ಭವಃ ॥ ॥ ೨೭ ॥

ಸತ್ತ್ವರಜಸ್ತಮೋಗುಣರಹಿತವಾದ್ದರಿಂದ ಇದು ಅನಾಮಯ. ಶಿವತತ್ತ್ವ ಸ್ವರೂಪವು ಮೇಲಿನ ಈ ಲಕ್ಷಣಗಳಿಂದ ಕೂಡಿದುದೆಂದು ಈ ತಂತ್ರವು ತಿಳಿಸುತ್ತದೆ ॥ ೨೫ ॥

ಸರ್ವತತ್ತ್ವಗಳ ಸೃಷ್ಟಿಗಾಗಿಯೂ ಲೋಕದ ಉತ್ಪತ್ತಿನಿಮಿತ್ತವಾಗಿಯೂ, ಶುದ್ಧಾಧ್ವವರ್ತಿಗಳಾದ ಯೋಗಿಗಳ ಉಪಕಾರಕ್ಕಾಗಿಯೂ ಶಿವನು ಸಂಕಲ್ಪಿಸಿದನು— ॥ ೨೬ ॥

ಆ ಶಿವನ ಸಾವಿರದಲ್ಲೊಂದಂಶದಿಂದ ಪರಾಶಕ್ತಿಯೂ, ಆ ಶಕ್ತಿಯ ಸಾವಿರ ದಲ್ಲೊಂದಂಶದಿಂದ ಆದಿಶಕ್ತಿಯೂ— ॥ ೨೭ ॥

---

1 ಚಾ—ಖ, ಝ.
ಆ—ಕ, ಗ, ಚ, ಛ, ಜ, ಟ.
2 ಮಿತೀರಿತಂ—ಧ
3 ಮಿತಿ ಸ್ಮೃತಮ್—ಖ, ಝ.
4 ಚಿಂತ್ಯತೇ ಶಿವಮ್—ಛ.
5 ತಚ್ಛಿವೇ ತು—ಖ, ಗ, ಚ, ಜ, ಝ, ದ.
ತಸ್ಯ ಚಿಂತಾ—ಕ, ಘ, ಛ, ಟ, ಡ, ಢ, ತ.
6 ತಚ್ಛಕ್ತಿಸ್ತು—ಕ, ಘ, ಛ, ಟ, ಡ.

ಆದಿಶಕ್ತಿ[1]ಸಹಸ್ರಾಂಶಾತ್
ಇಚ್ಛಾಶಕ್ತಿಸಮುದ್ಭವಃ ।
ಇಚ್ಛಾಶಕ್ತಿ[2]ಸಹಸ್ರಾಂಶಾತ್
ಜ್ಞಾನಶಕ್ತಿಸಮುದ್ಭವಃ ॥ ॥ ೨೮ ॥

ಜ್ಞಾನಶಕ್ತಿ[3]ಸಹಸ್ರಾಂಶಾತ್
ಕ್ರಿಯಾಶಕ್ತಿಸಮುದ್ಭವಃ ।
ಏತಾ ವೈ ಶಕ್ತಯಃ ಪಂಚ[4]
ನಿಷ್ಕಲಾಶ್ಚೇತಿ ಕೀರ್ತಿತಾಃ ॥ ॥ ೨೯ ॥

ಶಿವಸೃಷ್ಟಿ[5]ರಿಯಂ ಪ್ರೋಕ್ತಾ
ಶಕ್ತೀನಾಂ ಸೃಷ್ಟಿರುಚ್ಯತೇ ।
ಯೋಗಿನಾಂ ಚ ಯತೀನಾಂ ಚ
ಜ್ಞಾನಿನಾಂ[6] ಮಂತ್ರಿಣಾಂ ತಥಾ ॥ ॥ ೩೦ ॥

ಆದಿಶಕ್ತಿಯ ಸಾವಿರದಲ್ಲೊಂದಂಶದಿಂದ ಇಚ್ಛಾಶಕ್ತಿಯೂ, ಇಚ್ಛಾಶಕ್ತಿಯ ಸಾವಿರದಲ್ಲೊಂದಂಶದಿಂದ ಜ್ಞಾನಶಕ್ತಿಯೂ— ॥ ೨೮ ॥

ಜ್ಞಾನಶಕ್ತಿಯ ಸಾವಿರದಲ್ಲೊಂದಂಶದಿಂದ ಕ್ರಿಯಾಶಕ್ತಿಯೂ ಹುಟ್ಟುತ್ತವೆ. ಈ ಐದು ಶಕ್ತಿಗಳೂ ನಿಷ್ಕಲಶಕ್ತಿಗಳು. ॥ ೨೯ ॥

ಶಿವತತ್ತ್ವದ ಸೃಷ್ಟಿಯನ್ನು ಹೇಳಲಾಯಿತು. ಈಗ ನಿಷ್ಕಲ ಶಕ್ತಿಗಳ ಸೃಷ್ಟಿಯನ್ನು ಹೇಳುತ್ತೇನೆ. ಶಿವತತ್ತ್ವವೇ ಯೋಗಿಗಳ ಯತಿಗಳ ಮುಮುಕ್ಷುಗಳ ಶಿವ ಮಂತ್ರಪರಾಯಣರ— ॥ ೩೦ ॥

---

1 ತಚ್ಛಕ್ತಿ—ಕ, ಖ, ಘ, ಛ, ಫ.
2 ತಚ್ಛಕ್ತೇಸ್ತು—ಥ, ದ, ಪ, ಬ, ಡ, ಧ, ತ.
3 ತಚ್ಛಕ್ತೇಸ್ತು—ಠ, ಡ, ಧ, ತ, ಥ, ದ, ಪ.
4 ಏಷಾ ವೈ ಪಂಚಧಾ ಶಕ್ತಿಃ—ಕ, ಘ, ಛ, ಟ, ಠ.
5 ಶಕ್ತಿ—ಬ.
6 ಮುನೀನಾಂ—ಪ.

ಧ್ಯಾನಪೂಜಾನಿಮಿತ್ತಾಯ[1]
ಸಕಲಂ ನಿಷ್ಕಲಂ ಭವೇತ್ ।
ತದ್ರೂಪಂ ಹಿ ಮಹಾಸೇನ[2]
ಸಾದಾಖ್ಯಮಿತಿ ಕೀರ್ತಿತಮ್ ॥ ॥ ೩೧ ॥

ಸಾದಾಖ್ಯಂ ಪಂಚಧಾ ಪ್ರೋಕ್ತಂ
ತೇಷಾಂ ಲಕ್ಷಣಮುಚ್ಯತೇ ।
ಪರಾಶಕ್ತ್ಯಾದಿಶಕ್ತ್ಯೈಶ್ಚ[3][ಶಕ್ತಿಭ್ಯಃ]
ಸಾದಾಖ್ಯಸ್ಯ ಸಮುದ್ಭವಃ ॥ ॥ ೩೨ ॥

ಪ್ರಥಮಂ ಶಿವಸಾದಾಖ್ಯಂ
ಅಮೂರ್ತಂ ತು[4] ದ್ವಿತೀಯಕಮ್ ।
ತೃತೀಯಂ ಮೂರ್ತ[5]ಸಾದಾಖ್ಯಂ
ಚತುರ್ಥಂ ಕರ್ತೃನಾಮಕಮ್ ॥ ॥ ೩೩ ॥

ಪಂಚಮಂ ಕರ್ಮಸಾದಾಖ್ಯಂ
ಉಕ್ತಂ ಸಾದಾಖ್ಯಪಂಚಕಮ್[6] ।

—ಧ್ಯಾನಪೂಜೆಗಳಿಗಾಗಿ ಸಕಲನಿಷ್ಕಲವಾದ ಸದಾಶಿವರೂಪವನ್ನು ತಾಳುತ್ತದೆ. ಈ ರೂಪವೇ ಸಾದಾಖ್ಯ. ॥ ೩೧ ॥

ಈ ಸಾದಾಖ್ಯವು ಐದು ಬಗೆಯಾಗಿದೆ. ಈಗ ಅವುಗಳ ಲಕ್ಷಣವನ್ನು ಹೇಳುತ್ತೇನೆ. ಪೂರ್ವೋಕ್ತ ಪಂಚಶಕ್ತಿಗಳಿಂದ ಸಾದಾಖ್ಯವು ಆವಿರ್ಭವಿಸುತ್ತದೆ ॥ ೩೨ ॥

ಮೊದಲನೆಯದು ಶಿವಸಾದಾಖ್ಯ, ಎರಡನೆಯದು ಅಮೂರ್ತಸಾದಾಖ್ಯ, ಮೂರನೆಯದು ಮೂರ್ತಸಾದಾಖ್ಯ, ನಾಲ್ಕನೆಯದು ಕರ್ತೃಸಾದಾಖ್ಯ— ॥ ೩೩ ॥

---

1 ಶಿವಪೂಜಾನಿಮಿತ್ತಾಯ—ಖ.
2 ಸಮಾಸೇನ—ಕ, ಖ, ಗ, ಘ, ಜ.
3 ಪಂಚಶಕ್ತ್ಯಾದಿಶಕ್ತೇಶ್ಚ—ಗ, ಚ, ಛ, ಝ.
4 ಅಮೂರ್ತಿಸ್ತು—ಪ.
5 ಮೂರ್ತಿ—ಟ, ದ, ಧ, ಪ, ಫ, ಬ.
6 ಪಂಚಸಾದಾಖ್ಯಮುಚ್ಯತೇ—ಕ, ಘ, ಟ, ಠ, ಡ, ಢ. ತ, ಥ, ದ, ಧ, ಪ, ಬ.

ಸದಾಶಿವಸ್ತಥೇಶಶ್ಚ
ಬ್ರಹ್ಮೇಶಶ್ಚೇ[1]ಶ್ವರಸ್ತಥಾ[2] ॥ ॥ ೩೪ ॥

ಈಶಾನಶ್ಚೇತಿ ಪಂಚೈತೇ[3]
ತತ್ತ್ವ[4]ಭೇದಾಃ ಪ್ರಕೀರ್ತಿತಾಃ ।
[5]ಏತೇಷು ಪಂಚತತ್ತ್ವೇಷು
ವಿಶೇಷಸ್ತ್ವಧುನೋಚ್ಯತೇ ॥ ॥ ೩೫ ॥

[6]ಶಿವಂ ಸದಾಶಿವೋ[7] ಜ್ಞೇಯಂ
ಅಮೂರ್ತಂ ಚೇಶ ಉಚ್ಯತೇ ।
ಮೂರ್ತಂ[8] ಬ್ರಹ್ಮೇತಿ ವಿಜ್ಞೇಯಂ
ಕರ್ತೃ ಚೈವೇಶ್ವರಃ ಸ್ಮೃತಮ್ ॥ ॥ ೩೬ ॥

ಕರ್ಮೇಶಾನ ಇತಿ ಪ್ರೋಕ್ತಂ
ಇತ್ಯೇವಂ ದ್ವಿವಿಧಂ ಸ್ಮೃತಮ್ ।

ಐದನೆಯದು ಕರ್ಮಸಾದಾಖ್ಯ, ಹೀಗೆ ಸಾದಾಖ್ಯಗಳು ಐದು. ಸದಾಶಿವ, ಈಶ, ಬ್ರಹ್ಮೇಶ, ಈಶ್ವರ— ॥ ೩೪ ॥

—ಈಶಾನವೆಂದು ಈ ಐದು ಸಾದಾಖ್ಯ ತತ್ತ್ವಭೇದಗಳು ಕ್ರಮವಾಗಿ ಉಕ್ತವಾಗಿವೆ. ಇವುಗಳ ವಿಶೇಷವನ್ನು ಈಗ ಹೇಳುತ್ತೇನೆ ॥ ೩೫ ॥

ಶಿವಸಾದಾಖ್ಯತತ್ತ್ವವು ಸದಾಶಿವ ; ಅಮೂರ್ತಸಾದಾಖ್ಯತತ್ತ್ವವು ಈಶ ; ಮೂರ್ತಸಾದಾಖ್ಯತತ್ತ್ವವು ಬ್ರಹ್ಮೇಶ ; ಕರ್ತೃಸಾದಾಖ್ಯತತ್ತ್ವವು ಈಶ್ವರ ; ॥೩೬॥

—ಕರ್ಮಸಾದಾಖ್ಯತತ್ತ್ವವು ಈಶಾನ ;—ಹೀಗೆ ಶಿವತತ್ತ್ವವು ಶಿವಸಾದಾ

---

1 ಬ್ರಹ್ಮಾ ವೈ ಚೇ—ಗ, ಚ, ಜ, ಝ, ಫ, ಭ.
2 ರಃ ಸ್ಮೃತಃ—ಕ, ಖ, ಗ, ಘ. ತ, ಥ, ದ, ಫ.
3 ಪಂಚೈನ—ಕ, ಘ, ಛ.
4 ಮೂರ್ತಿ—ಫ.
5 ಶಿವಂ—ಕ, ಖ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಫ.
6 ಮೂರ್ತಿಂ—ಪ.
7 ಈ ಅರ್ಧಪದ್ಯ ಕ, ಖ, ಪುಸ್ತಕಗಳಲ್ಲಿಲ್ಲ.
8 ಈ ಅರ್ಧಪದ್ಯ ಝ. ಪುಸ್ತಕದಲ್ಲಿಲ್ಲ.

[1]ಪರಾತ್ಪರತರಂ ಚೈವ
ಸೂಕ್ಷ್ಮಾತ್ ಸೂಕ್ಷ್ಮಮೇವ ಚ[2] ॥ ॥ ೩೭ ॥

[3]ಸ್ಥೂಲಾತ್ ಸ್ಥೂಲಂ ಕ್ರಮೇಣೈವ[4]
ಶಿವಾದಿ ಪರಿಲಕ್ಷ್ಯತೇ ।
*ತದೀಯಂ ತ್ರಿವಿಧಂ ರೂಪಂ
ಸ್ಥೂಲಂ ಸೂಕ್ಷ್ಮಂ ತತಃ ಪರಮ್[5] ॥ ॥ ೩೮ ॥

ಅಸ್ಮದಾದ್ಯಮರೈರ್ದೃಶ್ಯಂ[6]
ಸ್ಥೂಲಂ ಸೂಕ್ಷ್ಮಂ ಚ ಯೋಗಿಭಿಃ[7] ।
ತತಃ ಪರಂ ತು ಯನ್ನಿತ್ಯಂ
ಜ್ಞಾನಮಾನನ್ದಮವ್ಯಯಮ್ ॥ ॥ ೩೯ ॥

ಖ್ಯಾದಿರೂಪ, ಮತ್ತು ಸದಾಶಿವಾದಿರೂಪಗಳಿಂದ ಎರಡು ಬಗೆಯಾಗಿ ಸ್ಮರಿಸಲ್ಪಡುತ್ತದೆ. ಪರಕ್ಕೂ ಪರವಾದ, ಸೂಕ್ಷ್ಮಕ್ಕೂ ಸೂಕ್ಷ್ಮವಾದ— ॥ ೩೭ ॥

—ಸ್ಥೂಲಕ್ಕೂ ಸ್ಥೂಲವಾದ ಶಿವತತ್ತ್ವ ಸದಾಶಿವತತ್ತ್ವ ಮಹೇಶತತ್ತ್ವಗಳನ್ನು ಕ್ರಮವಾಗಿ ನಿರೂಪಿಸುತ್ತೇನೆ. ಶಿವತತ್ತ್ವಸಂಬಂಧವಾದ ಸ್ವರೂಪವು–ಸ್ಥೂಲತತ್ತ್ವ, ಸೂಕ್ಷ್ಮತತ್ತ್ವ, ಮತ್ತು ಪರಾತ್ಪರತತ್ತ್ವವೆಂದು ಮೂರು ವಿಧ. ॥ ೩೮ ॥

ಸ್ಥೂಲತತ್ತ್ವವು ದೇವತೆಗಳಿಗೆ, ಸೂಕ್ಷ್ಮತತ್ತ್ವವು ಯೋಗಿಗಳಿಗೆ, ನಿತ್ಯವೂ ಜ್ಞಾನಸ್ವರೂಪವೂ ಆನನ್ದಮಯವೂ ಅವ್ಯಯವೂ ಆದ ಪರಾತ್ಪರತತ್ತ್ವವು— ॥ ೩೯ ॥

---

1 ಈ ಅರ್ಧಪದ್ಯ ಬ ಪುಸ್ತಕದಲ್ಲಿಲ್ಲ.
2 ಸೂಕ್ಷ್ಮಸೂಕ್ಷ್ಮಂ ತಥೈವ ಚ—ಫ.
3 ಈ ಅರ್ಧಪದ್ಯ ಬ. ಪುಸ್ತಕದಲ್ಲಿಲ್ಲ.
4 ಸ್ಥೂಲಸೂಕ್ಷ್ಮಕ್ರಮೇಣೈವ—ಖ, ಗ, ಚ, ಛ.
* ಇಲ್ಲಿಂದ 'ತದ್ರೂಪಮಾಸ್ತಿಕೈಃ' ವರೆಗೆ—ಥ, ಫ. ಪುಸ್ತಕಗಳಲ್ಲಿಲ್ಲ.
5 ತದೇತತ್ತ್ರಿವಿಧಂ ಸ್ಥೂಲಂ ಸೂಕ್ಷ್ಮತತ್ತ್ವಂ ತತಃ ಪರಂ—ಖ, ಗ, ಚ, ಛ.
6 ಮುನಿರ್ದಿಶ್ಯಂ—ಖ, ಗ, ಚ, ಝ.
7 ಯೋಗಿನಃ—ಖ, ಗ, ಚ, ಝ.

ತನ್ನಿಷ್ಠೈಃ ತತ್ಪರೈರ್ಭಕ್ತೈಃ[1]
ದೃಶ್ಯಂ ತದ್ರೂಪ[2]ಮಾಸ್ತಿಕೈಃ ।
[3]ಏತೇಷು ಪಞ್ಚತತ್ತ್ವೇಷು
ವಿಶೇಷಸ್ತ್ವಧುನೋಚ್ಯತೇ ॥ ॥ ೪೦ ॥

ತತ್ತ್ವಮೂರ್ತಿಪ್ರಭಾವಂ ಚ
ತ್ರಿವಿಧಂ[4] ವಿದ್ಯತೇ[5] ಕ್ರಮಾತ್ ।
ಶಿವಶ್ಚ ತತ್ತ್ವಮಿತ್ಯುಕ್ತಃ[6]
ಮೂರ್ತಿಶ್ಚೈವ[7] ಸದಾಶಿವಃ[8] ॥ ॥ ೪೧ ॥

ತಯೋರ್ಯೋಗೇನ[9] ಯದ್ರೂಪಂ[10]
ತದ್ರೂಪಂ ಭಾವ[11] ಉಚ್ಯತೇ[12] ।

—ತತ್ತ್ವಾನುಷ್ಠಾನಪರರೂ ತತ್ತ್ವಮಗ್ನರೂ ಆಸ್ತಿಕರೂ ಆದ ಭಕ್ತರಿಗೆ ಗೋಚರಿಸುತ್ತವೆ. ಈಗ ಶಿವಸಾದಾಖ್ಯಾದಿ ಪಂಚತತ್ತ್ವಗಳ ವಿಶೇಷವನ್ನು ನಿರೂಪಿಸುತ್ತೇನೆ ॥ ೪೦ ॥

ತತ್ತ್ವ, ಮೂರ್ತಿ, ಮತ್ತು ಪ್ರಭಾವವೆಂದು ಮೂರು ಬಗೆಗಳಿವೆ. ನಿಷ್ಕಲ ಶಿವನು ತತ್ತ್ವ, ಸದಾಶಿವನು ಮೂರ್ತಿ. ॥ ೪೧ ॥

---

1 ರ್ಭಕ್ತ್ಯಾ—ಖ, ಗ, ಚ, ಝ.
2 ತದ್ವ್ರತ—ಕ, ಖ, ಛ, ದ, ಧ.
3 'ಏತೇಷು' ಮೊದಲ್ಗೊಂಡು 'ವಿದ್ಯತೇ ಕ್ರಮಾತ್' ವರೆಗಿನ ಭಾಗ ಡ, ಪ ಪುಸ್ತಕಗಳಲ್ಲಿಲ್ಲ.
4 ತ್ರಿಭೇದಂ—ಕ, ಖ, ಪ, ಫ, ಬ.
5 ವಿಂದ್ಯತೇ—ಕ, ದ.
6 ಶಿವಾದಿತತ್ತ್ವಮಿತ್ಯುಕ್ತಂ—ಫ.
7 ಮೂರ್ತಂ ಚೈವ—ಥ.
8 ಮಹೇಶ್ವರಃ—ಖ, ಗ, ಚ, ಝ.
9 ಯೋಗಸ್ಯ—ಡ, ಪ.
10 ಭಾವೇನ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಬ.
11 ಈ ಭಾವವನ್ನೇ ಕೆಲವು ಸಾರಿ ಪ್ರಭಾವವೆಂದೂ ಕರೆಯಲಾಗಿದೆ.
12 ಭಾವಸಂಜ್ಞಕಂ—ಖ, ಗ, ಚ, ಝ.

ಭಾವಃ ಸಾದಾಖ್ಯಂ[1] ಇತ್ಯುಕ್ತಃ
ಇತ್ಯೇವಂ ಪರಿಕಲ್ಪಿತಮ್[2] ॥ ॥ ೪೨ ॥

[3]ಸಂತತಂ ಶಿವಭಾವತ್ವಾತ್
ಸಾದಾಖ್ಯಮಿತಿ ಕೀರ್ತಿತಮ್ ।
ನಿಷ್ಕಲಂ ತತ್ತ್ವಮಿತ್ಯುಕ್ತಂ
ಸಕಲಂ ಮೂರ್ತಿರುಚ್ಯತೇ[4] ॥ ॥ ೪೩ ॥

ಸಕಲಂ ನಿಷ್ಕಲಂ ಚೈವ
ಪ್ರಭಾವ[5] ಇತಿ ಕೀರ್ತಿತಮ್ ।
ದೇಹೀ ನಿಷ್ಕಲ ಇತ್ಯುಕ್ತಃ[6]
ದೇಹಃ ಸಕಲ ಈರಿತಃ[7] ॥ ॥ ೪೪ ॥

ಆ ಶಿವತತ್ತ್ವ ಮತ್ತು ಸದಾಶಿವತತ್ತ್ವಗಳ ಸಮಾಯೋಗದಿಂದ ಆದ ರೂಪವೇ ಭಾವ. ಈ ಭಾವತತ್ತ್ವವೇ ಸಾದಾಖ್ಯ. ಹೀಗೆ ಶಿವತತ್ತ್ವವು ವಿಭಾಗವಾಗುತ್ತದೆ. ॥ ೪೨ ॥

ಯಾವಾಗಲೂ ಶಿವರೂಪವಾಗಿರುವುದರಿಂದ ಈ ಭಾವತತ್ತ್ವವನ್ನು ಸಾದಾಖ್ಯವೆಂದು ಹೇಳುತ್ತಾರೆ. ನಿಷ್ಕಲವಾದ ಶಿವಸ್ವರೂಪವು ತತ್ತ್ವ. ಸಕಲವಾದ ಸದಾಶಿವಸ್ವರೂಪವು ಮೂರ್ತಿ. ॥ ೪೩ ॥

ಸಕಲನಿಷ್ಕಲಸ್ವರೂಪಗಳ ಸಮಾಯೋಗ ಪ್ರಭಾವ. ನಾದಸ್ವರೂಪವಾದ ಶಿವತತ್ತ್ವವು ನಿಷ್ಕಲ. ದೇಹಸ್ವರೂಪವಾದ ಅಕ್ಷರಗಳು ಸಕಲ. ॥ ೪೪ ॥

---

1 ಭಾವಸಾದಾಖ್ಯಂ—ಡ, ಪ.
ಏವಂ ಸಾದಾಖ್ಯಂ—ಥ

2 ಪರಿಲಕ್ಷ್ಯತೇ—ಫ,

3 ಈ ಅರ್ಧಪದ್ಯ—ಕ, ಟ, ಠ, ಡ, ಢ, ತ, ಥ, ದ, ಧ, ಪ, ಬ ಪುಸ್ತಕಗಳಲ್ಲಿಲ್ಲ.

4 ರೀರಿತಾ—ಖ, ಗ, ಚ, ಝ.

5 ಪ್ರಭಾವಂ—ಕ, ಖ, ಗ, ಚ. ಛ. ಝ, ಟ, ಠ, ಡ, ಢ, ತ, ಥ, ದ, ಪ, ಫ, ಬ.

6 ದೇಹೀ ನಿಷ್ಕಲಮಿತ್ಯುಕ್ತಂ—ಕ, ಖ, ಗ, ಘ, ಚ, ಝ, ಡ, ಢ, ಪ, ಫ.
ನಿಷ್ಕಲಂ ಜೀವಮಿತ್ಯುಕ್ತಂ—ಫ.

7 ಸಕಲಮೀರಿತಮ್—ಚ, ಝ, ಗ.
ಸಕಲ ಉಚ್ಯತೇ—ಕ, ಘ, ಛ, ಟ, ಡ, ಢ, ತ.

ದೇಹಿದೇಹಸುಸಂಬಂಧಾತ್
ಭಾವರೂಪಮಿತಿ ಸ್ಮೃತಮ್[1] ।
ಸರ್ವೇಷಾಂ ಧ್ಯಾನಪೂಜಾರ್ಥಂ
ಸಕಲಂ ನಿಷ್ಕಲಂ ಭವೇತ್ ॥ ॥ ೪೫ ॥

ಏವಂ[2] ತತ್ತ್ವವಿಶೇಷೇಣ
ಸರ್ವಂ ಕರ್ಮ ಸಮಾಚರೇತ್ ।
ಪಞ್ಚಸಾದಾಖ್ಯತತ್ತ್ವಾನಾಂ
ಉದ್ಭವಂ ಹಿ[3] ಪೃಥಕ್ ಪೃಥಕ್ ॥ ॥ ೪೬ ॥

ತೇಷಾಂ ರೂಪಂ ಚ ವರ್ಣಂ ಚ
ಸಮಾಸಾತ್ ಶೃಣು ಷಣ್ಮುಖ ।
ಶಾನ್ತ್ಯತೀತಾ ಪರಾ ಶಕ್ತಿಃ
ತಸ್ಯಾಃ ಪರ್ಯಾಯವಾಚಕಃ ॥ ॥ ೪೭ ॥

ದೇಹಿದೇಹಗಳ ಸಂಬಂಧದಿಂದ ಭಾವರೂಪವಾಗುತ್ತದೆ. ಸಮಸ್ತಭಕ್ತರ ಧ್ಯಾನಪೂಜೆಗಳಿಗಾಗಿ ಶಿವತತ್ತ್ವವು ಸಕಲನಿಷ್ಕಲಸ್ವರೂಪವನ್ನು ಹೊಂದುತ್ತದೆ. ॥ ೪೫ ॥

ಈ ಪ್ರಕಾರವಾದ ತತ್ತ್ವವಿಶೇಷವನ್ನು ಗಮನಿಸಿ ಸಕಲಕರ್ಮಗಳನ್ನೂ ಆಚರಿಸಬೇಕು. ಷಣ್ಮುಖನೇ ! ಪಂಚಸಾದಾಖ್ಯತತ್ತ್ವಗಳ ಉತ್ಪತ್ತಿಯನ್ನೂ— ॥ ೪೬ ॥

—ಅವುಗಳ ಸ್ವರೂಪ ಮತ್ತು ವರ್ಣಗಳನ್ನೂ ಪ್ರತ್ಯೇಕವಾಗಿಯೂ ಸಂಕ್ಷೇಪವಾಗಿಯೂ ಹೇಳುತ್ತೇನೆ ಕೇಳು—ನಿಷ್ಕಲಪರಾಶಕ್ತಿಯೇ ಶಾಂತ್ಯತೀತಕಲೆಯೆನಿಸಿಕೊಳ್ಳುತ್ತದೆ. ಇದು ಪರಾಶಕ್ತಿಯ ಪರ್ಯಾಯನಾಮ. ॥ ೪೭ ॥

---

[1] ದೇಹೀ ದೇಹಸ್ಯ ಸಂಬಂಧಂ ಏವಂರೂಪಮಿತಿ ಸ್ಮೃತಮ್ ।—ಕ, ಖ, ಗ, ಘ, ಚ, ಛ, ಝ, ಟ, ತ, ಡ.

[2] ಜ್ಞಾತ್ವಾ—ಖ, ಗ, ಚ, ಝ.
ಶಿವ—ಥ.

[3] ತು—ಟ.

ಪರಾಶಕ್ತೇಃ ದಶಾಂಶೇನ[1]
ಶಿವಸಾದಾಖ್ಯಸಂಭವಃ[2] ।
ಪರಾಶಕ್ತ್ಯುದ್ಭವತ್ವಾಚ್ಚ
ಶುದ್ಧತ್ವಾತ್ ಶಿವಮೀರಿತಮ್[3] ॥ ॥ ೪೮ ॥

ಪ್ರಸಾದಂ[4] ಸೂಕ್ಷ್ಮರೂಪಂ ಚ[5]
ಜ್ಯೋತೀರೂಪಮಿತಿ ಸ್ಮೃತಮ್ ।
ವಿದ್ಯುದ್ರೂಪಮಿವಾಕಾಶೇ
ಪ್ರತ್ಯಕ್ಷಂ ಸರ್ವತೋಮುಖಮ್ ॥ ॥ ೪೯ ॥

ಶಿವತತ್ತ್ವಮಿದಂ[6] ಪ್ರೋಕ್ತಂ
ತತ್ತ್ವಾನಾಮಖಿಲಾಲಯಮ್[7] ।
ಶಿವಸಾದಾಖ್ಯಮಿತ್ಯುಕ್ತಂ[8]
ಅಮೂರ್ತಂ ತು[9] ತತಃ ಶೃಣು[10] ॥ ॥ ೫೦ ॥

ಪರಾಶಕ್ತಿಯ ಹತ್ತರಲ್ಲೊಂದಂಶದಿಂದ ಶಿವಸಾದಾಖ್ಯವು ಉದ್ಭವಿಸುತ್ತದೆ. ನಿಷ್ಕಲಪರಾಶಕ್ತಿಯಿಂದ ಆವಿರ್ಭವಿಸಿದ್ದರಿಂದಲೂ ಪರಿಶುದ್ಧವಾದ್ದರಿಂದಲೂ ಇದನ್ನು ಶಿವಸಾದಾಖ್ಯವೆಂದು ಕರೆಯುತ್ತಾರೆ. ॥ ೪೮ ॥

ಶುದ್ಧಪ್ರಸಾದಮಂತ್ರಸ್ವರೂಪವೂ, ಸೂಕ್ಷ್ಮರೂಪವೂ ಆದ ಈ ತತ್ತ್ವವು ತೇಜೋರೂಪವಾದುದು. ಆಕಾಶದಲ್ಲಿ ತೋರಿ ಅಡಗುವ ಮಿಂಚಿನಂತೆ ಸರ್ವತೋಮುಖವಾಗಿ ಸಕಲಪ್ರಾಣಿಗಳ ವಾಙ್ಮನೋಭಾವಗಳಲ್ಲಿ ಪ್ರತ್ಯಕ್ಷವಾದ— ॥ ೪೯ ॥

—ಈ ಶಿವತತ್ತ್ವವು ಮಹದಾದಿ ಸಮಸ್ತತತ್ತ್ವಗಳಿಗೂ ಏಕಾಶ್ರಯ. ಇದೇ ಶಿವಸಾದಾಖ್ಯದ ಸ್ವರೂಪ. ಇನ್ನು ಅಮೂರ್ತಸಾದಾಖ್ಯದ ಸ್ವರೂಪವನ್ನು ನಿರೂಪಿಸುವೆನು. ॥ ೫೦ ॥

---

1 ಪರಾಶಕ್ತಿದಶಾಂಶೇನ—ಘ, ಛ, ಟ, ಠ, ದ, ಥ.
2 ಖ್ಯಮುದ್ಭವಂ—ಕ, ಖ, ಘ, ಛ, ಟ, ಠ, ಡ.
3 ಶಿವಮುಚ್ಯತೇ—ಕ, ಖ, ಘ, ಛ, ಟ, ಠ, ಡ, ಢ, ತ, ದ, ಥ, ಪ, ಫ.
4 ಪ್ರಾಸಾದಂ—ಜ. ತದ್ರೂಪಂ—ಖ, ಗ, ಚ, ಝ.
5 ಪೇಣ—ಖ, ಗ, ಚ, ಝ.
6 ಮಿತಿ—ಖ, ಗ, ಚ, ಝ.
7 ಲಾಶ್ರಯಮ್—ಠ.
8 ಮೇವೋಕ್ತಂ—ಫ.
9 ಅಮೂರ್ತಿಂ—ಚ, ಪ.
10 ಅಮೂರ್ತಿಂ ಶೃಣು ಷಣ್ಮುಖ—ಫ.

ಶಾನ್ತಿರೇವಾದಿಶಕ್ತಿಶ್ಚ[1]
ತಸ್ಯಾಃ ಪರ್ಯಾಯವಾಚಕಃ ।
ಆದಿಶಕ್ತೇರ್ದಶಾಂಶೇನ[2]
ಹ್ಯಮೂರ್ತಸ್ಯ ಸಮುದ್ಭವಃ[3] ॥ ॥ ೫೧ ॥

ಆದಿಶಕ್ತೇ[4]ರಮೂರ್ತತ್ವಾತ್[5]
ಅಮೂರ್ತಂಚೇತಿ[6] ಕೀರ್ತಿತಮ್ ।
ಅಮೂರ್ತತ್ವಾತ್[7] ಕಲಾಹೀನಮ್
ತದ್ರೂಪಂ ಲಿಂಗವದ್ಭವೇತ್[8] ॥ ॥ ೫೨ ॥

ಸೂರ್ಯಕೋಟಿಪ್ರತೀಕಾಶಂ
ಜ್ಯೋತಿಃಸ್ತಮ್ಭಾಕೃತಿ ಸ್ಥಿತಮ್ ।

ನಿಷ್ಕಲರೂಪವಾದ ಆದಿಶಕ್ತಿಯೇ ಶಾಂತಿಕಲೆಯು ; ಇದು ಆದಿಶಕ್ತಿಯ ಪರ್ಯಾಯನಾಮ. ಆದಿಶಕ್ತಿಯ ಹತ್ತರಲ್ಲೊಂದಂಶದಿಂದ ಅಮೂರ್ತಸಾದಾಖ್ಯದ ಉದ್ಭವವಾಗುತ್ತದೆ. ॥ ೫೧ ॥

ಆದಿಶಕ್ತಿಯು ಅಮೂರ್ತವಾದುದರಿಂದ ಇದಕ್ಕೆ ಅಮೂರ್ತಸಾದಾಖ್ಯವೆಂಬ ಹೆಸರು ಬಂದಿದೆ. ಅಮೂರ್ತವಾದುದರಿಂದ ಶಾನ್ತಿಕಲೆಯಿಂದ ಕೂಡಿದ್ದರೂ ಕಲಾ ರಹಿತವಾದ ಇದರ ರೂಪವು ಲಿಂಗದಂತಿರುತ್ತದೆ. ॥ ೫೨ ॥

ಈ ಲಿಂಗವು ಕೋಟಿಸೂರ್ಯರಿಗೆ ಸದೃಶವಾಗಿ ಜ್ಯೋತಿಸ್ತಂಭದ ಆಕಾರವುಳ್ಳ

---

1 ಆದಿಶಕ್ತಿಶ್ಚ ಶಕ್ತಿಶ್ಚ—ಫ.
ಶಾಂತಿಶ್ಚೈವಾದಿಶಕ್ತಿಶ್ಚ—ಖ, ಟ, ಡ, ಢ, ತ, ಥ, ಪ, ಫ.

2 ಆದಿಶಕ್ತಿದಶಾಂಶೇನ—ಖ, ಗ, ಚ, ಝ,

3 ಹ್ಯಮೂರ್ತಂ ಚ ಸಮುದ್ಭವಂ—ಢ, ದ, ಬ.
ಹ್ಯಮೂರ್ತಿಶ್ಚ ಸಮುದ್ಭವಾ—ಪ.
ಹ್ಯಮೂರ್ತಂ ತು ಸಮುದ್ಭವಂ— ಕ, ಟ, ಠ, ತ, ಥ.

4 ಆದಿಶಕ್ತಿ—ಖ, ಗ, ಚ, ಝ.

5 ರ್ತಿತ್ವಾತ್—ಫ.

6 ರ್ತಿತ್ವಾತ್—ಫ.

7 ಅಮೂರ್ತಿಶ್ಚೇತಿ—ಫ.

8 ಲಿಂಗಮುದ್ಭವಮ್—ಕ, ಖ, ಘ, ಟ, ಠ, ಡ, ಢ, ಥ.

ತಸ್ಯಾಭ್ಯಂತರ್ಗತಾ ಮೂರ್ತಿಃ
ಅಮೂರ್ತತ್ವಾದಗೋಚರಾ[1] ॥ ॥ ೫೩ ॥

ಏತದ್ವೈ ದಿವ್ಯಲಿಂಗಂ ತು
ಮೂಲಸ್ತಂಭ ಇಹೋಚ್ಯತೇ ।
ಲಿಂಗಾತ್[2] ಸರ್ವಂ ಸಮುತ್ಪನ್ನಂ
ಲಯಂ ತಸ್ಮಿನ್ ಪ್ರಕೀರ್ತಿತಮ್[3] ॥ ॥ ೫೪ ॥

[4]ಸೃಷ್ಟಿಸಂಹಾರಮೇವೋಕ್ತಂ
ಲಿಂಗನಾಮ್ನಾತ್ರಿಹೋಚ್ಯತೇ[5] ।
ಅಮೂರ್ತಮೇವಮಾಖ್ಯಾತಂ[6]
ಸಮೂರ್ತಂ ತು[7] ತತಃ ಶೃಣು ॥ ॥ ೫೫ ॥

ದ್ದಾಗಿರುತ್ತದೆ. ಇದರ ಗರ್ಭದಲ್ಲಿ ಅಂತರ್ಗತವಾಗಿರುವ ಶಿವಮೂರ್ತಿಯು ಅಮೂರ್ತವಾದುದರಿಂದ ಇಂದ್ರಿಯಾಗೋಚರವಾಗಿರುತ್ತದೆ. ॥ ೫೩ ॥

ಅಗೋಚರವಾದ ಈ ದಿವ್ಯಲಿಂಗವು ಪಂಚಸಾದಾಖ್ಯನಿರೂಪಣಪ್ರಸಂಗದಲ್ಲಿ ಸಮಸ್ತಕ್ಕೂ ಆದಿಸ್ತಂಭವೆಂದು ಹೇಳಲ್ಪಡುತ್ತದೆ. ಈ ಜ್ಯೋತಿರ್ಲಿಂಗದಿಂದಲೇ ಸಕಲಜಗತ್ತೂ ಹುಟ್ಟುತ್ತದೆ, ಮತ್ತು ಅದರಲ್ಲಿಯೇ ಸಕಲ ಜಗತ್ತೂ ಅಡಗುತ್ತದೆ. ॥ ೫೪ ॥

ಸೃಷ್ಟಿಸಂಹಾರಗಳಿಗಾಧಾರವಾದ ಅಮೂರ್ತಸಾದಾಖ್ಯವು ಇಲ್ಲಿ ಲಿಂಗವೆಂದು ಹೇಳಲ್ಪಡುತ್ತದೆ. ಇದು ಅಮೂರ್ತಸಾದಾಖ್ಯದ ವಿವರಣೆ. ಇನ್ನು ಮೂರ್ತಸಾದಾಖ್ಯ ಸ್ವರೂಪವನ್ನು ವಿವರಿಸುವೆನು. ॥ ೫೫ ॥

---

1 ಅಮೂರ್ತಾದಿರಿಹೋಚ್ಯತೇ—ಖ, ಗ, ಚ, ಝ.

2 ಲಿಂಗೇ—ಫ.

3 ಲಯಂ ತತ್ರೈವ ಚೋಚ್ಯತೇ—ಫ.

4 ಈ ಅರ್ಧಪದ್ಯವು—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಫ, ಬ. ಪುಸ್ತಕಗಳಲ್ಲಿಲ್ಲ.

5 ಲಿಂಗನಾಮಾಸ್ಯ ಚೋಚ್ಯತೇ—ಫ

6 ಅಮೂರ್ತಿರೇವಮಾಖ್ಯಾತಾ—ಪ.

7 ಸಮೂರ್ತಿಂ ತು—ಫ.
ಸಮೂರ್ತಂ ಚ—ಪ.

ಇಚ್ಛಾಭಕ್ತಿಶ್ಚ ವಿದ್ಯಾ ಚ
ತಸ್ಯಾಃ[1] ಪರ್ಯಾಯವಾಚಕಃ ।
ತಚ್ಛಕ್ತೇಸ್ತು[2] ದಶಾಂಶೇನ
ಮೂರ್ತಸಾದಾಖ್ಯಸಂಭವಃ[3] ॥ ॥ ೫೬ ॥

ಇಚ್ಛಾಭಕ್ತೇಃ ಗುಣತ್ವಾಚ್ಚ[4]
ತಸ್ಮಾನ್ಮೂರ್ತಮುದಾಹೃತಮ್[5] ।
ಮೂರ್ತತ್ವಾಚ್ಚ[6] ಕಲಾಯುಕ್ತಂ
ರೂಪಂ ಚೇತಿ ಪ್ರಕೀರ್ತಿತಮ್ ॥ ॥ ೫೭ ॥

ಜ್ವಾಲಾಗ್ನಿಸದೃಶಪ್ರಖ್ಯಾ[7]
ದಿವ್ಯಲಿಂಗಾಕೃತಿರ್ಭವೇತ್[8] ।
ತಸ್ಯಾರ್ಧಾರ್ಧೈಕ[9]ಭಾಗೇ ತು[10]
ಚೈಕವಕ್ತ್ರಸಮನ್ವಿತಮ್[11] ॥ ॥ ೫೮ ॥

ಶಿವನ ನಿಷ್ಕಲಸ್ವರೂಪವಾದ ಇಚ್ಛಾಭಕ್ತಿಯೇ ವಿದ್ಯಾಕಲೆ. ಇದು ಇಚ್ಛಾಭಕ್ತಿಯ ಪರ್ಯಾಯನಾಮ. ಇಚ್ಛಾಭಕ್ತಿಯ ಹತ್ತರಲ್ಲೊಂದಂಶದಿಂದ ಮೂರ್ತಸಾದಾಖ್ಯತತ್ತ್ವವು ಸಂಭವಿಸುತ್ತದೆ. ॥ ೫೬ ॥

ಇಚ್ಛಾಭಕ್ತಿಯ ಗುಣವಾದುದರಿಂದ ಇದನ್ನು ಮೂರ್ತಸಾದಾಖ್ಯವೆನ್ನುತ್ತಾರೆ. ಇದು ಮೂರ್ತಿರೂಪವಾದುದರಿಂದ ಕಲಾಸಹಿತವಾದ ಸ್ವರೂಪವನ್ನುಳ್ಳದ್ದು. ॥೫೭॥

ಈ ಸ್ವರೂಪವು ಉರಿಯುವ ಅಗ್ನಿಗೆ ಸದೃಶವಾದ ಕಾಂತಿಯುನ್ನು ಹೊಂದಿ ದಿವ್ಯಲಿಂಗಾಕಾರವನ್ನುಳ್ಳದ್ದಾಗಿರುತ್ತದೆ. ಈ ದಿವ್ಯಲಿಂಗದ ನಾಲ್ಕನೆಯ ಒಂದು ಭಾಗದಲ್ಲಿ ಒಂದು ಮುಖ— ॥ ೫೮ ॥

---

1 ತಸ್ಯ—ಕ, ಚ, ಡ, ಪ.
2 ಇಚ್ಛಾಶಕ್ತೇಃ—ಫ.
3 ಮೂರ್ತಿಸಾದಾಖ್ಯಸಂಭವಃ—ಥ.
ಜ್ಯೋತೀರೂಪಮಿಹೋಚ್ಯತೇ—ಖ, ಗ, ಚ.
4 ಇಚ್ಛಾಶಕ್ತಿಗುಣತ್ವಾಚ್ಚ—ಕ, ಘ, ಛ, ದ, ಧ, ಪ, ಬ.
5 ರ್ತಿರುದಾಹೃತಾ—ಖ. ಗ. ಚ, ಝ.
6 ಮೂರ್ತಿತ್ವಾಚ್ಚ—ಥ, ಬ.
7 ಮೂಲಾಗ್ನಿಸದೃಶಪ್ರಖ್ಯ—ಪ.
8 ಕೃತಿರ್ಭವಮ್—ಥ.
9 ತಸ್ಯೋರ್ಧ್ವಾಂಶೈಕ—ಖ, ಗ, ಚ, ಝ.
10 ಭಾಗೇನ—ಕ.
11 ಚೈಕವಕ್ತ್ರೇಣ ಸಂಯುತಮ್—ಫ.

ತ್ರಿಣೇತ್ರಂ[1] ಚಾರುವದನಂ
ಸರ್ವಾವಯವಸುಂದರಮ್[2] ।
[3]ಕೃಷ್ಣಾ ಪರಶುಹಸ್ತಂ ಚ
ವರಾಭಯಚತುರ್ಭುಜಮ್ ॥ ॥ ೫೯ ॥

[4]ಏವಂ ಲಕ್ಷಣಸಂಯುಕ್ತಂ
ಲಿಂಗಮೂರ್ತಮುದಾಹೃತಮ್ ।
ಏವಮೇಕಾನನೋಪೇತಾ[5]
ದಿವ್ಯಲಿಂಗಾಕೃತಿರ್ಭವೇತ್[6] ॥ ॥ ೬೦ ॥

[7]ಮೂರ್ತ[8]ಸಾದಾಖ್ಯಮಿತ್ಯುಕ್ತಂ[9]
ಕರ್ತೃಸಾದಾಖ್ಯಮುಚ್ಯತೇ ।

—ಮೂರು ಕಣ್ಣುಗಳು, ಸುಂದರವಾದ ಮುಖ, ಸುಂದರವಾದ ಸಮಸ್ತ ಅವಯವಗಳಿಂದ ಕೂಡಿ, ಎರಡು ಕೈಗಳಲ್ಲಿ ಕೃಷ್ಣಮೃಗ ಮತ್ತು ಪರಶುಗಳನ್ನೂ, ಮತ್ತೆರಡು ಕೆಗಳಲ್ಲಿ ವರ ಮತ್ತು ಅಭಯ ಮುದ್ರೆಗಳನ್ನೂ ಧರಿಸಿದ ॥ ೫೯ ॥

—ಸ್ವರೂಪವನ್ನು ಲಿಂಗರೂಪವಾದ ಮೂರ್ತಸಾದಾಖ್ಯವೆಂದು ಹೇಳುತ್ತಾರೆ. ಹೀಗೆ ಒಂದು ಮುಖವನ್ನುಳ್ಳ ದಿವ್ಯಲಿಂಗಾಕಾರವಾಗುತ್ತದೆ. ॥ ೬೦ ॥

ಮೂರ್ತಸಾದಾಖ್ಯನಿರೂಪಣೆಯ ನಂತರ ಕರ್ತೃಸಾದಾಖ್ಯವನ್ನು ಹೇಳುತ್ತೇನೆ.

---

1 ತ್ರಿಣಯನಂ—ಟ, ಠ.
2 ಸಂಯುತಂ—ಖ, ಗ, ಚ, ಝ.
3 ಈ ಅರ್ಧಪದ್ಯ—ಕ, ಘ, ಛ, ಟ, ಠ. ಡ, ಢ, ತ, ಥ, ದ, ಧ. ಪ, ಬ. ಪುಸ್ತಕಗಳಲ್ಲಿಲ್ಲ.
4 ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ. ಪುಸ್ತಕಗಳಲ್ಲಿಲ್ಲ
5 ಏವಮೇಕಾಸನೋಪೇತಂ—ಖ, ಗ, ಚ, ಝ.
ಏಕಮೇಕಾನಮೋಪೇತಂ—ಥ, ದ, ಬ.
6 ಲಿಂಗಾಕೃತಿರಿತೀರಿತಾ—ಧ.
ಲಿಂಗಮೂರ್ತಿರುದಾಹೃತಾ—ಝ. (ಪಾ)
7 ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ. ತ, ಥ, ಧ ಪ. ಪುಸ್ತಕಗಳಲ್ಲಿಲ್ಲ.
8 ಮೂರ್ತಿ—ಖ, ಗ, ಚ, ಝ.
9 ಮೇವೋಕ್ತಂ—ಢ.

ಜ್ಞಾನಂ ಚೈವ ಪ್ರತಿಷ್ಠಾ ಚ[1]
ತಸ್ಯ[2] ಪರ್ಯಾಯವಾಚಕಃ ॥ ॥ ೬೧ ॥

ಜ್ಞಾನಶಕ್ತೇರ್ದಶಾಂ[3]ಶೇನ
ಕರ್ತೃಸಾದಾಖ್ಯಸಂಭವಃ[4] ।
ಜ್ಞಾನಂ ಕರ್ತೃಸ್ವಭಾವತ್ವಾತ್[5]
ಕರ್ತೃನಾಮೇತಿ ಕೀರ್ತಿತಮ್ ॥ ॥ ೬೨ ॥

[6]ಜ್ಞಾನಂ ಹಿ[7] ಶುದ್ಧಭಾವತ್ವಾತ್[8]
ಸ್ಫಾಟಿಕಾಭಾಸ[9]ಮುಚ್ಯತೇ ।
ದಿವ್ಯಲಿಂಗಂ ಮಹಾಸ್ಥೂಲಂ
ಮಹಾದೀರ್ಘತಯಾಽನ್ವಿತಮ್ ॥ ॥ ೬೩ ॥

ನಿಷ್ಕಲಸ್ವರೂಪವಾದ ಜ್ಞಾನಶಕ್ತಿಯೇ ಪ್ರತಿಷ್ಠಾಕಲೆ. ಇದು ಜ್ಞಾನಶಕ್ತಿಯ ಪರ್ಯಾಯನಾಮ. ॥ ೬೧ ॥

ಜ್ಞಾನಶಕ್ತಿಯ ಹತ್ತರಲ್ಲೊಂದಂಶದಿಂದ ಕರ್ತೃಸಾದಾಖ್ಯವು ಪ್ರಾದುರ್ಭವಿಸುತ್ತದೆ. ಚಿಚ್ಛಕ್ತಿಗೆ ಜಗನ್ನಿರ್ಮಾಣಸ್ವಭಾವವಿರುವುದರಿಂದ ಇದನ್ನು ಕರ್ತೃಸಾದಾಖ್ಯವೆನ್ನುತ್ತಾರೆ. ॥ ೬೨ ॥

ಜ್ಞಾನತತ್ತ್ವವನ್ನು ಅದರ ಶುದ್ಧಸ್ವಭಾವದಿಂದ ಸ್ಫಟಿಕಪ್ರಭೆಯುಳ್ಳದ್ದೆಂದು ಹೇಳುತ್ತಾರೆ. ಈ ಶಿವಲಿಂಗವು ಅತಿಸ್ಥೂಲವೂ ಅತಿದೀರ್ಘವೂ ಆದುದು. ॥ ೬೩ ॥

---

1 ಜ್ಞಾನಶಕ್ತಿಃ ಪ್ರತಿಷ್ಠಾಚ—ಫ.
2 ತಸ್ಯಾಃ—ಖ, ಗ, ಜ, ಝ.
3 ಶಕ್ತಿದಶಾಂ—ಖ, ಗ, ಜ, ಝ.
4 ಖ್ಯಮುದ್ಭವಂ—ಕ, ಘ, ಛ, ಟ, ಠ, ಡ, ಢ, ತ, ಥ.
5 ಜ್ಞಾನಶಕ್ತೇಃ ಸ್ವಭಾವತ್ವಾತ್—ಫ.
6 ಈ ಅರ್ಧಪದ್ಯ ಕ, ಘ, ಛ, ಟ, ಠ, ಡ, ತ, ಥ, ದ, ಪ. ಪುಸ್ತಕಗಳಲ್ಲಿಲ್ಲ.
7 ಜ್ಞಾನಸ್ಯ—ಫ.
8 ರುದ್ಧರೂಪತ್ವಾತ್—ಖ, ಗ, ಜ, ಝ.
9 ಸ್ಫಟಿಕಾಭಾಸ—ಕ, ಠ.

[1]ತಸ್ಯ ಮಧ್ಯ[2]ಸ್ಥಿತಾ ಮೂರ್ತಿಃ
ಈಶ್ವರಃ ಸರ್ವಕಾರಣಮ್ ।
ಚತುರ್ಮೂರ್ಧಂ ಚತುರ್ವಕ್ತ್ರಂ[3]
ನೇತ್ರದ್ವಾದಶಸಂಯುತಮ್[4] ॥ ॥ ೬೪ ॥

ಚತುರಾಸ್ಯಚತುರ್ವರ್ಣಂ
ವಸುಶ್ರೋತ್ರಸಮನ್ವಿತಮ್ ।
ಅಷ್ಟಹಸ್ತಂ ದ್ವಿಪಾದಂ ಚ
ಸರ್ವಲಕ್ಷಣಸಂಯುತಮ್[5] ॥ ॥ ೬೫ ॥

ಶೂಲಂ ಪರಶುಖಡ್ಗಂ ಚಾ-
ಪ್ಯಭಯಂ ದಕ್ಷಿಣೇ ಕರೇ ।
ಪಾಶಂ ನಾಗಂ ಚ ಘಂಟಾಂ ಚ
ವರದಂ ವಾಮಹಸ್ತಕೇ ॥ ॥ ೬೬ ॥

ಆ ಶಿವಲಿಂಗದ ಮಧ್ಯದಲ್ಲಿರುವ ಸಮಸ್ತಕ್ಕೂ ಕಾರಣವಾದ ಮೂರ್ತಿಯು ಈಶ್ವರ. ಈ ಮೂರ್ತಿಯು:—ನಾಲ್ಕು ತಲೆಗಳು, ನಾಲ್ಕು ಮುಖಗಳು, ಹನ್ನೆರಡು ಕಣ್ಣುಗಳು— ॥ ೬೪ ॥

—ನಾಲ್ಕು ಮುಖಗಳಲ್ಲಿ ನಾಲ್ಕು ಬಣ್ಣಗಳು, ಎಂಟು ಕಿವಿಗಳು, ಎಂಟು ಕೈಗಳು ಮತ್ತು ಎರಡು ಪಾದಗಳನ್ನುಳ್ಳದ್ದಾಗಿ ಸಕಲ ಲಕ್ಷಣಗಳಿಂದ ಕೂಡಿ— ॥ ೬೫ ॥

ಬಲದ ನಾಲ್ಕು ಹಸ್ತಗಳಲ್ಲಿ ಕ್ರಮವಾಗಿ ತ್ರಿಶೂಲ, ಪರಶು, ಖಡ್ಗಾಯುಧ, ಅಭಯಮುದ್ರೆಗಳನ್ನೂ, ಮತ್ತು ಎಡದ ನಾಲ್ಕು ಹಸ್ತಗಳಲ್ಲಿ ಕ್ರಮವಾಗಿ ಪಾಶ, ಸರ್ಪ, ಘಂಟೆ ಮತ್ತು ವರದ ಮುದ್ರೆಗಳನ್ನೂ ಧರಿಸಿ— ॥ ೬೬ ॥

---

1 ಈ ಅರ್ಧಪದ್ಯ—ಡ, ಪ. ಪುಸ್ತಕಗಳಲ್ಲಿಲ್ಲ.
2 ಮಧ್ಯೇ—ಠ, ಢ, ತ, ದ.
3 ಚತುರ್ಮೂರ್ಧಚತುರ್ವಕ್ತ್ರ—ಝ.
ಪಂಚಮೂರ್ಧ್ನಾಚತುರ್ವಕ್ತ್ರಂ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.
4 ಭಿರ್ಯುತಂ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.
5 ಸಂಯುಕ್ತಂ—ಛ, ಧ.

[1]ಸರ್ವಾಯವಸಂಯುಕ್ತಂ
ಸರ್ವಾಭರಣಭೂಷಿತಮ್ ।
[2]ಏವಂ ತಮೀಶ್ವರಂ ವಿದ್ಯಾತ್
ಕರ್ತೃಸಾದಾಖ್ಯಲಿಂಗಕಮ್[3] ॥ ॥ ೬೭ ॥

ಕರ್ತೃಸಾದಾಖ್ಯಮಿತ್ಯುಕ್ತಂ[4]
ಕರ್ಮಸಾದಾಖ್ಯಮುಚ್ಯತೇ ।
ನಿವೃತ್ತಿಃ ಸ್ಯಾತ್ ಕ್ರಿಯಾಶಕ್ತಿಃ
ತಸ್ಯಾಃ ಪರ್ಯಾಯವಾಚಕಃ ॥ ॥ ೬೮ ॥

ಕ್ರಿಯಾಶಕ್ತೇಃ ದಶಾಂಶೇನ[5]
ಕರ್ಮಸಾದಾಖ್ಯಸಂಭವಃ[6] ।

ಸಕಲಾವಯುವಗಳಿಂದ ಕೂಡಿ ಸಮಸ್ತಾಭರಣಗಳಿಂದ ಅಲಂಕೃತವಾಗಿರುತ್ತದೆ. ಈ ರೀತಿಯ ಈಶ್ವರಸ್ವರೂಪವನ್ನು ಕರ್ತೃಸಾದಾಖ್ಯಲಿಂಗವೆಂದು ತಿಳಿಯಬೇಕು. ॥ ೬೭ ॥

ಕರ್ತೃಸಾದಾಖ್ಯದನಂತರ ಕರ್ಮಸಾದಾಖ್ಯವನ್ನು ನಿರೂಪಿಸುವೆನು. ನಿಷ್ಕಲವಾದ ಕ್ರಿಯಾಶಕ್ತಿಯೇ ನಿವೃತ್ತಿಕಲೆ. ಇದು ಕ್ರಿಯಾಶಕ್ತಿಯ ಪರ್ಯಾಯನಾಮ. ॥ ೬೮ ॥

ನಿಷ್ಕಲಕ್ರಿಯಾಶಕ್ತಿಯ ಹತ್ತರಲ್ಲೊಂದಂಶದಿಂದ ಕರ್ಮಸಾದಾಖ್ಯದ ಆವಿರ್ಭಾವವಾಗುತ್ತದೆ. ಕ್ರಿಯೆಯನ್ನು ಕರ್ಮವೆಂದು ತಿಳಿಯಬೇಕು. ಆದ್ದರಿಂದ ಇದಕ್ಕೆ ಕರ್ಮಸಾದಾಖ್ಯವೆಂಬ ಹೆಸರು ಬಂದಿದೆ. ಮನ್ತ್ರಜಾತಪಟಲದಲ್ಲಿ ನಿರೂಪಿಸಲ್ಪಡುವ

---

1 ಈ ಅರ್ಧಪದ್ಯ ಡ, ಪ. ಪುಸ್ತಕಗಳಲ್ಲಿಲ್ಲ.
2 ಈ ಅರ್ಧಪದ್ಯ ಪ. ಪುಸ್ತಕದಲ್ಲಿಲ್ಲ.
3 "ಏವಂ ತದ್ಧೀಶ್ವರಂ ಪ್ರೋಕ್ತಂ ಕರ್ತೃಲಿಂಗಮಿಹೋಚ್ಯತೇ"—ಕ, ಖ, ಘ, ಛ, ಟ, ಠ, ಢ, ತ, ಥ, ಪ.
4 ಕರ್ತೃಸಾದಾಖ್ಯಮೇವೋಕ್ತಂ—ಫ.
ಕರ್ತೃಲಿಂಗಸಮಾಹ್ವಯಂ—ಥ.
5 ಶಕ್ತಿದಶಾಂಶೇನ—ಖ, ಗ, ಚ, ಝ.
6 ಖ್ಯಮುದ್ಭವಂ—ಕ, ಖ, ಘ, ಛ, ಟ, ಠ, ಡ, ಢ, ತ, ದ, ಪ, ಬ.
ಖ್ಯಮುದ್ಭವಃ—ಥ, ಫ.

ಕ್ರಿಯಾ ಕರ್ಮೇತಿ[1] ವಿಜ್ಞೇಯಾ[2]
 ತಸ್ಮಾತ್ ಕರ್ಮೇತಿ[3] ನಾಮತಃ ।
ಲಿಂಗಪೀಠಪ್ರಕಾರೇಣ
 ಕರ್ಮಸಾದಾಖ್ಯಲಕ್ಷಣಮ್ ॥ ॥ ೧೯ ॥

ನಾದೋ ಲಿಂಗಮಿತಿ ಜ್ಞೇಯಃ[4]
 ಬಿಂದುಃ ಪೀಠಮುದಾಹೃತಃ[5] ।
ನಾದಬಿಂದುಯುತಂ[6] ರೂಪಂ
 ಲಿಂಗಾಕಾರಮಿಹೋಚ್ಯತೇ[7] ॥ ॥ ೨೦ ॥

ಲಯಾದಿಭೇದಃ ಪ್ರಾಗುಕ್ತಃ
 ಯ ಉಪಾಧೌ ಶಿವಸ್ಯ ತು ।
ಸ ಬಿಂದುರಿತಿ ಮನ್ತವ್ಯಃ[8]
 ಸೈವ[9] ಕುಣ್ಡಲಿನೀ ಮತಾ ॥ ॥ ೨೧ ॥

ಪಂಚಸಾದಾಖ್ಯಮುಖವಾದ ಲಿಂಗದ ಮತ್ತು ಸಮಸ್ತತತ್ತ್ವಗಳ ಜನ್ಮಸ್ಥಲವಾದ ಪೀಠದ ಪ್ರಕಾರದಿಂದಲೂ ಕರ್ಮಸಾದಾಖ್ಯದ ಸ್ವರೂಪವು ಪ್ರಸಿದ್ಧವಾಗಿದೆ. ॥ ೧೯ ॥

ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿ ಪತಿಯೆಂದು ಪ್ರಸಿದ್ಧವಾದ ಬ್ರಹ್ಮವೇ ನಾದ. ಈ ನಾದವನ್ನು ಪಂಚಸಾದಾಖ್ಯಸ್ವರೂಪವಾದ ಲಿಂಗವೆಂದು ಭಾವಿಸಬೇಕು. ಬಿಂದುವು ಸಮಸ್ತಮಂತ್ರದೇವತಾಜನ್ಮಸ್ಥಲವಾದ ಪೀಠ. ಈ ನಾದ ಬಿಂದುಗಳಿಂದ ಕೂಡಿದ ಸ್ವರೂಪವೇ ಲಿಂಗ. ॥ ೨೦ ॥

ಹಿಂದೆ ಶಿವತತ್ತ್ವದ ಉಪಾಧಿಯಲ್ಲಿ ನಿರೂಪಿತವಾದ ಲಯಾದಿಗಳ ಅಧಿಕಾರ ವೆಂಬ ತ್ರಿತತ್ತ್ವಭೇದವು ಬಿಂದು. ಈ ಬಿಂದುರೂಪವಾದ ಪರಾಶಕ್ತಿಯೇ ಕುಂಡಲಿನೀ ಶಕ್ತಿ. ॥ ೨೧ ॥

---

1 ಕರ್ಮಾಣಿ—ಡ.
2 ವಿಜ್ಞೇಯಂ—ಡ.
3 ಕರ್ಮಾಣಿ—ಡ.
4 ನಾದಲಿಂಗಮಿತಿ ಜ್ಞೇಯಂ—ಖ, ಗ, ಚ, ಝ.
5 ಹೃತಂ—ಖ, ಗ, ಚ, ಝ.
6 ಬಿಂದುನಾದಯುತಂ—ಘ, ಛ, ಟ, ಠ, ಡ, ಢ, ತ, ಥ, ದ, ಬ.
7 ಮಿತಿ ಸ್ಮೃತಮ್—ಖ, ಗ, ಚ, ಝ.
8 ಮನ್ತವ್ಯಂ—ಕ, ಘ, ಛ, ಟ, ಠ, ಡ, ಢ, ತ, ಥ.
9 ಶೈವ—ಕ, ಘ, ಛ, ಟ, ಡ, ಥ.

ಚತ್ವಾರಿ ಕರ್ತೃರೂಪಾಣಿ[1]
ಕೇವಲಂ ನಾದ ಉಚ್ಯತೇ[2] ।
ಲಿಂಗಂ ಶಿವ[3] ಇತಿ ಜ್ಞೇಯಃ
ಪೀಠಂ ಶಕ್ತಿರುದಾಹೃತಾ[4] ॥ ॥ ೭೨ ॥

ಯೋನಿಲಿಂಗ[5]ಪ್ರಕಾರೇಣ
ಜಗತ್ಸೃಷ್ಟ್ಯರ್ಥಕಾರಣಮ್ ।
ತಥಾ[6] ಸಂಯೋಗಭಾವಸ್ಯ[7]
ತತ್ತ್ವಂ ಕರ್ಮೇತ್ಯುದಾಹೃತಮ್[8] ॥ ॥ ೭೩ ॥

ಬಿಂದು ಮಧ್ಯಗತೋ ನಾದಃ[9]
ನಾದಮಧ್ಯೇ ತು ಮೂರ್ತಯಃ ।

ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ ಮತ್ತು ಕರ್ತೃಸಾದಾಖ್ಯವೆಂಬ ನಾಲ್ಕು ಸಾದಾಖ್ಯಗಳನ್ನು ಮಾತ್ರ ನಾದಬ್ರಹ್ಮವೆಂದು ಕರೆಯುತ್ತಾರೆ. ನಾದಬ್ರಹ್ಮರೂಪವಾದ ಈ ಶಿವತತ್ತ್ವವನ್ನು ಲಿಂಗವೆಂದು ತಿಳಿಯಬೇಕು. ಜ್ಞಾನಶಕ್ತ್ಯಾದಿ ಚತುರ್ವಿಧಶಕ್ತಿಯು ನಾದಬ್ರಹ್ಮರೂಪಲಿಂಗಕ್ಕೆ ಪೀಠವಾಗಿದೆ. ॥ ೭೨ ॥

ಮಂತ್ರಜಾತಪಟಲದಲ್ಲಿ ಉಕ್ತವಾದ ಪೀಠಲಿಂಗಪ್ರಕಾರವಾಗಿ ಲೋಕಸೃಷ್ಟಿಗೆ ಕಾರಣವಾದ ಶಿವಶಕ್ತಿಗಳ ಅವಿನಾಭಾವಸಂಯೋಗಭಾವರೂಪವಾದ ತತ್ತ್ವವು ಕರ್ಮಸಾದಾಖ್ಯ. ॥ ೭೩ ॥

ಪರಾಶಕ್ತಿಸ್ವರೂಪವಾದ ಬಿಂದುವಿನ ಮಧ್ಯದಲ್ಲಿ ನಾದಬ್ರಹ್ಮವಾದ ಶಿವತತ್ತ್ವ

---

1 ರೂಪಾದಿ—ಕ, ಘ, ಛ, ಟ, ಡ, ಢ, ತ, ಥ.
2 ನಾದಮೀರಿತಂ—ಖ, ಗ, ಚ, ಝ.
3 ಶಿವಂ—ಕ, ಗ, ಘ, ಚ, ಛ, ಟ, ಠ, ಡ, ಢ, ತ, ಥ, ಪ.
ಶಮ್ಭುಃ—ಫ.
4 ರುದಾಹೃತಮ್—ಕ, ಖ, ಘ, ಛ, ಝ, ಟ, ಠ, ಡ, ಢ, ತ, ಥ.
5 ನಾದಬಿಂದು—ಧ.
6 ಸದಾ—ಫ.
7 ಭಾವೇನ—ಖ, ಗ, ಚ, ಝ.
ಭಾವತ್ವಾತ್—ಫ.
8 ಕರ್ಮರೂಪಮುದಾಹೃತಮ್—ಖ, ಗ, ಚ, ಝ, ಫ.
9 ಗತಂ ನಾದಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

ಮೂರ್ತಿಮಧ್ಯಗತಂ ತತ್ತ್ವಂ
ತತ್ತ್ವಮಧ್ಯಗತಃ ಶಿವಃ ॥ ॥ ೭೪ ॥

[1]ಶಿವಮಧ್ಯಗತಂ ನೃತ್ತಂ
ನೃತ್ತಮಧ್ಯೇ ತು ಶಾಂತಕಮ್ ।
ಅತೀತಂ ಶಾಂತಮಧ್ಯೇ ತು
ಶಾಂತ್ಯತೀತಂ ಪರಾತ್ಪರಮ್ ॥ ॥ ೭೫ ॥

ಏವಂ ತತ್ತ್ವಮಯಂ[2] ಲಿಂಗಂ
ಸರ್ವತತ್ತ್ವಾಲಯಂ[3] ವಿದುಃ ।
ಲಿಂಗೇನ[4] ಜಾಯತೇ ತತ್ತ್ವಂ[5]
ಜಗತ್ ಸ್ಥಾವರಜಂಗಮಮ್ ॥ ॥ ೭೬ ॥

ವಿರುತ್ತದೆ. ಆ ಶಿವತತ್ತ್ವದ ಮಧ್ಯದಲ್ಲಿ ಶಿವಮೂರ್ತಿಭೇದಗಳಿರುತ್ತವೆ. ಆ ಶಿವ ಮೂರ್ತಿಗಳ ಮಧ್ಯದಲ್ಲಿ ಶಿವಶಕ್ತಿಗಳ ಕೂಟವಾದ ಲಿಂಗತತ್ತ್ವವಿರುತ್ತದೆ. ಆ ಲಿಂಗ ತತ್ತ್ವದ ಮಧ್ಯದಲ್ಲಿ ಮಂತ್ರರೂಪನಾದ ಶಿವನು ಇರುತ್ತಾನೆ. ॥ ೭೪ ॥

ನೃತ್ತವು ಶಿವನ ಮಧ್ಯದಲ್ಲಿರುತ್ತದೆ. ಶಾಂತಿಕಲೆಯು ನೃತ್ತದ ಮಧ್ಯದಲ್ಲಿರು ತ್ತದೆ. ಎಲ್ಲ ಶಕ್ತಿಗಳನ್ನೂ ಮೀರಿ ನಿಂತ ಪರಾತ್ಪರವಾದ ಶಾಂತ್ಯತೀತ ಕಲೆಯು ಶಾಂತಿಯ ಮಧ್ಯದಲ್ಲಿರುತ್ತದೆ. ॥ ೭೫ ॥

ಹೀಗೆ ಶಿವಶಕ್ತಿಗಳ ಕೂಟವಾದ ಲಿಂಗವನ್ನು ಮಹದಾದಿ ಸಮಸ್ತ ತತ್ತ್ವಗಳಿಗೂ ಆಶ್ರಯವೆಂದು ತಿಳಿಯುತ್ತಾರೆ. ಈ ಲಿಂಗದಿಂದ ಚರಾಚರಾತ್ಮಕವಾದ ಜಗತ್ತತ್ತ್ವವು ಹುಟ್ಟುತ್ತದೆ. ॥ ೭೬ ॥

---

1 ಈ ಪದ್ಯ ಡ, ಪ, ಪುಸ್ತಕಗಳಲ್ಲಿಲ್ಲ.
2 ಏತಚ್ಛಿವಮಯಂ—ಖ, ಗ, ಜ, ಝ.
ಏತತ್ತತ್ತ್ವಮಯಂ—ಕ, ಘ, ಟ, ಠ, ಡ, ಢ, ತ, ಥ, ದ, ಧ, ಪ, ಬ.
3 ತತ್ತ್ವಾಶ್ರಯಂ—ಘ.
4 ಲಿಂಗೇ ತು—ಖ, ಗ, ಜ, ಝ.
5 ಸರ್ವಂ—ಕ, ಗ, ಜ, ಝ.
ತತ್ರ—ಥ.

[1]ತಸ್ಮಾಲ್ಲಿಂಗಂ ವಿಶೇಷೇಣ
ಕರ್ಮರೂಪಮುದಾಹೃತಮ್ ।
ಕರ್ಮೋದಯೇ ಚ ಸೃಷ್ಟಿಃ ಸ್ಯಾತ್[2]
ಕರ್ಮಾಂತೇ ಸಂಹೃತಿರ್ಭವೇತ್ ॥ ॥ ೭೭ ॥

ಏತತ್ಕರ್ಮಸ್ವ[3]ರೂಪಂ ತು[4]
ಸೃಷ್ಟಿಸ್ಥಿತಿಲಯಾವಹಮ್[5] ।
ಪಂಚಸಾದಾಖ್ಯಮೇವೋಕ್ತಂ[6]
ಕರ್ಮಸಾದಾಖ್ಯಮುಚ್ಯತೇ[7] ॥ ॥ ೭೮ ॥

ಶಿವಸಾದಂ ವಿಶೇಷೇಣ
ಶಿವರೂಪಂ ಸಮಾಶ್ರಿತಮ್ ।

ಆದ್ದರಿಂದ ಲಿಂಗವನ್ನು ವಿಶೇಷವಾಗಿ ಕರ್ಮಸಾದಾಖ್ಯವೆಂದು ಹೇಳುತ್ತಾರೆ. ಕರ್ಮೋದಯದಲ್ಲಿ ಸಮಸ್ತ ಜಗತ್ತಿನ ಸೃಷ್ಟಿಯಾಗುತ್ತದೆ. ಕರ್ಮಾವಸಾನದಲ್ಲಿ ಸಮಸ್ತಜಗತ್ತಿನ ಸಂಹಾರವಾಗುತ್ತದೆ. ॥ ೭೭ ॥

ಈ ಕರ್ಮಸಾದಾಖ್ಯಸ್ವರೂಪವೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣ. ಈ ವರೆಗೆ ಶಿವಾದಿ ಕರ್ಮಾಂತವಾದ ಪಂಚಸಾದಾಖ್ಯಗಳನ್ನೂ ತಿಳಿಸಲಾಯಿತು. ಈಗ ಕರ್ಮ ಸಾದಾಖ್ಯವನ್ನು ಮತ್ತೆ ವಿವರಿಸುತ್ತೇನೆ. ॥ ೭೮ ॥

ಮಹಾಸೇನನೇ ! ಶಿವಸಾದಾಖ್ಯವು ವಿಶೇಷವಾಗಿ ಶಿವತತ್ತ್ವಸ್ವರೂಪವನ್ನೂ,

---

1 ಈ ಅರ್ಧಪದ್ಯ ಡ, ಪ. ಪುಸ್ತಕಗಳಲ್ಲಿಲ್ಲ.
2 ಸೃಷ್ಟಿಶ್ಚ—ಕ, ಘ, ಛ, ಟ, ಠ, ಡ, ಥ, ತ, ಪ, ಬ.
3 ಏತತ್ಕರ್ಮೇಶ—ಜ, ಝ.
ಏತತ್ಕರ್ಮ ಚ—ಫ.
4 ಚ—ಫ.
5 ಲಯಾವಹಃ—ಕ.
ಲಯಾನ್ವಿತಂ—ಫ.
6 ಖ್ಯಯೋಗೇನ—ಗ, ಚ, ಝ.
7 ಸರ್ವಸಾದಾಖ್ಯಮುಚ್ಯತೇ—ಟ.
ಶಿವರೂಪಂ ಸಮಾಶ್ರಿತಮ್—ಫ.

[1]ಅಮೂರ್ತಂ[2] ತು[3] ಮಹಾಸೇನ ।
ಶಿವಸಾದಾಖ್ಯಮಾಶ್ರಿತಮ್ ॥ ॥ ೭೯ ॥

ಮೂರ್ತ[4]ರೂಪಂ ವಿಶೇಷೇಣ
ತ್ವಮೂರ್ತಾದಿ ಸಮಾಶ್ರಿತಮ್ ।
[5]ಕರ್ತೃಸಾದಾಖ್ಯಮೇವಂ ಹಿ
ಸಮೂರ್ತಾದಿ[6] ಸಮಾಶ್ರಿತಮ್ ॥ ॥ ೮೦ ॥

[7]ಕರ್ಮರೂಪಂ ಕ್ರಮೇಣೈವ
ಕರ್ತ್ರಾದಿ ತು ಸಮಾಶ್ರಿತಮ್ ।
ಅನೇನೈವ ಪ್ರಕಾರೇಣ[8]
ಚೈಕೈಕಂ[9] ತು ಸಮಾಶ್ರಿತಮ್ ॥ ॥ ೮೧ ॥

ಅಮೂರ್ತಸಾದಾಖ್ಯವು ಶಿವಸಾದಾಖ್ಯವನ್ನೂ ಆಶ್ರಯಿಸಿರುತ್ತದೆ. ॥ ೭೯ ॥

ಮೂರ್ತಸಾದಾಖ್ಯರೂಪವು ವಿಶೇಷವಾಗಿ ಅಮೂರ್ತಾದಿ ಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ಹೀಗೆಯೇ ಕರ್ತೃಸಾದಾಖ್ಯವು ಮೂರ್ತಾದಿಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ॥ ೮೦ ॥

ಕರ್ಮಸಾದಾಖ್ಯರೂಪವು ಪೂರ್ವೋಕ್ತಕ್ರಮದಿಂದ ಕರ್ತ್ರಾದಿಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ಈ ಪ್ರಕಾರವಾಗಿಯೇ ಒಂದೊಂದು ಸಾದಾಖ್ಯವೂ ಪೂರ್ವ ಪೂರ್ವಸಾದಾಖ್ಯಗಳನ್ನು ಆಶ್ರಯಿಸಿರುತ್ತದೆ. ॥ ೮೧ ॥

---

1 ಈ ಅರ್ಧಪದ್ಯ ಧ ಪುಸ್ತಕದಲ್ಲಿಲ್ಲ.
2 ಅಮೂರ್ತಿಂ—ಪ.
3 ಹಿ—ಫ.
4 ಮೂರ್ತಿ—ಪ, ಬ.
5 ಈ ಅರ್ಧಪದ್ಯ—ಧ, ಬ. ಪುಸ್ತಕಗಳಲ್ಲಿಲ್ಲ.
6 ಸಮೂರ್ತ್ಯಾದಿ—ಕ, ಘ, ತ, ಥ, ಫ.
ಸ್ವಮೂರ್ತ್ಯಾದಿ—ಟ.
7 ಈ ಅರ್ಧಪದ್ಯ ಫ. ಪುಸ್ತಕದಲ್ಲಿಲ್ಲ.
8 ಕ್ರಮೇಣೈವ—ಫ.
9 ಏಕೈಕಂ—ಕ, ಘ, ಛ, ಟ, ಠ, ಡ, ದ, ಪ, ಬ.

ತಸ್ಮಾತ್ ಕರ್ಮಸ್ವ[1]ರೂಪಂ ತು
ಪಂಚತತ್ತ್ವಾ[2]ಶ್ರಿತಂ[3] ವಿದುಃ ।
ಸರ್ವ[4]ತತ್ತ್ವಾತ್ಮಕಂ ಜ್ಞೇಯಂ
ತತ್ತ್ವಾ[5]ಧಾರಮಿತಿ ಸ್ಮೃತಮ್[6] ॥ ॥ ೮೨ ॥

[7]ಏತದ್ವೈ ಕರ್ಮಸಾದಾಖ್ಯಂ
ಪಿಂಡರೂಪಮಿಹೋಚ್ಯತೇ ।
ಪಿಂಡಸ್ಥಂ ಪಿಂಡಮಧ್ಯಸ್ಥಂ
ಪಿಂಡೇನ ತು ಘಟೀಕೃತಮ್[8] ॥ ॥ ೮೩ ॥

ಆದ್ದರಿಂದ ಕರ್ಮಸಾದಾಖ್ಯಸ್ವರೂಪವು ಶಿವಸಾದಾಖ್ಯಾದಿ ಪಂಚಸಾದಾಖ್ಯ ತತ್ತ್ವಗಳನ್ನು ಆಶ್ರಯಿಸಿರುತ್ತದೆಂದು ತಿಳಿಯಬೇಕು. ಕರ್ಮಸಾದಾಖ್ಯವು ಸಮಸ್ತ ತತ್ತ್ವಗಳ ಸ್ವರೂಪವಾದುದು ಮತ್ತು ಇದು ಶಿವಾದಿ ಪೃಥಿವ್ಯಂತವಾದ ಸರ್ವತತ್ತ್ವಗಳಿಗೂ ಆಶ್ರಯ. ॥ ೮೨ ॥

ಈ ತಂತ್ರವು ಕರ್ಮಸಾದಾಖ್ಯವನ್ನು ಪಿಂಡರೂಪವಾದುದೆಂದು ನಿರೂಪಿಸುತ್ತದೆ. ಮಂತ್ರರೂಪವಾದ ಶಿವತತ್ತ್ವವು ಈ ಕರ್ಮಸಾದಾಖ್ಯಲಿಂಗತತ್ತ್ವದಲ್ಲಿರುವುದರಿಂದ ಪಿಂಡವೆನಿಸುತ್ತದೆ. ಮೂರ್ತಿರೂಪವಾದ ಪಿಂಡಮಧ್ಯದಲ್ಲಿರುವುದರಿಂದ ಇದು ಪಿಂಡಮಧ್ಯಸ್ಥವೆನಿಸುತ್ತದೆ. ಮೊದಲೇ ಇದ್ದ ಮಣ್ಣಿನಿಂದ ಘಟವಾಗುವಂತೆ ಇದು ಪೂರ್ವಪಿಂಡದಿಂದ ಆವಿರ್ಭಾವಗೊಳ್ಳುತ್ತದೆ. ॥ ೮೩ ॥

---

1 ಕರ್ಮೇಶ—ಝ.
2 ಪಂಚಮೂರ್ತಿ—ಫ.
3 ಶ್ರಯಂ—ದ.
4 ಪಂಚ—ಖ, ಗ, ಚ, ಝ.
5 ಸರ್ವಾ—ಖ, ಗ, ಚ, ಝ.
6 ಸಮಾಶ್ರಿತಂ—ಕ, ಖ, ಗ, ಘ, ಚ, ಛ, ಝ.
7 ಏತದ್ವೈ ಮೂರ್ತಿಪಿಂಡತ್ವಾತ್ ಪಿಂಡಕಾಯಮಿತಿ ಸ್ಮೃತಮ್—ಖ, ಗ, ಝ.
ಏತದ್ವೈ ಮೂರ್ತಿಪಿಂಡತ್ವಾತ್ ಪಿಂಡಕಾರ್ಯಮಿತಿ ಸ್ಮೃತಮ್—ಚ.
8 ಪುಟೀಕೃತಂ—ಖ, ಗ, ಚ, ಝ.

ಪಿಂಡೇನ ಪಿಂಡಿತಂ ಪಿಂಡಂ
ಪಿಂಡರೂಪಮುದಾಹೃತಮ್ ।

[1]ಅತೀತಕಾಲೇ ಮೃತ್ಪಿಂಡಂ
ರೂಪಂ ಕುಂಭೇ ವ್ಯವಸ್ಥಿತಮ್ ॥ ॥ ೮೪ ॥

ಪಂಚಾತ್ಮಕಮಭೂತ್ ಪಿಂಡಂ
ಧಾತುಬದ್ಧಗುಣಾತ್ಮಕಮ್ ।
[2]ತಸ್ಮಾದ್ವೈ ಕರ್ಮಸಾದಾಖ್ಯಂ
ಪಿಂಡರೂಪಮುದಾಹೃತಮ್ ॥ ॥ ೮೫ ॥

[3]ಏತಚ್ಛಿವಮಯಂ ಪಿಂಡಂ
ಸರ್ವತತ್ತ್ವಾಲಯಂ[4] ವಿದುಃ

ಈ ಕರ್ಮಸಾದಾಖ್ಯತತ್ತ್ವವು ಮೊದಲೇ ಇದ್ದ ಕ್ರಿಯಾಶಕ್ತಿರೂಪವಾದ ಪಿಂಡದಿಂದ ಪಿಂಡರೂಪವನ್ನು ಪಡೆದಿದೆ. ಅಲ್ಲದೇ ಇದು ಶಿವಾದಿ ಪೃಥಿವ್ಯಂತವಾದ ಸಮಸ್ತ ತತ್ತ್ವಗಳಿಗೆ ತಾನೂ ಪಿಂಡವಾಗಿದೆ. ಆದರಿಂದ ಈ ಕರ್ಮಸಾದಾಖ್ಯವನ್ನು ಪಿಂಡವೆಂದು ಹೇಳುತ್ತಾರೆ. ಹಿಂದೆ ಮಣ್ಣುಮುದ್ದೆಯಾಗಿದ್ದುದೇ ಘಟಾಕಾರವಾಗಿ ಪರಿಣಮಿಸುವಂತೆ ಈ ಕರ್ಮಸಾದಾಖ್ಯವು ಪೂರ್ವಪಿಂಡದಿಂದ ರೂಪು ಪಡೆಯುತ್ತದೆ.
॥ ೮೪ ॥

ರಕ್ತಾದಿ ಸಪ್ತಧಾತುಗಳಿಂದ ಪಡೆದ ಗುಣವನ್ನುಳ್ಳ ಪೃಥಿವ್ಯಾದಿ ಪಂಚಮಹಾಭೂತಗಳ ಸ್ವರೂಪವು ಸೃಷ್ಟಿಸಮಯದಲ್ಲಿ ಪಿಂಡವಾಗುತ್ತದೆ. ಆದ್ದರಿಂದ ಕರ್ಮಸಾದಾಖ್ಯತತ್ತ್ವವನ್ನು ಪಿಂಡರೂಪವಾದುದೆಂದು ಹೇಳುತ್ತಾರೆ. ॥ ೮೫ ॥

ಈ ಶಿವಲಿಂಗತತ್ತ್ವಾತ್ಮಕವಾದ ಪಿಂಡವನ್ನು ಸರ್ವತತ್ತ್ವಗಳಿಗೂ ಆಶ್ರಯ

---

[1] ಈ ಅರ್ಧಪದ್ಯ—ಗ, ಜ, ಝ. ಪುಸ್ತಕಗಳಲ್ಲಿಲ್ಲ.
[2-3] ಈ ಅರ್ಧಪದ್ಯ—ಡ, ಧ ಪುಸ್ತಕಗಳಲ್ಲಿಲ್ಲ.
[4] ಶ್ರಯಂ—ಫ.

ಪಂಚಮೂರ್ತಿಮಯಂ ದೇಹಂ[1]
ಪಂಚತತ್ತ್ವಾತ್ಮಕಂ ಭವೇತ್ ॥ ॥ ೮೬ ॥

ಮೂರ್ತೀನಾಂ[2] ದೇಹಭೇದೈಶ್ಚ[3]
ಗುಣೈಃ ಪಂಚಾನನಂ ವಿದುಃ[4] ।
[5]ತತ್ತದ್ಧೀತು[6]ಮಹೇಶಾದಿ-
ಸರ್ವತತ್ತ್ವಸಮುದ್ಭವಃ[7] ॥ ॥ ೮೭ ॥

[8]ತಸ್ಯ ವಕ್ತ್ರೇಷು[9] ಸಮುದ್ಭೂತಾಃ
ಸಿದ್ಧಾಂತಾಃ ಶೈವತಂತ್ರಕಾಃ[10] ।
ತತ್ತ್ವಾರ್ಥೇ ತು ಮಹೇಶಾದಿ-
ಸರ್ವತತ್ತ್ವಸಮುದ್ಭವಃ ॥ ॥ ೮೮ ॥

ವೆಂದು ತಿಳಿಯುತ್ತಾರೆ. ಪಂಚಮೂರ್ತಿಸ್ವರೂಪವಾದ ಈ ಕರ್ಮಸಾದಾಖ್ಯ ಪಿಂಡವು ಪಂಚತತ್ತ್ವಸ್ವರೂಪವುಳ್ಳದ್ದು. ॥ ೮೬ ॥

ಇವನ್ನು ಮಹೇಶಾದಿಮೂರ್ತಿಗಳ ದೇಹಭೇದ ಮತ್ತು ಗುಣಭೇದಗಳಿಂದ ಐದು ಮುಖಗಳನ್ನುಳ್ಳದ್ದೆಂದು ತಿಳಿಯುತ್ತಾರೆ. ಈ ಕರ್ಮಸಾದಾಖ್ಯದಿಂದಲೇ ಆಯಾಯಾ ಕಾರಣದಿಂದ ಮಹೇಶ್ವರ ಚಂದ್ರಧರಾದಿ ಸರ್ವತತ್ತ್ವಗಳ ಪ್ರಾದುರ್ಭಾವವಾಗುತ್ತದೆ. ॥ ೮೭ ॥

ಈ ತತ್ತ್ವದ ಮುಖಗಳಿಂದ ಶೈವತಂತ್ರಗಳೆಂಬ ಸಿದ್ಧಾಂತಗಳು ಹುಟ್ಟಿದವು. ಈ ತತ್ತ್ವದಿಂದಲೇ ಮಹೇಶಾದಿ ಸರ್ವತತ್ತ್ವಗಳು ಪ್ರಾದುರ್ಭವಿಸುತ್ತವೆ. ॥ ೮೮ ॥

---

1 ದೇಪಂ— ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ.
2 ಮೂರ್ತಾನಾಂ—ಟ, ಬ.
3 ಭೇದಸ್ತು—ಠ, ಭೇದೈಸ್ತು—ಖ, ಗ, ಚ, ಝ.
4 ನೈರ್ಯುತಂ—ಕ, ಠ, ಪ.
5 ಈ ಅರ್ಧಪದ್ಯ—ಢ, ಧ. ಪುಸ್ತಕಗಳಲ್ಲಿಲ್ಲ.
6 ತದ್ದೇಹಂ ತು—ಖ, ಗ, ಚ, ಝ.
7 ತತ್ತ್ವಾದಿಸಂಭವಃ—ಖ, ಗ, ಚ, ಝ.
8 ಈ ಪದ್ಯ—ಕ, ಘ, ಛ, ಟ, ಠ, ತ, ಥ. ಪುಸ್ತಕಗಳಲ್ಲಿಲ್ಲ.
9 ವಕ್ತ್ರೇ ತು—ಫ.
10 ಸಿದ್ಧಾಂತಾದೀತಿ ಸಂಜ್ಞಿಕಾಃ—ಫ. ಸಿದ್ಧಾಂತಾಃ ಶೈವತಾಂತ್ರಿಕಾಃ—ಖ, ಗ, ಚ, ಝ.

ಸರ್ವಜ್ಞಾನಮಯಂ ದೇವಂ[1]
ಸರ್ವಕಾರಣಕಾರಣಮ್ ।
ಏವಂ ಲಿಂಗೇ ತು[2] ಕರ್ಮೇಶಂ
ಧ್ಯಾಯೇತ್ ಸಕಲನಿಷ್ಕಲಮ್ ॥ ॥ ೮೯ ॥

ದೇಹಸ್ಥಂ ಸಕಲಂ ಜ್ಞೇಯಂ
ನಿಷ್ಕಲಂ ದೇಹವರ್ಜಿತಮ್[3] ।
ದೇಹಸ್ಯ ತತ್ಕಲಾಭೇದಃ
ಧಾತುಪಿಂಡ ಇತಿ ಸ್ಮೃತಃ[4] ॥ ॥ ೯೦ ॥

ಷಟ್ಕಲಾಶ್ಚೈವ ಶಾಸ್ತ್ರಜ್ಞಃ[5]
ಷಡಂಗೇಷು[6] ಪ್ರಕಲ್ಪಯೇತ್
ಸರ್ವಾಂಗೈರಪಿ[7] ಸಮ್ಪೂರ್ಣಂ
ಸರ್ವಾವಯವಸುಂದರಮ್[8] ॥ ॥ ೯೧ ॥

ಹೀಗೆ ಶಿವಲಿಂಗದಲ್ಲಿಯೇ ಸಮಸ್ತಜ್ಞಾನಸ್ವರೂಪನೂ, ಸಮಸ್ತಕಾರಣಗಳಿಗೆ ಕಾರಣನೂ, ಸಕಲನಿಷ್ಕಲಸ್ವರೂಪನೂ ಆದ ಈಶಾನ (ಕರ್ಮೇಶ)ಮಹಾದೇವನನ್ನು ಧ್ಯಾನಿಸಬೇಕು. ॥ ೮೯ ॥

ಮಹೇಶಾದಿದೇಹವುಳ್ಳ ಶಿವತತ್ತ್ವವನ್ನು ಸಕಲವೆಂದೂ, ದೇಹರಹಿತವಾದ ಪರಾತ್ಪರತತ್ತ್ವವನ್ನು ನಿಷ್ಕಲವೆಂದೂ ತಿಳಿಯಬೇಕು. ಲೀಲಾಮೂರ್ತಿಗಳಿಗೆ ಪರಾಶಕ್ತಿಯ ಸಂಬಂಧಿಗಳಾದ ಶಾಂತ್ಯತೀತಾದಿ ಕಲೆಗಳ ಭೇದವು ರಕ್ತಾದಿ ಧಾತುಪಿಂಡವೆಂದು ಸ್ಮರಿಸಲ್ಪಡುತ್ತದೆ. ॥ ೯೦ ॥

ಶಿವತಂತ್ರಜ್ಞನು ಶಾಂತ್ಯತೀತಾದಿ ಆರು ಕಲೆಗಳನ್ನು ಹೃದಯಾದಿ ಅಸ್ತ್ರಾಂತವಾದ ಆರು ಶಿವಾಂಗಗಳಲ್ಲೂ ಭಾವಿಸಬೇಕು. ಲೀಲಾಮೂರ್ತಿಯು ಸಮಸ್ತ ಅಂಗಗಳಿಂದ ಸಂಪೂರ್ಣವೂ ಸುಂದರವೂ ಆಗಿರುತ್ತದೆ. ॥ ೯೧ ॥

---

1 ದೇಹಂ—ಪ.
2 ಲಿಂಗಂ ತು—ಖ, ಗ, ಚ, ಝ.
3 ದೇಹಸ್ಥಃ ಸಕಲೋ ಜ್ಞೇಯಃ ನಿಷ್ಕಲೋ ದೇಹವರ್ಜಿತಃ—ಡ.
4 ದೇಹಸ್ತ್ವೇತತ್ಕಲೋಪೇತಂ ಧಾತುಪಿಂಡಮಿತಿ ಸ್ಮೃತಮ್—ಖ, ಗ, ಚ, ಝ.
5 ಧಾತ್ರೀಶ್ಚ—ಖ, ಗ, ಚ, ಝ.
6 ಷಡಂಗೇ ತು—ಪ, ಷಡಂಗೈಸ್ತು—ಖ, ಗ, ಚ, ಝ, ಷಡಂಗೈಶ್ಚ—ಧ.
7 ಸರ್ವಾಂಗಾನಿ ಚ—ಕ, ಛ, ಟ, ಠ, ಡ, ಢ, ತ, ಥ, ದ, ಪ, ಫ.
8 ಸಂಯುತಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ.

[1]ಏವಂ ತತ್ಸ್ಮೃತಿ[2]ಮಾತ್ರೇಣ
ಮೂರ್ತಿಃ[3] ಸಕಲರೂಪಧೃತ್[4] ।
ನಿಷ್ಕಲಂ ತದಭಾವೇ ತು[5]
ತಸ್ಮಾತ್[6] ಸಕಲನಿಷ್ಕಲಮ್ ॥ ॥ ೯೨ ॥

ಸವೀರ್ಯಂ ಚೈವ[7] ನಿರ್ದೇಹಂ
ಮಾಂಸಾಸ್ಥಿರುಧಿರಂ ನ ಚ[8] ।
ಇಂದ್ರಚಾಪಮಿವಾಕಾಶೇ
ದರ್ಪಣೇ ಪ್ರತಿಬಿಂಬವತ್ ॥ ॥ ೯೩ ॥

[9]ಇತ್ಯೇತನ್ಮನಸಾऽಕಲ್ಪ್ಯ
ಸಕಲಂ ನಿಷ್ಕಲಂ ಭವೇತ್ ।

ಹೀಗೆ ಸರ್ವಾವಯವಗಳ ಸ್ಮರಣಮಾತ್ರದಿಂದ ಕರ್ಮೇಶತತ್ತ್ವವು ಸಕಲಕಲೆಗಳನ್ನುಳ್ಳ ಸಾಕಾರಮೂರ್ತಿಯಾಗುತ್ತದೆ. ಅವಯವಸ್ಮರಣೆಯು ಇಲ್ಲವಾದರೆ ಅದ ನಿಷ್ಕಲತತ್ತ್ವವಾಗುತ್ತದೆ. ಆದ್ದರಿಂದ ಕರ್ಮೇಶತತ್ತ್ವವು ಸಕಲ–ನಿಷ್ಕಲತತ್ತ್ವವೆನಿಸುತ್ತದೆ. ॥ ೯೨ ॥

ಈ ಕರ್ಮೇಶತತ್ತ್ವವು ವೀರ್ಯವುಳ್ಳದ್ದಾದರೂ ದೇಹರಹಿತವಾದುದು ಮತ್ತು ಮಾಂಸ ಮೂಳೆ ರಕ್ತಗಳಿಲ್ಲದ್ದು. ಇದು ಗಗನದಲ್ಲಿ ಮೂಡುವ ಕಾಮನ ಬಿಲ್ಲಿನಂತೆ ಯೋಗಿಗಳ ಹೃದಯಾಕಾಶದಲ್ಲಿಯೂ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಯೋಗಿಗಳ ಧ್ಯಾನದರ್ಪಣದಲ್ಲಿಯೂ ತೋರುತ್ತದೆ. ॥ ೯೩ ॥

ಹೀಗೆ ಮನಸ್ಸಿನಲ್ಲಿ ಕಲ್ಪಿಸಿಕೊಂಡ ಈ ಕರ್ಮೇಶತತ್ತ್ವವು ಸಕಲವೂ ನಿಷ್ಕಲವೂ

---

1 ಈ ಪದ್ಯ—ಡ, ಪ. ಪುಸ್ತಕಗಳಲ್ಲಿಲ್ಲ.
2 ಏವಂ ತು ಸ್ಮೃತಿ—ಫ, ಏತತ್ ಸಂಸ್ಕೃತಿ—ಥ.
3 ಮೂರ್ತಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಬ.
4 ಧೃಕ್—ಖ, ಗ, ಚ, ಝ.
5 ತದಭಾವೇನ—ಫ.
6 ತತ್ ಸ್ಯಾತ್—ಖ, ಗ, ಚ, ಝ.
7 ವೈ ಚ—ಕ, ಟ, ಠ, ಪ.
8 ರುಧಿರಾಣಿ ಚ—ಖ, ಗ, ಚ, ಝ.
9 ಈ ಪದ್ಯ—ಡ, ಪ, ಪುಸ್ತಕಗಳಲ್ಲಿಲ್ಲ.

ಧ್ಯಾನಲಕ್ಷಣಮಿತ್ಯುಕ್ತಂ[1]
ಅಂಗಭೇದಸ್ತ್ವಥೋಚ್ಯತೇ[2] ॥ ॥ ೯೪ ॥

ಅಂಗಭೇದೋ[3] ಮಹಾಸೇನ !
ಚತುರ್ಭಿರ್ಭೇದ[4] ಉಚ್ಯತೇ[5] ।
ಅಙ್ಗಂ ಪ್ರತ್ಯಙ್ಗಸಾಙ್ಗಂ ಚೋ-
ಪಾಙ್ಗಂ ಚತ್ವಾರಿ ಚ ಕ್ರಮಾತ್ ॥ ॥ ೯೫ ॥

ಶಿರೋ ವಕ್ತ್ರಂ ಚ ಹೃದಯಂ
ಅಂಗಂ ಚೇತಿ ಪ್ರಕೀರ್ತಿತಮ್ ।
ಮಧ್ಯಃ ಕಣ್ಠಃ ತಥಾ ಬಾಹೂ
ನಾಭಿಃ ಗುಹ್ಯೋದರಂ ತಥಾ[6] ॥ ॥ ೯೬ ॥

ನೇತ್ರೇ ಚ ನಾಸಾ ಕರ್ಣೌ ಚ
ಪಾಣೀ ಪಾದೌ[7] ತಥಾಽಙ್ಗುಲಿಃ ।

ಆಗುತ್ತದೆ. ಇದು ಕರ್ಮೇಶತತ್ತ್ವದ ಧ್ಯಾನಸ್ವರೂಪವು. ಇನ್ನು ಅಂಗಭೇದವನ್ನು ನಿರೂಪಿಸುತ್ತೇವೆ. ॥ ೯೪ ॥

ಎಲೈ ಷಣ್ಮುಖನೇ ! ಅಂಗಭೇದವು—ಅಂಗ, ಪ್ರತ್ಯಂಗ, ಸಾಂಗ ಮತ್ತು ಉಪಾಂಗವೆಂದು ಕ್ರಮವಾಗಿ ನಾಲ್ಕುವಿಧವಾಗಿರುತ್ತದೆ. ॥ ೯೫ ॥

ಶಿರಸ್ಸು, ಮುಖ, ಹೃದಯಗಳನ್ನು ಅಂಗವೆಂದು ಕರೆಯುತ್ತಾರೆ. ॥ ೯೬ ॥

ಸೊಂಟ ಕುತ್ತಿಗೆ ತೋಳು ಹೊಕ್ಕಳು ಗುಹ್ಯಸ್ಥಾನ ಹೊಟ್ಟೆ ಕಣ್ಣು ಮೂಗು ಕಿವಿ ಕಾಲು ಬೆರಳು ತೊಡೆ ಮಂಡಿ ಕಣಕಾಲುಗಳನ್ನು ಪ್ರತ್ಯಂಗವೆಂದು ಹೇಳುತ್ತಾರೆ. ॥ ೯೭ ॥

---

1 ಮೇವೋಕ್ತಂ—ಪ, ಫ.
2 ಅಂಗಭಾವಮಥೋಚ್ಯತೇ—ಖ, ಗ, ಚ, ಝ.
3 ಭೇದಂ—ಕ, ಘ, ಛ, ಟ, ಠ, ಢ, ತ, ಥ, ಪ.
4 ರ್ಭೇದಂ—ಕ, ಘ, ಛ, ಟ, ಠ, ಢ, ತ, ಥ, ಪ.
5 ಅಂಗಭೇದಮಿದಂ ಪ್ರೋಕ್ತಂ ತಚ್ಚತುರ್ವಿಧಮುಚ್ಯತೇ—ಫ.
6 ವಕ್ಷಃ ಕಣ್ಠಸ್ತನೌ ಬಾಹುನಾಭಿಗುಹ್ಯೋದರಾಣಿ ಚ—ಖ, ಗ, ಚ, ಝ.
7 ಪಾಣಿಪಾದೌ—ಖ, ಗ, ಚ, ಝ.

ಊರೂ ಚ ಜಾನುಜಂಘೆ ಚ
ಪ್ರತ್ಯಂಗಂ ಚೇತಿ ಕೀರ್ತಿತಮ್[1] ॥ ॥ ೯೭ ॥

ಮೂರ್ತಂ ಚ[2] ಗುಣರೂಪಂ ಚ[3]
ಸಾಂಗಂ ಚೇತಿ ಪ್ರಕೀರ್ತಿತಮ್ ।
ಗುಣಚಿಹ್ನ[4]ಮಿತಿ ಜ್ಞೇಯಂ
ತದ್ಗುಣೋ ದಶಧಾ[5] ಭವೇತ್ ॥ ॥ ೯೮ ॥

ತ್ರಿಗುಣಂ ಕರ್ತೃ ಪ್ರತಾಪಂ[6]
ದುರ್ಭೇದ್ಯೋऽನುಗ್ರಹಸ್ತಥಾ[7] ।
ವಿಧಿರ್ಮಾಯಾ ವಿವರ್ಣಂ ಚ
ವರ್ಣಂ[8]ಸಂಹಾರ ಏವ ಚ ॥ ॥ ೯೯ ॥

ಆಕಾರಗೊಂಡ ಗುಣಗಳನ್ನು ಸಾಂಗವೆಂದು ಹೇಳುತ್ತಾರೆ. ಇನ್ನು ಗುಣಗಳ ಸ್ವರೂಪವನ್ನು ಹೇಳುತ್ತೇನೆ. ಶಿವತತ್ತ್ವವನ್ನು ಆಶ್ರಯಿಸಿದ ಆ ಗುಣವು ಹತ್ತು ವಿಧ. ॥ ೯೮ ॥

ಗುಣತ್ರಯ ಕರ್ತೃ ಪ್ರತಾಪ ದುರ್ಭೇದ್ಯ ಅನುಗ್ರಹ ವಿಧಿ ಮಾಯೆः ವಿವರ್ಣ ವರ್ಣ ಮತ್ತು ಸಂಹಾರ ಇವು ಹತ್ತು ಗುಣಗಳು. ಇನ್ನು ಅವುಗಳ ಲಕ್ಷಣವನ್ನು ಹೇಳುತ್ತೇನೆ :— ॥ ೯೯ ॥

---

1 ಚೇತಿ ಚೇಷ್ಯತೇ—ಫ.
2 ಮೂರ್ತಿನಾಂ—ಖ, ಗ, ಜ, ಝ.
ಮೂರ್ತಿಂ ಚ—ಫ.
3 ತು—ಫ.
4 ಗುಣಭಿನ್ನ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಬ.
5 ಣಸ್ತು ತಥಾ—ಕ, ಘ, ಟ, ಠ, ಡ, ಢ, ತ, ಥ, ದ, ಧ, ಬ.
6 ತ್ರಿಗುಣಂ ಶಕ್ತಿಖಂಡಂ ಚ—ಖ, ಗ, ಜ, ಝ,
ತ್ರಿಗುಣಂ ಕರ್ತೃಪ್ರತಾಪಶ್ಚ—ದ.
7 ದುರ್ಭೇದ್ಯಾನುಗ್ರಹಂ ತಥಾ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಫ, ಬ.
8 ವರ್ಣಾಃ— ಖ, ಗ, ಜ, ಝ.

ಏತೇ ದಶಗುಣಾಃ ಪ್ರೋಕ್ತಾಃ
ತೇಷಾಂ ಲಕ್ಷಣಮುಚ್ಯತೇ ।
ತ್ರಿಗುಣಂ ಶೂಲಮಿತ್ಯುಕ್ತಂ
ಕರ್ತಾ ಪರಶುರುಚ್ಯತೇ[1] ॥ ॥ ೧೦೦ ॥

ಖಡ್ಗಸ್ತ್ವೀಶ[2]ಪ್ರತಾಪಃ[3] ಸ್ಯಾತ್
ದುರ್ಭೇದ್ಯೋ ವಜ್ರಮಿಷ್ಯತೇ ।
ಈಶಸ್ಯಾನುಗ್ರಹಶ್ಚೈವ[4]
ತ್ವಭಯಂ ತು ಪ್ರಶಸ್ಯತೇ ॥ ॥ ೧೦೧ ॥

ನಿಧಿಃ[5] ಸ್ಯಾತ್ ನಾಗರೂಪಂ ತು
ಪಾಶೋ ಮಾಯಾಸ್ವರೂಪಕಃ[6] ।
ನಿವರ್ಣಮಙ್ಕುಶಂ[7] ಚೈವ
ವರ್ಣಂ ನಾದಾತ್ಮಕಂ[8] ವಿದುಃ ॥ ॥ ೧೦೨ ॥

ಪರಮೇಶ್ವರನಿಂದ ಸಂಭೂತವಾದ ಸತ್ತ್ವರಜಸ್ತಮೋರೂಪವಾದ ಮೂರು ಗುಣಗಳನ್ನು ತ್ರಿಶೂಲವೆಂದು ಹೇಳುತ್ತಾರೆ. ಭವಾರಣ್ಯವನ್ನು ಕತ್ತರಿಸುವ ಕರ್ತೃಗುಣವು ಕೊಡಲಿ. ॥ ೧೦೦ ॥

ಪರಮೇಶ್ವರನ (ಕರ್ಮೇಶನ) ದುಷ್ಟರನ್ನು ದಂಡಿಸುವ ಪ್ರತಾಪವು ಖಡ್ಗ. ದುರ್ಭೇದ್ಯಗುಣವು ವಜ್ರಾಯುಧ. ಅವನ ಅನುಗ್ರಹಗುಣವು ಅಭಯಮುದ್ರೆಯೆನಿಸುತ್ತದೆ. ॥ ೧೦೧ ॥

ಪರಮೇಶ್ವರನ ನಿಯತಿಗುಣವು ಸರ್ಪರೂಪವನ್ನು ಧರಿಸುತ್ತದೆ. ಪಾಶವು ಮಾಯಾಗುಣದ ಸ್ವರೂಪ. ಬರೆಯಲಾಗದ ಮೇಘಾದಿಗಳ ಧ್ವನಿಯು ನಿವರ್ಣ. ಇದನ್ನು ಅಂಕುಶವೆಂದು ತಿಳಿಯುತ್ತಾರೆ. ಬರೆಯಬಹುದಾದ ವರ್ಣವನ್ನು ನಾದವೆಂದು ಭಾವಿಸುತ್ತಾರೆ. ॥ ೧೦೨ ॥

---

1 ಶಕ್ತಿಃ ಪರಶುರೀರಿತಃ—ಖ, ಗ, ಚ, ಝ.
2 ಖಡ್ಗಂ ತ್ವೀಶ—ಖ, ಗ, ಚ, ಝ.
3 ಪ್ರತಾಪಂ—ಕ, ಘ, ಠ, ದ, ಪ. ಬ.
4 ನುಗ್ರಹಂ ಚೈವ--ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಫ, ಬ.
5 ಋದ್ಧಿಃ—ಫ.
6 ಪಾಶಂ ಮಾಯಾಸ್ವರೂಪಕಂ—ಕ, ಖ, ಗ, ಚ, ಛ, ಝ, ಟ, ಠ, ಡ, ತ, ಥ, ಫ.
7 ಮಙ್ಗಲಿಂ—ಡ.
8 ಸಾದಾತ್ಮಕಂ—ಖ, ಗ, ಚ, ಛ.

ಸಂಹಾರಸ್ತ್ವಗ್ನಿರೂಪಃ[1] ಸ್ಯಾತ್
　　ತೇಷಾಂ ಆಖ್ಯಾಃ ಪ್ರಕೀರ್ತಿತಾಃ[2] ।
ಏತಾನಿ ಗುಣರೂಪಾಣಿ[3]
　　ಸಾಂಗಾನಿ ಚ ಯಥಾಕ್ರಮಮ್[4] ॥ ॥ ೧೦೩ ॥

ವಸ್ತ್ರೋಪವೀತಮಾಲ್ಯಾನಿ[5]
　　ಗಂಧಾಶ್ಚಾಭರಣಂ[6] ತಥಾ[7] ।
ತಥೈವಾವರಣಂ[8] ಚೈವ
　　ಹ್ಯುಪಾಂಗಂ ಚೇತಿ ಕೀರ್ತಿತಮ್[9] ॥ ॥ ೧೦೪ ॥

[10]ಅಂಗಭೇದಸ್ತ್ವಿತಿ ಪ್ರೋಕ್ತಃ[11]
　　ತತ್ಸ್ವರೂಪ[12]ಮಿಹೋಚ್ಯತೇ ।

ಸಕಲಜಗತ್ತನ್ನು ಸಂಹರಿಸುವ ಗುಣವು ಶಿವನ ಹಸ್ತದಲ್ಲಿರುವ ಅಗ್ನಿಯು. ಈ ದಶಗುಣಗಳನ್ನು ಸಾಂಗಗಳೆಂದು ಕರೆಯುತ್ತಾರೆ. ॥ ೧೦೩ ॥

ವಸ್ತ್ರ ಉಪವೀತ ಮಾಲ್ಯ ಗಂಧ ಆಭರಣ ಮತ್ತು ಆವರಣಗಳನ್ನು ಉಪಾಂಗವೆಂದು ಹೇಳುತ್ತಾರೆ. ॥ ೧೦೪ ॥

ಹೀಗೆ ಅಂಗಭೇದವು ಉಕ್ತವಾಯಿತು. ಈಗ ಧ್ಯಾನಾರ್ಹ ಸದಾಶಿವನ ಸ್ವರೂಪ

---

1 ಸಂಹಾರಮಗ್ನಿರೂಪಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ನ, ಬ.
2 ಯೇಷಾಂ ನಾಮಾನಿ ಕೀರ್ತಿತಾಃ—ಕ, ಘ, ಛ, ಝ, ಟ,
ಪಾಶಾನಾಂ ಭಸ್ಮಸಾತ್ಕೃತಿಃ ಖ. (ಪಾ),
ಪಾಶಾನಾಂ ಭಸ್ಮಸಾತ್ಕೃತಂ—ಫ.
3 ಏತೇ ವೈ ಗುಣರೂಪಂ ಚ—ಫ.
4 ಸಾಂಗಶ್ಚೇತಿ ಪ್ರಕೀರ್ತಿತಃ—ಫ.
5 ವಸ್ತ್ರೋಪವೀತಮಾಲ್ಯಂ ಚ—ಕ, ಘ, ಡ.
ವಸ್ತ್ರೋಪವೀತಂ ಮಾಲ್ಯಂ ಚ—ಟ, ಠ, ತ, ದ.
6 ಗಂಧಮಾಭರಣಂ—ಕ, ಗ, ಘ, ಛ, ಟ, ಢ, ದ, ಧ, ಪ, ಫ.
7 ಯಥಾ—ಕ, ಢ, ತ, ದ, ಬ.
8 ಅಥೈವಾವರಣಂ—ಧ. ಆಸನಾವರಣಂ—ಫ.
9 ಹ್ಯುಪಾಂಗಂ ಪ್ರೋಚ್ಯತೇಽಪಿ ಚ—ಖ, ಗ, ಚ, ಝ,
ಹ್ಯುಪಾಂಗಂ ಚೇತಿ ಪ್ರೋಚ್ಯತೇ—ಕ, ಘ, ಛ, ಠ, ಢ, ತ, ಥ, ದ, ಪ, ಬ.
10 ಈ ಅರ್ಧಪದ್ಯ—ಡ. ಪುಸ್ತಕದಲ್ಲಿಲ್ಲ.
11 ಅಂಗಭೇದಮಿತಿ ಪ್ರೋಕ್ತಂ—ಖ, ಗ, ಚ, ಝ.
ಅಂಗಭೇದಮಿದಂ ಪ್ರೋಕ್ತಂ—ಕ, ಘ, ಚ, ಠ, ಢ, ತ, ಥ, ದ, ಪ, ಬ.
12 ತಸ್ಯ ರೂಪ—ಖ, ಗ, ಚ, ಝ.

ಕುಂದೇಂದುಸ್ಫಟಿಕಾ[1]ಭಾಸಂ
ಜಟಾಮುಕುಟಮಣ್ಡಿತಮ್ ॥ ॥ ೧೧೫ ॥

ಪಂಚಮೂರ್ಧ[2]ಸಮಾಯುಕ್ತಂ
ಪಂಚವಕ್ತ್ರಸಮಾಯುತಮ್ ।
[3]ಪ್ರತಿವಕ್ತ್ರಂ[4] ವಿಶೇಷೇಣ
ತ್ರಿಲೋಚನಸಮಾಯುತಮ್ ॥ ॥ ೧೧೬ ॥

ದಿಗ್ಭುಜಂ ತು ಮಹಾಸೇನ !
ದ್ವಿಪಾದಂ ಪದ್ಮಸಂಸ್ಥಿತಮ್ ।
ಶೂಲಂ ಪರಶುಖಡ್ಗೌ ಚಾ-
ಭಯವಜ್ರೇ[5] ಚ ದಕ್ಷಿಣೇ ॥ ॥ ೧೧೭ ॥

ನಾಗಂ ಪಾಶಾಂಕುಶಂ ಚೈವ
ಘಂಟಾಂ ವಹ್ನಿಂ ಚ ವಾಮಕೇ ।

ವನ್ನು ನಿರೂಪಿಸುತ್ತೇನೆ. ಎಲೈ ಷಣ್ಮುಖನೇ ! ಕುಂದಕುಸುಮ, ಚಂದ್ರ ಮತ್ತು ಸ್ಫಟಿಕಗಳ ಕಾಂತಿಯುಳ್ಳ ಜಟಾಕಿರೀಟದಿಂದ ಅಲಂಕೃತವಾದ,— ॥ ೧೧೫ ॥

ಪಂಚಶಿರಸ್ಸುಗಳನ್ನೂ ಪಂಚಮುಖಗಳನ್ನೂ ಹೊಂದಿ ಪ್ರತಿಮುಖದಲ್ಲಿ ಮೂರು ಕಣ್ಣುಗಳನ್ನುಳ್ಳ, — ॥ ೧೧೬ ॥

ಹತ್ತು ಭುಜ ಮತ್ತು ಎರಡು ಪಾದಗಳನ್ನುಳ್ಳ ಪದ್ಮಾಸನಸ್ಥವಾಗಿರುವ, ಬಲಗೈಗಳಲ್ಲಿ ತ್ರಿಶೂಲ ಪರಶು (ಕೊಡಲಿ), ಖಡ್ಗ, ಅಭಯಮುದ್ರೆ ಮತ್ತು ವಜ್ರಾಯುಧಗಳನ್ನೂ, ॥ ೧೧೭ ॥

ಎಡಗೈಗಳಲ್ಲಿ ಸರ್ಪ ಪಾಶ ಅಂಕುಶ ಘಂಟೆ ಮತ್ತು ಅಗ್ನಿಗಳನ್ನು ಧರಿಸಿರುವ ಸಮಸ್ತಲಕ್ಷಣಗಳಿಂದ ಕೂಡಿರುವ ಸಕಲ ಆಭರಣಗಳಿಂದ ಅಲಂಕೃತವಾದ,— ॥ ೧೧೮ ॥

---

1 ಸ್ಫಾಟಿಕಾ—ಖ, ಗ, ಜ, ಛ, ಝ, ದ, ಬ.
2 ಮೂರ್ಧ್ನಾ—ಥ, ಫ, ಬ.
3 ಈ ಅರ್ಧಪದ್ಯ—ಕ, ಘ, ಪುಸ್ತಕಗಳಲ್ಲಿಲ್ಲ.
4 ವಕ್ತ್ರಂ ಪ್ರತಿ—ಛ.
5 ಚ ವಜ್ರಾಭಯಂ—ಫ.

ಸರ್ವಲಕ್ಷಣಸಂಯುಕ್ತಂ
ಸರ್ವಾಭರಣಭೂಷಿತಮ್[1] ॥ ॥ ೧೦೮ ॥

ದಿವ್ಯಾಂಬರಧರಂ ದೇವಂ
ದಿವ್ಯರೂಪಮುದಾಹೃತಮ್ ।
[2]ದಿವ್ಯಗಂಧಾನುಲಿಪ್ತಾಂಗಂ
ದಿವ್ಯಮಾಲಾವಿಭೂಷಿತಮ್ ॥ ॥ ೧೦೯ ॥

[3]ಶಾನ್ತರೂಪಮಿದಂ ವತ್ಸ !
ಕಿಂಚಿತ್ ಪ್ರಹಸಿತಾನನಮ್ ।
ಏತದ್ರೂಪಂ ಸ್ಮರೇನ್ನಿತ್ಯಂ
ಧರ್ಮಕಾಮಾರ್ಥಮೋಕ್ಷದಮ್ ॥ ॥ ೧೧೦ ॥

ಧ್ಯಾನರೂಪಮಿದಂ[4] ಪ್ರೋಕ್ತಂ[5]
ವಿಶೇಷಸ್ತ್ವಧುನೋಚ್ಯತೇ ।

ದಿವ್ಯವಸ್ತ್ರವನ್ನು ಧರಿಸಿರುವ ತೇಜೋಮಯವಾದ ದಿವ್ಯಗಂಧಗಳಿಂದ ಲಿಪ್ತವಾದ ಅವಯವಗಳನ್ನುಳ್ಳ, ದಿವ್ಯಮಾಲೆಗಳಿಂದ ಅಲಂಕೃತವಾದ ಧ್ಯಾನಾರ್ಹಸದಾಶಿವನ ರೂಪವು ದಿವ್ಯವಾದುದು. ॥ ೧೦೯ ॥

ಎಲೈ ವತ್ಸನೇ ! ಮುಗುಳುನಗೆಯ ಮುಖವನ್ನುಳ್ಳ ಈ ರೂಪವು ಶಾಂತವಾದುದು. ಧರ್ಮ ಕಾಮ ಅರ್ಥ ಮತ್ತು ಮೋಕ್ಷಗಳನ್ನು ಕೊಡುವ ಈ ರೂಪವನ್ನು ನಿತ್ಯವೂ ಧ್ಯಾನಿಸಬೇಕು. ॥ ೧೧೦ ॥

ಇದು ಧ್ಯಾನಯೋಗ್ಯವಾದ ರೂಪವು. ಈಗ ವಿಶೇಷವನ್ನು ಹೇಳುತ್ತೇನೆ. ಕರ್ಮಸಾದಾಖ್ಯವು ಈ ಸ್ವರೂಪದ ಪೂರ್ವಮುಖ. ಕರ್ತೃಸಾದಾಖ್ಯವು ದಕ್ಷಿಣಮುಖ. ॥ ೧೧೧ ॥

---

1 ಣಸಂಯುತಂ—ತ.

2 "ದಿವ್ಯಗಂಧಾ—ತಾನನಂ"—ಭಾಗವು ಕ, ಘ, ಛ, ಟ, ಠ, ಡ, ಢ, ತ, ಥ, ದ, ಬ. ಪುಸ್ತಕಗಳಲ್ಲಿಲ್ಲ.

3 ಈ ಅರ್ಧಪದ್ಯ—ಕ. ಪುಸ್ತಕದಲ್ಲಿಲ್ಲ.

4 ಮಿತಿ—ಟ.

5 ಧ್ಯಾನಲಕ್ಷಣಮೇವೋಕ್ತಂ—ಡ, ಫ.

[1]ಕರ್ಮೇಶಃ[2] ಪೂರ್ವವಕ್ತ್ರಂ ಸ್ಯಾತ್
ಕರ್ತೃ ಸ್ಯಾತ್ ದಕ್ಷಿಣಾನನಮ್[3] ॥ ॥ ೧೧೧ ॥

ಅಪರಂ ಮೂರ್ತ[4]ವಕ್ತ್ರಂ ಸ್ಯಾತ್[5]
ಅಮೂರ್ತಂ ಚೋತ್ತರಾನನಮ್ ।
ಊರ್ಧ್ವಂ ತು ಶಿವಸಾದಾಖ್ಯಂ
ಏವಂ ಪಂಚಾನನಂ ವಿದುಃ ॥ ॥ ೧೧೨ ॥

ಕರ್ಮೇಶಾನಾದಿ ಮೂರ್ತಾಂತಂ[6]
ತಥಾ ಕರ್ಮಾಖ್ಯಮುಚ್ಯತೇ[7] ।
ಪ್ರಾಗ್ವಕ್ತ್ರಂ ಪೂರ್ವಮುದ್ದಿಷ್ಟಂ
ಪಶ್ಚಿಮಂ ಪಶ್ಚಿಮಾನನಮ್[8] ॥ ॥ ೧೧೩ ॥

ಮೂರ್ತಸಾದಾಖ್ಯವು ಪಶ್ಚಿಮಮುಖ. ಅಮೂರ್ತಸಾದಾಖ್ಯವು ಉತ್ತರ ಮುಖ. ಶಿವಸಾದಾಖ್ಯವು ಊರ್ಧ್ವಮುಖ. ಹೀಗೆ ಧ್ಯಾನಾರ್ಹವಾದ ಸದಾಶಿವನ ಸ್ವರೂಪವನ್ನು ಐದು ಮುಖಗಳನ್ನುಳ್ಳದ್ದೆಂದು ತಿಳಿಯುತ್ತಾರೆ. ॥ ೧೧೨ ॥

ಕರ್ಮೇಶತತ್ತ್ವದಿಂದ ಮೊದಲುಗೊಂಡು ಮೂರ್ತತತ್ತ್ವದವರೆಗಿನ ತತ್ತ್ವ ತ್ರಯವನ್ನು ಕರ್ಮವೆಂದು ಹೇಳುತ್ತಾರೆ. ಈ ಸದಾಶಿವಸ್ವರೂಪದ ಪೂರ್ವಮುಖವು ಪೂರ್ವದಿಕ್ಕಿಗೆ ಅಭಿಮುಖವಾಗಿರುತ್ತದೆ. ಪಶ್ಚಿಮಮುಖವು ಪಶ್ಚಿಮಾಭಿಮುಖವಾಗಿ ರುತ್ತದೆ. ॥ ೧೧೩ ॥

---

1 ಇಲ್ಲಿಂದ 'ಕರ್ಮಾಂತವದ್ಭವೇತ್' ವರೆಗಿನ ಭಾಗ—'ಥ' ಪುಸ್ತಕದಲ್ಲಿಲ್ಲ.

2 ಕರ್ಮೇಶಂ—ಖ, ಗ, ಚ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ,

3 ಪೂರ್ವರೂಪಂ ತು ಕರ್ತೃಸವ್ಯಾನನಂಭವೇತ್—ಖ, ಗ. ಚ, ಝ,
ಪೂರ್ವವಕ್ತ್ರಂ ಸ್ಯಾತ್ ಕರ್ತಾರಂ ದಕ್ಷಿಣಾನನಂ—ಫ.

4 ಮೂರ್ತಿ—ಖ, ಗ, ಘ, ಚ, ಝ, ದ, ಧ.

5 ಅಪರಂ ಮೂರ್ತವಕ್ತ್ರಂ ತು—ಕ, ಫ, ಥ, ದ, ಧ,
ಪಶ್ಚಿಮಂ ಮೂರ್ತಿಸಾದಾಖ್ಯಂ—ಖ, ಗ, ಚ, ಝ.

6 ಕರ್ಮೇಶಾದಿ ಚ ಮೂರ್ತ್ಯಂತಂ—ಕ.

7 ಈಶಾನಾದೀನಿ ಮೂರ್ಧಾದಿ ತಥಾ ಕರ್ಮಾಂತವದ್ಭವೇತ್—ಖ, ಗ, ಚ, ಝ.

8 ಪಶ್ಚಿಮಾಯಾಂ ತು ಪಶ್ಚಿಮಂ—ಫ.

ದಕ್ಷಿಣಾಭಿಮುಖಂ ಯಾಮ್ಯಂ
ಉತ್ತರಂ ಚೋತ್ತರಾನನಮ್ |
[1]ಊರ್ಧ್ವೇ ತು ದಕ್ಷಿಣಂ ಸವ್ಯಂ
ಇತರಂ ಪೂರ್ವಪಶ್ಚಿಮಮ್[2] || || ೧೧೪ ||

ಕಿಂಚಿದಸ್ಮಿನ್[3] ವಿಶೇಷೋಽಸ್ತಿ
ಚೋರ್ಧ್ವವಕ್ತ್ರೇ ತು[4] ಷಣ್ಮುಖ !
ಮೂಲಸಂಚಿತತದ್ವಕ್ತ್ರಂ[5]
ಪರಂ ಮುಖಮಿತಿ ಸ್ಮೃತಮ್ || || ೧೧೫ ||

ಪೂಜಾಕರ್ಮಣಿ ತು[6] ತದ್ಧ್ಯಾತ್ವಾ[7]
ಚಾರ್ಚಯೇತ್ ಕರ್ತೃ[8] ವಕ್ತ್ರವತ್ |

ದಕ್ಷಿಣಮುಖವು ದಕ್ಷಿಣದಿಕ್ಕಿಗೂ, ಉತ್ತರಮುಖವು ಉತ್ತರದಿಕ್ಕಿಗೂ ಅಭಿಮುಖವಾಗಿರುತ್ತವೆ. ಊರ್ಧ್ವಮುಖದಲ್ಲಾದರೋ ದಕ್ಷಿಣ ಉತ್ತರ ಪೂರ್ವ ಮತ್ತು ಪಶ್ಚಿಮ ಮುಖಗಳು ಕೂಡಿರುತ್ತವೆ. || ೧೧೪ ||

ಎಲೈ ಷಣ್ಮುಖನೇ ! ಈ ಊರ್ಧ್ವಮುಖದಲ್ಲಿ ಸ್ವಲ್ಪ ವಿಶೇಷವುಂಟು. ಮೂಲಮಂತ್ರಸಹಿತವಾದ ಊರ್ಧ್ವಮುಖವನ್ನು ಉತ್ಕೃಷ್ಟಮುಖನೆಂದು ಸ್ಮರಿಸುತ್ತಾರೆ.
|| ೧೧೫ ||

ಪೂಜೆಮಾಡುವವನು ಊರ್ಧ್ವಮುಖವನ್ನು ಧ್ಯಾನಿಸಿ ಕರ್ತೃಸಾದಾಖ್ಯಮುಖ-

---

1 ಈ ಅರ್ಧಪದ್ಯ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಬ. ಪುಸ್ತಕಗಳಲ್ಲಿಲ್ಲ.
2 ಇತರಂ ಪಶ್ಚಿಮೋತ್ತರಂ—ಖ, ಗ, ಜ, ಝ.
3 ಭೇದೇ ಚಾಸ್ಮಿನ್—ಕ, ಖ. (ಪಾ) ಟ, ಠ, ಢ, ಧ,
ಭೇದೇ ತಸ್ಮಿನ್—ಪ.
4 ಚೋರ್ಧ್ವವಕ್ತ್ರಸ್ಯ—ಕ, ಗ, ಜ, ಝ,
ಚೋರ್ಧ್ವಾನನಸ್ಯ—ಫ.
5 ಮೂಲಂ ಸಂಚಿಂತ್ಯತದ್ವಕ್ತ್ರಂ—ಖ, ಗ, ಜ, ಝ,
ಮೂಲಸಂಚಿತಂ ತದ್ವ್ರಕ್ತ್ರಂ—ಘ.
6 ಪೂಜಾಕಾಲೇ ತು—ಖ, ಗ, ಜ, ಝ, ಪೂಜಾಕರ್ಮಣಿ—ಥ.
7 ತಂ ಧ್ಯಾತ್ವಾ—ಪ, ಫ.
8 ಕರ್ಮ—ಖ, ಗ, ಜ, ಝ.

ಏವಂ ಸಂಕಲ್ಪ್ಯ ವಿಧಿವತ್
ಪೂಜಾಂತೇ ಪೂರ್ವವದ್ಭವೇತ್ ॥ ॥ ೧೧೬ ॥

ತಸ್ಮಾನ್ನಾದಾತ್ಮತತ್ತ್ವಂ[1] ಚ[2]
ಸರ್ವಕಾರಣಕಾರಣಮ್ ।
ಸದಾಶಿವ[3] ಇತಿ ಪ್ರೋಕ್ತಂ
ಇತಿ ಶಾಸ್ತ್ರೇಷು ನಿಶ್ಚಿತಮ್ ॥ ॥ ೧೧೭ ॥

ಏತದ್ವೈ ಕರ್ಮರೂಪಂ ತು
ಕರ್ಮ ವರ್ಮೇತಿ[4] ಕಾರಯೇತ್ ।
ಕರ್ಷಣಾದಿಕ್ರಿಯಾದೀನಿ
ಕರ್ಮ ಚೇತಿ ನಿಗದ್ಯತೇ ॥ ॥ ೧೧೮ ॥

ತಸ್ಮಾದ್ವೈ ಸ್ಥಾಪನಾದೀನಿ
ಕರ್ಮಮೂರ್ತ್ಯಾ[5] ತು ಕಾರಯೇತ್ ।

ದಂತೆ ಪೂಜಿಸಬೇಕು. ಹೀಗೆ ಯಥಾವಿಧಿ ಸಂಕಲ್ಪಮಾಡಿ ಪೂಜೆಯ ಅಂತ್ಯದಲ್ಲಿ ಮೊದಲಿನಂತಾಗಬೇಕು. ॥ ೧೧೬ ॥

ಆದ್ದರಿಂದ ಪ್ರಸಾದಮಂತ್ರಸ್ವರೂಪವಾದ ಶಿವತತ್ತ್ವವನ್ನು ಸರ್ವಕಾರಣಗಳಿಗೂ ಕಾರಣವಾದ ಸದಾಶಿವತತ್ತ್ವವೆಂದು ಹೇಳುತ್ತಾರೆ. ಹೀಗೆ ನಿಷ್ಕಲಬ್ರಹ್ಮವೆನಿಸಿದ ಶಿವತತ್ತ್ವವು ನಿಷ್ಕಲಸದಾಶಿವತತ್ತ್ವವೆಂದು ಶಾಸ್ತ್ರಗಳಲ್ಲಿ ನಿಶ್ಚಿತವಾಗಿದೆ. ॥ ೧೧೭ ॥

ಇದು ಕರ್ಮಸಾದಾಖ್ಯತತ್ತ್ವದ ಸ್ವರೂಪ. ಕರ್ಮಸಾದಾಖ್ಯವನ್ನು ವಜ್ರಕವಚವೆಂದು ಭಾವಿಸಿ ವಿಹಿತಕರ್ಮಗಳನ್ನು ಆಚರಿಸಬೇಕು. ಆವಾಹನಾದಿಕ್ರಿಯೆಗಳೇ ಕರ್ಮಗಳು. ॥ ೧೧೮ ॥

ಆದುದರಿಂದ ಕರ್ಮಸಾದಾಖ್ಯಮೂರ್ತಿಗೆ ಸ್ಥಾಪನಾದಿ ಕ್ರಿಯೆಗಳನ್ನು ಮಾಡ

1 ತ್ಮಕತ್ವಂ—ದ, ಧ, ಪ,. ಬ.
2 ಏತತ್ವಂ ಚಾತ್ಮಕತ್ವಾತ್ತು—ಖ, ಗ, ಚ, ಝ.
3 ಶಿವಂ—ಕ, ಖ, ಗ, ಘ, ಜ, ಛ, ಝ, ಟ, ಠ, ಡ, ಢ, ತ, ಥ.
4 ಪತ್ವಾತ್ ಕರ್ಮಕರ್ಮಣಿ—ಖ, ಗ, ಜ, ಝ,
ಪತ್ವಾತ್ ಕರ್ಮಕರ್ಮೇತಿ—ಧ, ಫ.
5 ಕರ್ಮರೂಪಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಪ, ಬ.

ಲಿಂಗೇ ವಾ ಸ್ಥಂಡಿಲೇ ವಾಽಪಿ[1]
ಕುಮ್ಭೇ ವಾ[2] ಹೃದಯೇಽಪಿ ವಾ ॥ ॥ ೧೧೯ ॥

ಧ್ಯಾತ್ವಾ ಸದಾಶಿವಂ ಪೂಜ್ಯ
ವಿಧಿವತ್ ಸ್ಥಾಪಯೇತ್ ತತಃ[3] ।
ಕರ್ತ್ರಾದಿಕಚತುರ್ಣಾಂ ತು[4]
ಸ್ಥಾಪನಂ ಚ ನ ಕಾರಯೇತ್ ॥ ॥ ೧೨೦ ॥

[5]ಆವಾಹನಂ ಸ್ವಾತ್ಮನಿ ಚಿತ್ಪ್ರಕಾಶಃ[6]
ತತ್ರ ಸ್ಥಿತಿಃ ಸ್ಥಾಪನಮೀಶ್ವರಸ್ಯ ।
ಸಾನ್ನಿಧ್ಯಮಾತ್ರೇಶ್ವರ[7]ಸನ್ನಿಧಾನಂ
ಸಂರೋಧನಂ ಸ್ವಸ್ಯ ಶಿವೇ ನಿರೋಧಃ ॥ ॥ ೧೨೧ ॥

ಬೇಕು. ಶಿವಲಿಂಗದಲ್ಲಾಗಲಿ, ಪರಿಷ್ಕೃತ ಪವಿತ್ರಪ್ರದೇಶಗಳಲ್ಲಾಗಲಿ, ಕಲಶದಲ್ಲಾಗಲಿ ಹೃದಯಕಮಲದಲ್ಲಾಗಲಿ,— ॥ ೧೧೯ ॥

ಸದಾಶಿವಸ್ವರೂಪವನ್ನು ಧ್ಯಾನಿಸಿ, ಧ್ಯಾನಪೂಜೆ ಕ್ರಿಯಾಪೂಜೆ ಭಾವಪೂಜೆಗಳನ್ನು ಸಲ್ಲಿಸಿ, ವಿಧಿವತ್ತಾಗಿ ಸ್ಥಾಪನೆ ಮಾಡಬೇಕು. ಕರ್ತೃಸಾದಾಖ್ಯವೇ ಮುಂತಾದ ನಾಲ್ಕು ಸಾದಾಖ್ಯಗಳ ಸ್ಥಾಪನೆಯನ್ನು ಮಾಡಬಾರದು. ॥ ೧೨೦ ॥

ಶಿವಧ್ಯಾನನಿರತನಾದ ಶಿವಭಕ್ತನು ತನ್ನ ಚಿತ್ತದಲ್ಲಿ ಜ್ಞಾನಸ್ವರೂಪವಾದ ಶಿವತತ್ತ್ವವನ್ನು ಆಕರ್ಷಿಸುವುದೇ ಆವಾಹನ. ತನ್ನ ಹೃದಯಕಮಲದಲ್ಲಿ ಪರಮೇಶ್ವರಸ್ವರೂಪವನ್ನು ಸ್ಥಿರಗೊಳಿಸುವುದೇ ಸ್ಥಾಪನ. ಜೀವಾತ್ಮ ಮತ್ತು ಪರಮೇಶ್ವರರ ಸಾನ್ನಿಧ್ಯವೇ ಸನ್ನಿಧಾನ. ತನ್ನ ಚಿತ್ತವನ್ನು ಶಿವನಲ್ಲಿ ನೆಲೆಗೊಳಿಸುವುದೇ ಸನ್ನಿರೋಧ. ॥ ೧೨೧ ॥

---

1 ವಹ್ನೌ—ಕ, ಗ, ಚ, ಝ.
2 ಮಂಡಲೇ—ಕ. ಘ, ಟ, ಠ, ಡ, ಢ, ತ, ಥ, ಮಂಟಪೇ—ಧ.
3 ಸ್ಥಾಪನಂ ಕುರು—ಫ. ಸ್ಥಾಪನಂ ತದಾ—ತ.
4 ಚ—ಧ, ಫ.
5 ಈ ಪದ್ಯ—ದ, ಫ. ಪುಸ್ತಕಗಳಲ್ಲಿಲ್ಲ.
6 ಚಿತ್ಪ್ರಕಾಶಂ—ಖ, ಗ, ಚ, ಝ.
7 ಮಾತ್ರೇಶ್ವರ—ಖ, ಗ, ಚ, ಝ.

ಯೋಗಿನಾಂ ಮನ್ತ್ರಿಣಾಂ ಚೈವ
ಸ್ತುತಿಮಾತ್ರಂ ಭವೇದ್ಗುಹ! ।
ಇತ್ಯೇತೈರ್ಲಕ್ಷಣೈರ್ಯುಕ್ತಂ
ಕರ್ಮಸಾದಾಖ್ಯಮುಚ್ಯತೇ[1] ॥ ॥ ೧೨ ॥

[2]ಶಿವಾದಿಕರ್ಮಪರ್ಯಂತಂ
ಕ್ರಮೇಣೈವ ಪ್ರಕೀರ್ತಿತಮ್[3] ।
ಸಾದಾಖ್ಯಲಕ್ಷಣಂ ಪ್ರೋಕ್ತಂ
ಮಹೇಶಂ[4] ಶೃಣು ಷಣ್ಮುಖ ॥ ॥ ೧೩ ॥

ಕರ್ಮೇಶಸ್ಯ ಸಹಸ್ರಾಂಶಾತ್
ಮಹೇಶಸ್ಯ ಸಮುದ್ಭವಃ ।
ಮಹೇಶಂ ಸಕಲಂ ವಿದ್ಯಾತ್[5]
ಸೃಷ್ಟಿಸ್ಥಿತಿಲಯಾವಹಮ್[6]॥ ॥ ೧೪ ॥

ಎಲೈ ಷಣ್ಮುಖನೇ ! ಶಿವಯೋಗಿಗಳಿಗೂ, ಮಂತ್ರಜ್ಞರಿಗೂ, ಈಶ್ವರನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಲು ಸ್ತೋತ್ರವೇ ಸಾಕು. ಈ ವರೆಗೆ ಹೇಳಿದ ಲಕ್ಷಣಗಳಿಂದ ಕೂಡಿದ ಸ್ವರೂಪವು ಕರ್ಮಸಾದಾಖ್ಯ. ॥ ೧೨ ॥

ಶಿವಸಾದಾಖ್ಯದಿಂದ ಆರಂಭಿಸಿ ಕರ್ಮಸಾದಾಖ್ಯದವರೆಗೆ ಪಂಚಸಾದಾಖ್ಯತತ್ತ್ವಗಳನ್ನೂ ಕ್ರಮವಾಗಿ ನಿರೂಪಿಸಿದ್ದಾಯಿತು. ಎಲೈ ಷಣ್ಮುಖನೇ ! ಸಾದಾಖ್ಯತತ್ತ್ವದನಂತರ ಮಹೇಶತತ್ತ್ವವನ್ನು ಕೇಳು. ॥ ೧೩ ॥

ಕರ್ಮಸಾದಾಖ್ಯವೆಂಬ ದಿವ್ಯಲಿಂಗದ ಸಹಸ್ರದಲ್ಲೊಂದಂಶದಿಂದ ಮಹೇಶತತ್ತ್ವದ ಆವಿರ್ಭಾವವಾಗುತ್ತದೆ. ಸೃಷ್ಟಿ ಸ್ಥಿತಿ ಲಯಗಳಿಗೆ ಕರ್ತೃವಾದ ಮಹೇಶತತ್ತ್ವವನ್ನು ಸಕಲತತ್ತ್ವಸ್ವರೂಪವೆಂದು ತಿಳಿಯಬೇಕು. ॥ ೧೪ ॥

---

1 ಖ್ಯಲಿಂಗಕಮ್—ಖ, ಗ, ಚ, ಝ.

2 ಈ ಶ್ಲೋಕಕ್ಕೆ ಮೊದಲು—"ತತೋ ನಾಹೋ ನ ರಾತ್ರಿಶ್ಚ ನ ವಿಷ್ಣುಃ ನ ಪ್ರಜಾಪತಿಃ। ಆಕಾಶಾದೀನಿ ಭೂತಾನಿ ಕಿಂ ಪುನರ್ಭೌತಿಕಂ ಜಗತ್ ॥ ಎಂಬ ಶ್ಲೋಕವು ಕಂಡುಬರುತ್ತದೆ—ಕ. ಪ್ರತಿಯಲ್ಲಿ ಮಾತ್ರ.

3 ಕ್ರಮೇಣ ಪರಿಕೀರ್ತಿತಮ್—ಫ.

4 ಮಾಹೇಶಂ—ಠ.

5 ವಿಂದ್ಯಾತ್—ಟ, ಠ, ಡ, ತ, ಥ, ಬ.

6 ಲಯಾತ್ಮಕಂ—ಖ, ಗ, ಚ, ಝ.

ಪಂಚವಿಂಶತಿಭೇದೈಸ್ತು
    ತನ್ಮೂರ್ತಿರ್ವಿವಿಧಾ ಭವೇತ್[1] ।
ನಾನಾರೂಪಧರಂ ದೇವಂ
    ನಾನಾರೂಪ[2]ಸಮನ್ವಿತಮ್ ॥ ॥ ೧೫ ॥

ನಾನಾಚಿಹ್ನ[3]ಸಮೋಪೇತಂ
    ನಾನಾಲೀಲಾಧರಂ ಹರಿಮ್[4] ।
ಸ್ಥಾನಯಾನ[5]ಸಮಾಸೀನಂ
    ನೃತ್ಯಕೋಪಮಸೌಮ್ಯಕಮ್[6] ॥ ॥ ೧೬ ॥

ಅನೇಕಾಕಾರಸಂಯುಕ್ತಂ
    ದೇವದೇವಂ ಮಹೇಶ್ವರಮ್ ।

ಮಹೇಶತತ್ತ್ವವು ಸೃಷ್ಟಿಸ್ಥಿತಿಲಯಗಳ ಪರಿವರ್ತನಕಾರ್ಯನಿಮಿತ್ತವಾಗಿ ಸೋಮಧರಾದಿ ಇಪ್ಪತ್ತೈದು ಲೀಲಾರೂಪಗಳನ್ನು ಧರಿಸುತ್ತದೆ. ಮಹೇಶತತ್ತ್ವವು ನಾನಾರೂಪಗಳನ್ನು ಧರಿಸುತ್ತದೆ. ಮಹೇಶತತ್ತ್ವವು ನಾನಾರೂಪಗಳನ್ನು ಧರಿಸಿದ ಪ್ರಕಾಶಮಾನವಾದ ನಾನಾಸ್ವರೂಪವನ್ನುಳ್ಳ,— ॥ ೧೫ ॥

ಅನೇಕಲಾಂಛನಗಳಿಂದ ಕೂಡಿದ ನಾನಾಲೀಲೆಗಳನ್ನು ಧರಿಸಿದ, ಸಮಸ್ತ ಜಗತ್ಸಂಹಾರಕರ್ತೃವಾದ, ಅನೇಕಸ್ಥಾನ ಮತ್ತು ಅನೇಕವಾಹನಗಳನ್ನಲಂಕರಿಸಿದ, ನಾಟ್ಯಸದೃಶಸೌಂದರ್ಯವನ್ನುಳ್ಳ,— ॥ ೧೬ ॥

ಅನಂತ ಆಕಾರಗಳನ್ನುಳ್ಳ, ಇಂದ್ರಾದಿ ಸಮಸ್ತದೇವತೆಗಳಿಗೂ ಪ್ರಭುವಾದ,

---

1 ತನ್ಮೂರ್ತಯಃ ಪಂಚವಿಂಶತಿಃ—ಕ, ಖ, (ಪಾ) ಘ, ಛ.
ಮೂರ್ತಯಃ ಪಂಚವಿಂಶತಿಃ—ಥ.

2 ನಾನಾಭೇದ—ಫ.

3 ಲಿಂಗ—ಫ.

4 ಲೀಲಾಮನೋಹರಂ—ಫ.

5 [illegible]ಾನಂ—ಖ, ಗ, ಚ, ಝ.

6 ನೃತ್ತಂ ಕೋಪಂ ಚ ಸಾಮ್ಯಕಂ—ಖ, ಗ, ಚ, ಝ.
ನೃ[illegible] ಕೋ[illegible]ಸೌಮ್ಯಕಂ—ಥ, ಪ, ಬ.

ಜಟಾಮುಕುಟಸಂಯುಕ್ತಂ
ಏಕವಕ್ತ್ರಂ ತ್ರಿಣೇತ್ರಕಮ್ ॥ ॥ ೧೨ ॥

[1]ಚತುರ್ಭುಜಸಮಾಯುಕ್ತಂ
ಏಕಪದ್ಮಾಸನಸ್ಥಿತಮ್ ।
ವರದಾಭಯಹಸ್ತಂ ಚ
ಮೃಗೀಪರಶುಧಾರಕಮ್ ॥ ॥ ೧೩ ॥

ಸರ್ವಾಭರಣಸಂಯುಕ್ತಂ
ಸರ್ವಲಕ್ಷಣಸಂಯುತಮ್[2] ।
ಮಹೇಶರೂಪಮಿತ್ಯುಕ್ತಂ[3]
ರೂಪಭೇದಸ್ತ್ವಥೋಚ್ಯತೇ[4] ॥ ॥ ೧೪ ॥

ಪ್ರಥಮಂ ಸೋಮಧಾರೀ ಸ್ಯಾತ್[5]
ದ್ವಿತೀಯಮುಮಯಾ ಸಹ

ಮಹೇಶ್ವರತತ್ತ್ವವೆಂದು ಪ್ರಖ್ಯಾತವಾದ, ಜಟೆಗಳಿಂದ ರಚಿತವಾದ ಕಿರೀಟವನ್ನುಳ್ಳ, ಒಂದು ಮುಖ, ಮೂರು ಕಣ್ಣು— ॥ ೧೨ ॥

—ಮತ್ತು ನಾಲ್ಕು ಭುಜಗಳಿಂದ ಕೂಡಿದ, ಶ್ರೇಷ್ಠವಾದ ಪದ್ಮಾಸನದಲ್ಲಿ ಮಂಡಿಸಿದ, ಒಂದು ಕೈಯಲ್ಲಿ ವರದಮುದ್ರೆಯನ್ನೂ ಮತ್ತೊಂದರಲ್ಲಿ ಅಭಯಮುದ್ರೆಯನ್ನೂ ಉಳಿದೆರಡು ಕೈಗಳಲ್ಲಿ ಜಿಂಕೆ–ಪರಶುಗಳನ್ನೂ ಧರಿಸಿರುವ,— ॥ ೧೩ ॥

ಸಕಲ ಆಭರಣಗಳಿಂದ ಭೂಷಿತವಾದ, ಸರ್ವಲಕ್ಷಣಗಳಿಂದ ಕೂಡಿದ, ಸ್ವರೂಪವನ್ನು ಧರಿಸಿರುತ್ತದೆ. ಇನ್ನು ಮುಂದೆ ಮಹೇಶನ ಲೀಲಾರೂಪಗಳನ್ನು ಹೇಳುತ್ತೇನೆ. ॥ ೧೪ ॥

೧ ಮಹೇಶನು ರೋಹಿಣೀನಿಮಿತ್ತವಾದ ದಕ್ಷಶಾಪವನ್ನು ಪರಿಹರಿಸಿ ಚಂದ್ರಧರನಾದುದು ಮೊದಲನೆಯ ಲೀಲೆ.

---

1 ಈ ಪದ್ಯ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಫ, ಬ. ಪುಸ್ತಕಗಳಲ್ಲಿಲ್ಲ.
2 ಏಕಪದ್ಮಾಸನಸ್ಥಿತಮ್—ಕ.
3 ಮೇವೋಕ್ತಂ—ಖ, ಗ, ಜ, ಝ.
4 ರೂಪಭೇದಂ ತ್ವಥೋಚ್ಯತೇ—ಖ, ಗ, ಜ, ಝ.
ರೂಪಭೇದಮಿಹೋಚ್ಯತೇ—ಟ, ಢ, ಥ, ದ.
ರೂಪಭೇದಮಥಶೃಣು—ಫ.
5 ಧಾರೀ ಚ—ಟ, ಠ, ಢ, ತ, ಥ, ದ, ಧ, ಬ.

ತೃತೀಯಂ ತು ವೃಷಾರೂಢಃ[1]
ಚತುರ್ಥಂ ನೃತ್ಯಕೋಪಮಮ್[2] ॥ ॥ ೧೩೦ ॥

ವೈವಾಹಂ[3] ಪಂಚಮಂ ವಿದ್ಯಾತ್[4]
ಷಷ್ಠಂ ಭಿಕ್ಷಾಟನಂ ಭವೇತ್[5] ।
ಕಾಮಾರಿಃ[6] ಸಪ್ತಮಂ ವಿದ್ಯಾತ್[7]
ಕಾಲಾರಿಶ್ಚಾ[8]ಷ್ಟಮಂ[9] ಭವೇತ್[10] ॥ ॥ ೧೩೧ ॥

---

೨ ಜಗದುತ್ಪತ್ತಿನಿಮಿತ್ತವಾಗಿ ಉಮಾಶಕ್ತಿಸಹಿತನಾದುದು ಎರಡನೆಯ ಲೀಲೆ.

೩ ಪ್ರಳಯಕಾಲದಲ್ಲಿ ನಾಶಕ್ಕೆ ಹೆದರಿ ವೃಷಭಾಕಾರದಿಂದ ತನ್ನನ್ನಾಶ್ರಯಿಸಿದ ಧರ್ಮವನ್ನು ವಾಹನವನ್ನಾಗಿ ಸ್ವೀಕರಿಸಿದುದು ಮೂರನೆಯ ಲೀಲೆ.

೪ ಪ್ರಳಯನರ್ತನವನ್ನು ಬ್ರಹ್ಮಾದಿದೇವತೆಗಳಿಗಾಗಿ ಮತ್ತೆ ನರ್ತಿಸಿ ಪ್ರದರ್ಶಿಸಿದುದು ನಾಲ್ಕನೆಯ ಲೀಲೆ. ॥ ೧೩೦ ॥

೫ ಉಮಾದೇವಿಯನ್ನು ವಿವಾಹವಾದುದು ಐದನೆಯ ಲೀಲೆ.

೬ ಅಹಂಕಾರಿಯಾದ ದಕ್ಷಬ್ರಹ್ಮನ ಶಿರಸ್ಸನ್ನು ಚಿವುಟಿ ಅವನ ಕಪಾಲವನ್ನು ಹಿಡಿದು ಭಿಕ್ಷಾಟನೆ ಮಾಡಿದುದು ಆರನೆಯ ಲೀಲೆ.

೭ ತಾನು ಶಕ್ತಿಸಹಿತನಾದರೂ ಕಾಮಿಯಲ್ಲವೆಂಬುದನ್ನು ಲೋಕಕ್ಕೆ ಪ್ರಕಟಿಸಲು ಕಾಮನನ್ನು ದಹಿಸಿದುದು ಏಳನೆಯ ಲೀಲೆ.

೮ ಭಕ್ತಮಾರ್ಕಂಡೇಯನ ನಿಮಿತ್ತವಾಗಿ ಯಮನನ್ನು ಮರ್ದಿಸಿದುದು ಎಂಟನೆಯ ಲೀಲೆ. ॥ ೧೩೧ ॥

---

1 ರೂಢಂ—ಟ, ತ, ಡ, ಢ, ತ, ಥ, ದ, ಧ, ಪ, ಫ, ಬ.
2 ನೃತ್ತರೂಪಕಂ—ಖ, ಗ, ಜ, ಝ.
ನೃತ್ತಕೋಪಮಂ—ಧ, ಪ, ಬ.
3 ವೈವಾಹ್ಯಂ—ಖ, ಗ, ಜ, ಝ.
4 ಪಂಚಮಂ ತು ವಿವಾಹಂ ಸ್ಯಾತ್—ಡ, ಪ.
ವಿವಾಹಂ ಪಞ್ಚಮಂ ವಿದ್ಯಾತ್—ಧ.
5 ಷಷ್ಠಂ ಪಾಶುಪತಂ ತಥಾ—ಫ.
6 ಕಾಮಾರಿಂ—ಖ, ಗ, ಜ, ಝ.
7 ವಿನ್ದ್ಯಾತ್—ಟ, ತ, ಡ, ತ, ಥ, ದ, ಬ.
8 ಕಾಲಾರಿಂ ಚಾ—ಕ, ಘ, ಛ.
9 ಶ್ಚಾಷ್ಟಮೋ—ಖ, ಗ, ಜ, ಝ.
10 ಭಿಕ್ಷಾಟನಂ ಸಪ್ತಮಂ ಸ್ಯಾತ್ ಕಾಲಾಗ್ನಿರುದ್ರಮಷ್ಟಮಮ್—ಫ.

ನವಮಂ ತ್ರಿಪುರಾರಿಃ ಸ್ಯಾತ್
ಜಲಂಧರವಧೋ ದಶಮ್ ।
ಏಕಾದಶಮಜಾರಿಃ[1] ಸ್ಯಾತ್
ದ್ವಾದಶಂ[2] ವೀರಭದ್ರಕಃ[3] ॥ ॥ ೧೩೨ ॥

ತ್ರಯೋದಶಂ[4] ಹರಿಧ್ವಂಸೀ[5]
ತ್ವರ್ಧನಾರೀ[6] ಚತುರ್ದಶಮ್ ।
ಕಿರಾತಃ ಸ್ಯಾತ್ ಪಂಚದಶಂ[7]
ಕಂಕಾಲೀ[8] ಷೋಡಶಂ[9] ಭವೇತ್ ॥ ॥ ೧೩೩ ॥

---

೯ ದುಷ್ಟನಿಗ್ರಹ ಮತ್ತು ಶಿಷ್ಟಪರಿಪಾಲನೆಗಾಗಿ ತ್ರಿಪುರವನ್ನು ಸಂಹರಿಸಿದ್ದು ಒಂಬತ್ತನೆಯ ಲೀಲೆ.

೧೦ ದುಷ್ಟ ಜಲಂಧರನನ್ನು ಸಂಹರಿಸಿದುದು ಹತ್ತನೆಯ ಲೀಲೆ.

೧೧ ಮಗಳನ್ನು ರಮಿಸಿದ ಬ್ರಹ್ಮನನ್ನು ನಿಗ್ರಹಿಸಿದುದು ಹನ್ನೊಂದನೆಯ ಲೀಲೆ.

೧೨ ವೀರಭದ್ರನ ರೂಪವನ್ನು ಧರಿಸಿ ದಕ್ಷನ ಯಜ್ಞವನ್ನು ನಾಶಮಾಡಿದುದು ಹನ್ನೆರಡನೆಯ ಲೀಲೆ. ॥ ೧೩೨ ॥

೧೩ ಮಹಾವಿಷ್ಣುವಿನ ಮತ್ಸ್ಯಾದ್ಯವತಾರಗಳನ್ನು ಸಂಹರಿಸಿದುದು ಹದಿಮೂರನೆಯ ಲೀಲೆ.

೧೪ ಅರ್ಧನಾರೀಶ್ವರನಾಗಿ ಪ್ರಾದುರ್ಭವಿಸಿದುದು ಹದಿನಾಲ್ಕನೆಯ ಲೀಲೆ.

೧೫ ಅರ್ಜುನನನ್ನು ಅನುಗ್ರಹಿಸಲು ಕಿರಾತವೇಷ ಧರಿಸಿದುದು ಹದಿನೈದನೆಯ ಲೀಲೆ.

೧೬ ತ್ರಿವಿಕ್ರಮನನ್ನು ಮರ್ದಿಸಿ ಅವನ ಕಂಕಾಲನನ್ನು (ಮೂಳೆಯನ್ನು) ಧರಿಸಿದುದು ಹದಿನಾರನೆಯ ಲೀಲೆ. ॥ ೧೩೩ ॥

---

1 ಏಕಾದಶ ಗಜಾರಿಃ—ಖ, ಗ, ಜ, ಝ.
2 ದ್ವಾದಶಃ—ಖ, ಗ, ಜ, ಝ.
3 ವೀರಭದ್ರಕಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಫ, ಬ.
4 ತ್ರಯೋದಶೋ—ಖ, ಗ, ಜ, ಝ.
5 ಹರೇರರ್ಧಂ—ಖ, ಗ, ಜ, ಝ.
ಹರಿಹರಾರ್ಧಂ—ಫ.
6 ತ್ವರ್ಧನಾರಿಃ—ಖ, ಗ, ಜ, ಝ.
7 ಪಂಚದಶ—ಖ, ಗ, ಜ, ಝ.
8 ಕಂಕಾಲಃ—ಖ, ಗ, ಜ, ಝ.
9 ಷೋಡಶೋ—ಖ, ಗ, ಜ, ಝ.

ಚಣ್ಡೇಶಾನುಗ್ರಹಶ್ಚೈವ
ತಥಾ ಸಪ್ತದಶಂ ಭವೇತ್[1] ।
ವಿಷಾಪಹರಣಂ ಚೈವ[2]
ತ್ವಷ್ಟಾದಶಮಿತಿ ಸ್ಮೃತಮ್[3] ॥ ॥ ೧೩೪ ॥

ಚಕ್ರದಾನಸ್ವರೂಪಂ ಚ[4]
ಹ್ಯೇಕೋನವಿಂಶತಿ ಸ್ಮೃತಮ್[5] ।
ವಿಘ್ನಪ್ರಸಾದೋ ವಿಂಶಃ ಸ್ಯಾತ್[6]
ಸೋಮಾಸ್ಕಂದಃ ತತಃ ಪರಮ್[7] ॥ ॥ ೧೩೫ ॥

---

೧೭ ತನ್ನನ್ನು ಆಶ್ರಯಿಸಿದ ಚಂಡೇಶನೆಂಬ ವಿಪ್ರನನ್ನು ಅನುಗ್ರಹಿಸಿದುದು ಹದಿನೇಳನೆಯ ಲೀಲೆ.

೧೮ ಅಮೃತಕ್ಕಾಗಿ ಕ್ಷೀರಸಾಗರವನ್ನು ಮಥಿಸಿದಾಗ ಜನಿಸಿದ ವಿಷವನ್ನು ಪಾನಮಾಡಿದುದು ಹದಿನೆಂಟನೆಯ ಲೀಲೆ. ॥ ೧೩೪ ॥

೧೯ ದಿವ್ಯಲಿಂಗದಲ್ಲಿ ಉದ್ಭವಿಸಿ ವಿಷ್ಣುವಿಗೆ ಚಕ್ರವನ್ನು ದಾನಮಾಡಿದ ಸ್ವರೂಪವು ಹತ್ತೊಂಭತ್ತನೆಯ ಲೀಲೆ.

೨೦ ವಿಘ್ನೇಶ್ವರನಿಗೆ ಪ್ರಸನ್ನನಾದುದು ಇಪ್ಪತ್ತನೆಯ ಲೀಲೆ.

೨೧ ನಂತರ ಮಹೇಶನು ಅಂಧಕಾಸುರನನ್ನು ಕೊಲ್ಲುವಾಗ ಉಮೆ ಮತ್ತು ಸ್ಕಂದನೊಡನಿದ್ದುದು—ಈ ಸೋಮಾಸ್ಕಂದಸ್ವರೂಪವೇ ಇಪ್ಪತ್ತೊಂದನೆಯ ಲೀಲೆ. ॥ ೧೩೫ ॥

---

1 ಚಂಡೇಶಾನುಗ್ರಹಃ ಸಪ್ತದಶೇತಿ ಪರಿಕೀರ್ತಿತಾಃ— ಖ, ಗ, ಚ, ಝ.
ಚಂಡೇಶಾನುಗ್ರಹಂ ಚೈವ ತತಃ ಸಪ್ತದಶಂ ಭವೇತ್—ಪ.

2 ವಿಷಸಂಹಾರಿಣಂ ಚೈವ—ಡ.

3 ವಿಷಾಪಹರಣಶ್ಚಾಷ್ಟಾದಶೇತಿ ಸಮುದಾಹೃತಃ—ಡ.

4 ತು—ಕ, ಖ, ಘ, ಛ, ಟ, ಠ, ಡ, ಢ, ತ, ಥ, ಪ.

5 ಏಕೋನವಿಂಶತಿಶ್ಚೈವ ಚಕ್ರದಾನಸ್ವರೂಪಕಮ್—ಫ.

6 ವಿಂಶತಿರ್ವಿಘ್ನಪ್ರಸಾದಃ—ಖ, ಗ, ಚ, ಛ.

7 ಉಮಾಸ್ಕನ್ದಸ್ತತಃ ಪರಮ್—ಫ.

ಸೋಮಾಸ್ಕಂದಶ್ಚೈಕವಿಂಶಃ[1]
ದ್ವಾವಿಂಶಶ್ಚೈಕಪಾದಕಃ[2] ।
ಸುಖಾವಹಸ್ತ್ರಯೋವಿಂಶಃ[3]
[4]ಭವೇಚ್ಚ[5] ತದನಂತರಮ್ ॥ ॥ ೧೩೬ ॥

ದಕ್ಷಿಣಾಮೂರ್ತಿರೂಪಂ ತು[6]
ಚತುರ್ವಿಂಶಮಿತೀರಿತಮ್[7] ।
ಲಿಂಗೋದ್ಭವಸ್ವರೂಪಂ ತು[8]
ಪಂಚವಿಂಶಂ ಪ್ರಕೀರ್ತಿತಮ್ ॥ ॥ ೧೩೭ ॥

ಏತೇ ಮಹೇಶರೂಪಾಶ್ಚ[9]
ಮೂರ್ತಿಭೇದಾಃ ಪ್ರಕೀರ್ತಿತಾಃ ।

---

೨೨ ಕಲ್ಪಾಂತದಲ್ಲಿ ಜಗತ್ತನ್ನು ಸಂಹರಿಸಿ ಒಂದು ಪಾದದಿಂದ ಸಂಚರಿಸಿದುದು ಇಪ್ಪತ್ತೆರಡನೆಯ ಲೀಲೆ.

೨೩ ಜಗತ್ತಿಗೆ ಸುಖದಾಯಕನಾಗಿ ಶಂಕರನಾದುದು ಇಪ್ಪತ್ತಮೂರನೆಯ ಲೀಲೆ. ॥ ೧೩೬ ॥

೨೪ ದಕ್ಷಿಣಾಮೂರ್ತಿಯ ರೂಪವು ಇಪ್ಪತ್ತನಾಲ್ಕನೆಯ ಲೀಲೆ.

೨೫ ಲಿಂಗರೂಪವಾಗಿ ಆವಿರ್ಭವಿಸಿದುದು ಇಪ್ಪತ್ತೈದನೆಯ ಲೀಲೆ. ॥ ೧೩೭ ॥

ಮಹೇಶತತ್ತ್ವದ ಈ ಇಪ್ಪತ್ತೈದು ಸ್ವರೂಪಗಳನ್ನು ಲೀಲಾಮೂರ್ತಿಗಳೆಂದು

---

1 ಉಮಾಸ್ಕನ್ದೈಕವಿಂಶತಿಃ—ಖ, (ಪಾ).

2 ಜಾಹ್ನವೀಧರಮೂರ್ತಿಃ ಸ್ಯಾತ್ ದ್ವಾವಿಂಶತ್ ಪರಿಕೀರ್ತಿತಾ—ಪ.

3 ತ್ರಯೋವಿಂಶತ್ ಸುಖಾಸನಮ್—ಫ.

4 ಈ ಪಾದ—ಛ, ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

5 ಸ್ಯಾದ್ಭವೇತ್—ಕ.

6 ದಕ್ಷಿಣೇಶಂ ತತಃ ಪರಂ—ಡ.

7 ಈ ಪಾದ ಡ. ಪುಸ್ತಕದಲ್ಲಿಲ್ಲ.

8 ಉರು ಲಿಂಗೋದ್ಭವಂ ಚೈವ—ಥ.

9 ಏವಂ ಮಹೇಶರೂಪಾಣಿ—ಥ.
ಏತೇ ಮಹೇಶರೂಪಾಣಿ—ಫ.
ಏತೇ ಮಹೇಶರೂಪಾಃ ಸ್ಯುಃ—ಕ, ಫ, ಛ.'
ಏತೇ ಮಹೇಶರೂಪಾಸ್ತು—ಢ, ಥ, ದ.

ಸೋಮಧಾರ್ಯಾದಿಲಿಂಗಾಂತಂ[1]
ಕರ್ಮಣಶ್ಚ ಸಮುದ್ಭವಮ್[2] ॥ ॥ ೧೩೮ ॥

ಏತೇ ಮಹೇಶರೂಪಾಶ್ಚ
ಕರ್ಮಾಖ್ಯಾಚ್ಚ[3] ಸಮುದ್ಭವಾಃ
[4]ಪಂಚವಿಂಶತಿಭೇದೇನ[5]
ರೂಪಭೇದಾಃ ಪ್ರಕೀರ್ತಿತಾಃ[6] ॥ ॥ ೧೩೯ ॥

[7]ಮಹೇಶಸ್ಯ ಸಹಸ್ರಾಂಶಾತ್
ರುದ್ರದೇವಸಮುದ್ಭವಃ ।
ತನ್ಮಹೇಶ್ವರಕೋಟ್ಯಂಶಾತ್
ವಿಷ್ಣುದೇವಸಮುದ್ಭವಃ[8] ॥ ॥ ೧೪೦ ॥

ಹೇಳುತ್ತಾರೆ. ಸೋಮಧರನಿಂದ ಮೊದಲ್ಗೊಂಡು ಜ್ಯೋತಿರ್ಲಿಂಗದ ಸ್ವರೂಪದ ವರೆಗಿನ ಸಕಲಸ್ವರೂಪಗಳು ಕರ್ಮಸಾದಾಖ್ಯದಿಂದ ಆವಿರ್ಭವಿಸಿದವು. ॥ ೧೩೮ ॥

ಕರ್ಮಸಾದಾಖ್ಯದಿಂದ ಉದ್ಭವಿಸಿದ ಇವು ಮಹೇಶತತ್ತ್ವದ ಸ್ವರೂಪಗಳು. ಹೀಗೆ ಮಹೇಶನ ಲೀಲಾರೂಪಗಳು ಇಪ್ಪತ್ತೈದು. ॥ ೧೩೯ ॥

ಮಹೇಶನ ಸಾವಿರದಲ್ಲೊಂದಂಶದಿಂದ ರುದ್ರದೇವನ ಆವಿರ್ಭಾವವಾಗುತ್ತದೆ. ಆ ಮಹೇಶನ ಕೋಟಿಯಲ್ಲೊಂದಂಶದಿಂದ ವಿಷ್ಣುದೇವನ ಉದ್ಭವವಾಗುತ್ತದೆ. ॥ ೧೪೦ ॥

---

1 ಸೋಮಧಾರಾದಿ ಲಿಂಗಾಂತಂ—ಖ, ಗ, ಚ, ಝ.
ಇಂದುದರಾದಿ ಸ್ಥಾಣ್ವಂತಂ—ಕ, ಖ, (ಪಾ) ಟ, ಫ, ಛ, ತ, ಥ, ದ, ಪ.
ಇಂದುಧರಾದಿ ಸ್ಥಾಣ್ವಂತಂ—ತ, ಡ.
ಸ್ಥಾಣ್ವಂತಮಿಂದುಧಾರ್ಯಾದಿ—ಫ.

2 ಸಮುದ್ಭವಃ—ಖ, ಗ, ಚ, ಝ.

3 ಕರ್ಮಾಖ್ಯಾದಿ—ಖ, ಗ, ಚ, ಝ.
ಕರ್ಮಾದಿಷು—ಫ.

4 ಇಲ್ಲಿಂದ 'ಗಲೋದ್ಭವಃ' ವರೆಗೆ 'ಫ' ಪುಸ್ತಕದಲ್ಲಿಲ್ಲ.

5 ಪಂಚವಿಂಶತ್ ಪ್ರಕಾರೇಣ—ಖ, ಗ, ಚ, ಝ.

6 ರೂಪಂ ಪ್ರತಿ ಪೃಥಕ್ ಪೃಥಕ್—ಖ, ಗ, ಚ, ಝ.

7 ಈ ಅರ್ಧ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

8 ವಿಷ್ಣುದೇವಸಮುದ್ಭವಂ—ಘ.
ಬ್ರಹ್ಮವಿಷ್ಣುಸಮುದ್ಭವಾ—ಕ, ಖ, ಛ, ಟ, ಠ, ಡ, ಢ, ತ, ಥ, ದ.

[1]ವಿಷ್ಣುದೇವಸ್ಯ ಕೋಟ್ಯಂಶಾತ್
ಬ್ರಹ್ಮದೇವಸಮುದ್ಭವಃ ।
ನೇತ್ರೇ ದಕ್ಷಿಣವಾಮೋರ್ಧ್ವೇ[2]
ಸೂರ್ಯಸೋಮಾಗ್ನಿಸಂಭವಃ[3] ॥ ॥ ೧೪೧ ॥

ಘ್ರಾಣೇ ವಾಯುಃ ಸಮುತ್ಪನ್ನಃ
[4]ಶ್ರೋತ್ರೇ ಕೀಲಾದಿ ಸಂಭವಃ[5] ।
ಆಸ್ಯೇ ಜ್ಞಾನಂ ಸಮುತ್ಪನ್ನಂ
ಗಣೇಶಸ್ತು ಗಲೋದ್ಭವಃ ॥ ॥ ೧೪೨ ॥

ಷಣ್ಮುಖೋ ಹೃದಯೇ ಜಾತಃ
ನಾಭೇಃ ದೇವಾದಿಸಂಭವಃ[6] ।
ಪಞ್ಚಾಶತ್ಕೋಟಿದೇವಾಶ್ಚ
ಮಹೇಶಸ್ವೇದಸಂಭವಾಃ ॥ ॥ ೧೪೩ ॥

ವಿಷ್ಣುದೇವನ ಕೋಟಿಯಲ್ಲೊಂದಂಶದಿಂದ ಬ್ರಹ್ಮದೇವನು ಜನಿಸುತ್ತಾನೆ. ವಾಮ–ದಕ್ಷಿಣ–ಊರ್ಧ್ವ ನೇತ್ರಗಳಿಂದ ಕ್ರಮವಾಗಿ ಸೂರ್ಯ ಚಂದ್ರ ಅಗ್ನಿಗಳ ಉದಯವಾಗುತ್ತದೆ. ॥ ೧೪೧ ॥

ನಾಸಿಕದಿಂದ ವಾಯುವು ಹುಟ್ಟಿದನು. ಕಿವಿಯಿಂದ ಕೀಲಾದಿಗಳ ಜನನವಾಗುತ್ತದೆ. ಮುಖದಿಂದ ಜ್ಞಾನವು ಉದ್ಭವಿಸುತ್ತದೆ. ಗಣೇಶನು ಕಂಠದಿಂದ ಜನಿಸಿದನು. ॥ ೧೪೨ ॥

ಷಣ್ಮುಖನು ಹೃದಯದಿಂದ ಹುಟ್ಟಿದನು. ನಾಭಿಯಿಂದ ದೇವಾದಿಗಳು ಉದ್ಭವಿಸಿದರು. ಐವತ್ತು ಕೋಟಿ ದೇವತೆಗಳು ಮಹೇಶನ ಬೆವರಿನಿಂದ ಜನಿಸಿದರು. ॥ ೧೪೩ ॥

---

1 ಈ ಅರ್ಧ—ಕ, ಖ, ಘ, ಛ, ಟ, ಠ. ಪುಸ್ತಕಗಳಲ್ಲಿಲ್ಲ.

2 ನೇತ್ರೇಷು ಸವ್ಯವ್ಯಾಮೋರ್ಧ್ವೇ—ಖ, ಗ, ಜ, ಝ.

3 ತ್ರಿಕೋಣಮುಮಯಾ ಸಾರ್ಧಂ ಸೋಮಸೂರ್ಯಾಗ್ನಿಲೋಚನಮ್—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ.

4 'ಶ್ರೋತ್ರೇ' ಇಲ್ಲಿಂದ 'ಜ್ಞಾನಂ ಸಮುತ್ಪನ್ನಂ' ವರೆಗೆ ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

5 ಶ್ರೋತ್ರೇ ಚೈವ ದಿಶೇಶ್ವರಃ—ಢ.

6 ನಾಭೌ ದೇವಾಶ್ಚ ಸಂಭವಾಃ—ಖ, ಗ, ಜ, ಝ.

ಋಷಯಶ್ಚ ತಥಾ ಕೋಟ್ಯಃ
ರೋಮ್ಣಿ ಚೈವ ಸಮುದ್ಭವಾಃ ।
ತತ್ತ್ವಾನಾ ಮುದ್ಭವಃ ಪ್ರೋಕ್ತಃ
ಶಕ್ತೀನಾಮುದ್ಭವಂ ಶೃಣು ॥ ॥ ೧೪೪ ॥

ಬಿಂದುರೂಪದಶಾಂಶೇನ
ಚೋಮಾಶಕ್ತೇಃ ಸಮುದ್ಭವಃ[1] ।
ಉಮಾಽಮ್ಬಿಕಾ ಗಣಾನೀ ಚ[2]
ತ್ವೀಶ್ವರೀ ಚ ಮನೋನ್ಮನೀ[3] ॥ ॥ ೧೪೫ ॥

[4]ಏಕೈಕೈಸ[5] ದಶಾಂಶೇನ
ಜಾಯತೇ ಕ್ರಮಶಸ್ತಥಾ ।
ಏತಾ ವೈ ಶಕ್ತಯಃ ಪಞ್ಚ
ಶಿವಾದೀನಾಂ ತು[6] ಶಕ್ತಯಃ ॥ ॥ ೧೪೬ ॥

ಅನೇಕಕೋಟಿ ಋಷಿಗಳು ಮಹೇಶನ ರೋಮದಿಂದ ಜನಿಸಿದರು. ಈ ವರೆಗೆ ತತ್ತ್ವಗಳ ಉದ್ಭವವನ್ನು ಹೇಳಲಾಯಿತು. ಷಣ್ಮುಖನೇ! ಇನ್ನು ಶಕ್ತಿಗಳ ಉದ್ಭವವನ್ನು ಕೇಳು. ॥ ೧೪೪ ॥

ಬಿಂದುರೂಪವಾದ ಪರಾಶಕ್ತಿಯ ಹತ್ತರಲ್ಲೊಂದಂಶದಿಂದ ಉಮಾಶಕ್ತಿಯ ಆವಿರ್ಭಾವವಾಗುತ್ತದೆ. ಹೀಗೆಯೇ ಉಮಾ, ಅಂಬಿಕಾ, ಗಣಾನೀ, ಈಶ್ವರೀ ಮತ್ತು ಮನೋನ್ಮನೀ ಶಕ್ತಿಗಳು— ॥ ೧೪೫ ॥

—ಕ್ರಮವಾಗಿ ಒಂದೊಂದರ ಹತ್ತರಲ್ಲೊಂದಂಶದಿಂದ ಒಂದೊಂದು ಉದ್ಭವಿಸುತ್ತದೆ. ಈ ಐದು ಶಕ್ತಿಗಳು ಶಿವಸಾದಾಖ್ಯಾದಿ ಪಂಚಸಾದಾಖ್ಯಗಳಿಗೆ ಸಂಬಂಧಿಸಿದ ಶಕ್ತಿಗಳು. ॥ ೧೪೬ ॥

---

1 ಶಕ್ತಿಃ ಸಮುದ್ಭವಾ—ಖ, ಗ, ಜ, ಝ.
ಶಕ್ತಿಸಮುದ್ಭವಃ—ಛ, ಟ, ಠ, ಡ, ಢ, ತ, ಥ ದ, ಧ, ಪ.
2 ಗಣೇಶೀ ಚ—ಖ, ಗ. ಜ, ಝ.
3 ಗಣೋನ್ಮನೀ—ತ.
4 ಈ ಅರ್ಧ ಛ. ಪುಸ್ತಕದಲ್ಲಿಲ್ಲ.
5 ಏಕೈಕಂ ತು—ಫ.
6 ಚ—ಖ, ಗ, ಜ, ಝ.

[1]ಮನೋನ್ಮನೀಸಹಸ್ರಾಂಶಾತ್[2]
ಗೌರೀ ಜಾತೇತಿ ಕೀರ್ತಿತಾ ।
ತಸ್ಯಾಃ[3] ಸರಸ್ವತೀ ದುರ್ಗಾ
ಹ್ಯುಮಾಯಾಶ್ಚ ಪ್ರಭಾವತಃ ॥ ॥ ೧೪೭ ॥

ಶಚೀ ಜ್ಯೇಷ್ಠಾ ಚ ಲಕ್ಷ್ಮೀಶ್ಚ[4]
ತಥಾ ಚಾನ್ಯಾಶ್ಚ ಶಕ್ತಯಃ[5] ।
[6]ಕೋಟಿಶಕ್ತಯಃ ಏತಾ ವೈ[7]
ಗೌರೀದೇಹಸಮುದ್ಭವಾಃ ॥ ॥ ೧೪೮ ॥

ಶಕ್ತಿಭೇದೋ[8] ವಿಶೇಷೇಣ
ಸಮಾಸಾತ್ ಪರಿಕೀರ್ತಿತಃ[9] ।

ಮನೋನ್ಮನಿಯ ಸಾವಿರದಲ್ಲೊಂದಂಶದಿಂದ ಗೌರೀಶಕ್ತಿಯು ಉದ್ಭವಿಸಿತೆಂದು ಹೇಳುತ್ತಾರೆ. ಉಮಾಶಕ್ತಿಯಿಂದ ಪ್ರಭಾವಿತವಾದ ಗೌರೀಶಕ್ತಿಯಿಂದ ಸರಸ್ವತೀ ದುರ್ಗಾ,— ॥ ೧೪೭ ॥

—ಶಚೀ ಜ್ಯೇಷ್ಠಾ, ಲಕ್ಷ್ಮೀ ಶಕ್ತಿದೇವತೆಗಳ ಮತ್ತು ಚಾಮುಂಡೀ ಕಾಲೀ ಮುಂತಾದ ಇತರ ಶಕ್ತಿದೇವತೆಗಳ ಉದ್ಭವವಾಗುತ್ತದೆ. ಗೌರಿಯ ದೇಹದಿಂದ ಈ ಕೋಟಿಕೋಟಿ ಶಕ್ತಿದೇವತೆಗಳ ಆವಿರ್ಭಾವವಾಗುತ್ತದೆ. ॥ ೧೪೮ ॥

ಹೀಗೆ ಶಕ್ತಿಭೇದವನ್ನು ವಿಶೇಷರೂಪದಿಂದ ಸಂಗ್ರಹವಾಗಿ ನಿರೂಪಿಸಿದ್ದಾಯಿತು.

---

1 ಈ ಅರ್ಧಪದ್ಯ ಛ. ಪುಸ್ತಕದಲ್ಲಿಲ್ಲ.
2 ಸಹಸ್ರಾಶೇ—ಫ.
3 ಲಕ್ಷ್ಮೀಃ—ಖ, ಗ, ಚ, ಝ.
ತ್ರಯಾ—ಕ, ಘ, ಟ, ಥ, ಧ.
ಶ್ರಿಯಾ—ಫ.
4 ಜ್ಯೇಷ್ಠಾ ತಥಾ ಶಾನ್ತಾ—ಖ, ಗ, ಚ, ಝ.
5 ತದನ್ಯಾಶ್ಚೈವ ಶಕ್ತಯಃ—ಧ.
6 ಈ ಅರ್ಧ ಛ. ಪುಸ್ತಕದಲ್ಲಿಲ್ಲ.
7 ಏತಾ ವೈ ಕೋಟಿಶಕ್ತಿಶ್ಚ—ಟ, ಠ, ಡ, ಢ, ತ, ಥ, ದ.
ಶಕ್ತೀನಾಂ ಕೋಟಯಶ್ಚೈವ—ಧ.
8 ಶಕ್ತಿಭೇದಂ—ಘ, ಛ, ಪ, ಫ.
9 ಪರಿಕೀರ್ತಿತಂ—ಘ, ಛ, ಪ, ಫ, ಳ. ಪುಸ್ತಕದಲ್ಲಿ ಇಲ್ಲಿಗೇ ಪಟಲಸಮಾಪ್ತಿಯಾಗಿದೆ.

[1]ಶಿವಾದಯೋ ಮಹೇಂಶಾಂತಾಃ
ಹ್ಯೇಕತ್ರಿಂಶತ್ ಪ್ರಕೀರ್ತಿತಾಃ ॥ ॥ ೧೪೯ ॥

ಯೋ ವೇತ್ತಿ ತತ್ತ್ವಭೇದಂ ಹಿ
ಸಪೂಜಾಸ್ಥಾಪನಾರ್ಹಕಃ ।
[2]ಏವಂ ತ್ರಿಮೂರ್ತಿಭೇದಸ್ತು
ಸಮಾಸಾತ್ ಪರಿಕೀರ್ತಿತಃ ॥
ತತ್ತ್ವಭೇದೋ ಮಯಾ ಪ್ರೋಕ್ತಃ[3]
ವರ್ಣಭೇದಮಥ ಶೃಣು[4] ॥ ॥ ೧೫೦ ॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ತತ್ತ್ವಭೇದೋ ನಾಮ ಪ್ರಥಮಃ ಪಟಲಃ

ಇದು ಶಿವತತ್ತ್ವ ಮೊದಲ್ಗೊಂಡು ಮಹೇಶತತ್ತ್ವದವರೆಗಿನ ಮೂವತ್ತೊಂದು ಭೇದಗಳ ವಿವರಣೆ. ॥ ೧೪೯ ॥

ಈ ತತ್ತ್ವಭೇದವನ್ನರಿತವನು ಶಿವತತ್ತ್ವದ ಪೂಜೆ ಮತ್ತು ಸ್ಥಾಪನೆಗಳಿಗೆ ಯೋಗ್ಯನಾಗುತ್ತಾನೆ. ಹೀಗೆ ಶಿವ ಸದಾಶಿವ ಮಹೇಶರೂಪವಾದ ತ್ರಿಮೂರ್ತಿಗಳ ಭೇದವನ್ನು ಸಂಗ್ರಹವಾಗಿ ನಿರೂಪಿಸಿದ್ದಾಯಿತು. ಷಣ್ಮುಖನೇ ! ತತ್ತ್ವಭೇದವನ್ನು ಹೇಳಿದ್ದಾಯಿತು. ಇನ್ನು ವರ್ಣಭೇದವನ್ನು ಕೇಳು. ॥ ೧೫೦ ॥

ಇತಿ ಶ್ರೀವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥಸಂಹಿತಾಯಾಂ
ತತ್ತ್ವಭೇದೋ ನಾಮ ಪ್ರಥಮಃ ಪಟಲಃ

---

1 ಈ ಅರ್ಧಪದ್ಯ—ಘ, ಟ, ಠ, ಡ, ಢ, ತ, ಥ, ದ, ಧ, ಫ. ಪುಸ್ತಕಗಳಲ್ಲಿಲ್ಲ.
2 ಈ ಅರ್ಧಪದ್ಯ—ಟ, ಠ, ಡ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.
3 ತತ್ತ್ವಭೇದಮಿದಂ ಪ್ರೋಕ್ತಂ—ಗ, ಟ, ಠ, ಧ, ಬ. ತತ್ತ್ವಭೇದಃ ಸಮಾಖ್ಯಾತಃ—ಜ. ತತ್ತ್ವಭೇದಮಯಂ ಪ್ರೋಕ್ತಃ—ಝ.
4 ಈ ಅರ್ಧ—ಕ, ಘ, ಪುಸ್ತಕಗಳಲ್ಲಿ ಮಾತ್ರ ಕಂಡುಬರುತ್ತದೆ.

ದ್ವಿತೀಯ—ವರ್ಣಭೇದ ಪಟಲ

[1]ಸಮಸ್ತಬೀಜ[2]ಪ್ರಭವಸ್ಯ[3] ಕಾರಣಂ
ನಮಾಮಿ ದೇವಂ ಪ್ರಣವಾಂತರಸ್ಥಿತಮ್ ।
ತ್ರಿವರ್ಣ[4]ಸಂಭೂತವಿವರ್ಣ[5]ವರ್ಣಗಂ
ಸ್ವಶಕ್ತಿಸಂಕ್ಷೋಭಕರಂ ಪರಂ ಹರಮ್ ॥ ॥ ೧ ॥

ಅಥಾತಃ ಸಂಪ್ರವಕ್ಷ್ಯಾಮಿ
ವರ್ಣಭೇದವಿಧಿಂ[6] ಪರಮ್[7] ।

ಅಕಾರದಿಂದ ಕ್ಷಕಾರದವರೆಗಿನ ಸಕಲ ಬೀಜಾಕ್ಷರಗಳ ಉತ್ಪತ್ತಿಗೆ ಕಾರಣನಾದ, ಪ್ರಕಾಶಮಾನನಾದ, ಓಂಕಾರದ ಮಧ್ಯದಲ್ಲಿರುವ, ತತ್ತ್ವ-ಮೂರ್ತಿ-ಪ್ರಭಾವಗಳಿಂದ ಮೂರುಬಗೆಯಾದ, ಶುಕ್ಲಾದಿ ವಿಭಿನ್ನ ಬಣ್ಣಗಳಿಂದ ಕೂಡಿದ, ಅಕಾರಾದಿ ಕ್ಷಕಾರಾಂತ ವರ್ಣಗತನಾದ, ತನ್ನ ಪರಾಶಕ್ತಿರೂಪವಾದ ಬಿಂದುವನ್ನು ಕ್ಷೋಭೆಗೊಳಿಸುವವನಾದ, ಶ್ರೇಷ್ಠನಾದ, ಸಂಸಾರಬಂಧವನ್ನು ಪರಿಹರಿಸುವವನಾದ ಹರನನ್ನು ವಂದಿಸುತ್ತೇನೆ. ॥ ೧ ॥

ತತ್ತ್ವಪ್ರಭೇದವನ್ನು ನಿರೂಪಿಸಿದ ತರುವಾಯ ಉತ್ಕೃಷ್ಟವಾದ ವರ್ಣಗಳ ಭೇದವಿಧಾನವನ್ನೂ, ಸಮಸ್ತ ಮಂತ್ರಗಳ ಉದ್ಭವವನ್ನೂ, ಅಕ್ಷರಗಳ ಉತ್ಪತ್ತಿಯನ್ನೂ ಹೇಳುವೆನು. ॥ ೨ ॥

---

1 ಈ ಪದ್ಯ—ಖ, ಜ, ಫ, ಭ. ಪುಸ್ತಕಗಳಲ್ಲಿಲ್ಲ.
2 ಬೀಜಂ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ತ, ದ.
3 ಪ್ರಭಾವಸ್ಯ—ಕ, ಪ.
4 ತ್ರಿವರ್ಗ—ಟ.
5 ವಿವರ್ಣಂ—ಟ.
6 ಭೇದಂ ವಿಧಂ—ಕ.
ಭೇದವಿಧಂ—ಘ.
7 ಕ್ರಮಂ—ಡ, ಪ.

ಮನ್ತ್ರಾಣಾಮುದ್ಭವಂ ಚೈವ[1]
ವರ್ಣಾನಾಂ ಚ ಸಮುದ್ಭವಮ್[2] ॥ ॥ ೨ ॥

ಅಕಾರಾದಿಕ್ಷಕಾರಾನ್ತಾಃ[3]
ಏಕಪಂಚಾಶದಕ್ಷರಮ್[4] ।
ಏತೇ ವರ್ಣಾಃ ಪ್ರಶಸ್ಯಂತೇ
ಕಾಮಿತಾರ್ಥಪ್ರದಾಯಕಾಃ[5] ॥ ॥ ೩ ॥

ಸ್ತ್ರೀರೂಪಾಶ್ಚೈವ ಪುಂರೂಪಾಃ[6]
ತಥಾ ಚೋ[7]ಭಯರೂಪಕಾಃ[8] ।
ಸರ್ವೇ ವೈ[9] ದೇವತಾರೂಪಾಃ[10]
ಪ್ರತ್ಯೇಕಂ ವರ್ಣರೂಪಧೃತ್[11] ॥ ॥ ೪ ॥

ಅಕಾರ ಮೊದಲುಗೊಂಡು ಕ್ಷಕಾರದವರೆಗಿನ ಅಕ್ಷರಗಳು ಐವತ್ತೊಂದು. ಈ ಅಕ್ಷರಗಳು ಬಯಸಿದ ಪ್ರಯೋಜನವನ್ನು ಕೊಡುತ್ತವೆಯೆಂದು ಹೇಳುತ್ತಾರೆ. ॥ ೩ ॥

ಸ್ತ್ರೀಲಿಂಗವಾಗಿಯೂ ಪುಲ್ಲಿಂಗವಾಗಿಯೂ ಹಾಗೆಯೇ ನಪುಂಸಕಲಿಂಗವಾಗಿಯೂ ಇರುವ ಈ ಸಮಸ್ತವರ್ಣಗಳು ದೇವತಾಸ್ವರೂಪವನ್ನೂ ಧರಿಸಿವೆ. ॥ ೪ ॥

---

1 ಮುದ್ಭವತ್ವಂ ಚ—ಕ, ಗ, ಚ, ಛ, ಟ, ಠ, ಥ.
ಮುದ್ಭವಂ ಕಿಂಚಿತ್—ಪ.
2 ವರ್ಣಾನಿ ಚ ಸಮುದ್ಭವಂ—ಡ, ಪ.
ವರ್ಣನಾಮುದ್ಭವಂ ಭವೇತ್—ಥ.
ವರ್ಣಾನಿ ಚ ಸಮುದ್ಭವಃ—ಪ, ಡ.
3 ಕ್ಷಕಾರಾನ್ತಾ—ಚ, ಜ, ತ.
4 ದಕ್ಷರಾಃ—ಚ, ಜ, ತ.
5 ಪ್ರದಾಯಕಮ್—ಪ, ಡ.
6 ಸ್ತ್ರೀರೂಪಂ ಪುಂಸರೂಪಂ ಚ—(ಡ)
ಸ್ತ್ರೀರೂಪಂ ಪುಂರೂಪ ಚ—(ಪ)
7 ಸ್ಥಿತಾಶ್ಚೋ—ಛ.
8 ರೂಪಕಂ—ಘ, ಠ, ಡ, ಪ.
9 ಸರ್ವೇ ಚ—ಜ.
10 ರೂಪಂ—ಡ, ಪ, ಘ.
11 ಧೃಕ್—ಖ, ಗ, ಚ, ಝ.

ವರ್ಣಂ[1] ಬೀಜಂ ತಥಾರ್ಣಶ್ಚ[2]
ಲಿಂಗಮಕ್ಷರಮಾತೃಕಮ್[3] ।
ಏತಾನಿ[4] ಷಟ್ ಚ ನಾಮಾನಿ[5]
ವರ್ಣಪರ್ಯಾಯವಾಚಕಾಃ ॥ ॥ ೫ ॥

ತೇಭ್ಯಃ[6] ಸಮುದ್ಭವೋ[7] ನಾಮ-
ರೂಪಭೇದಸ್ತ[8]ಥಾಂಶಕಃ[9] ।
ತತ್ತ್ವಮನ್ತ್ರಾದಿ[10]ಭೇದಶ್ಚಾ[11]-
ಪ್ಯಧಿದೈವ[12]ಫಲಂ ತಥಾ[13] ॥ ॥ ೬ ॥

ವರ್ಣ ಬೀಜ ಅರ್ಣ ಲಿಂಗ ಅಕ್ಷರ, ಮಾತೃಕೆ, ಈ ಆರೂ ವರ್ಣಪರ್ಯಾಯ ನಾಮಗಳು. ॥ ೫ ॥

ಆ ಐವತ್ತೊಂದಕ್ಷರಗಳಿಂದ ನಾಮ ಮತ್ತು ಸ್ವರೂಪಗಳ ಭೇದವೂ, ಹಾಗೆಯೇ ಅಂಶರೂಪವಾಗಿ ತತ್ತ್ವ ಮಂತ್ರಾದಿಗಳ ಭೇದವೂ ಮತ್ತು ಅಧಿದೈವ ಹಾಗೂ ಫಲ ಭೇದಗಳೂ ಹುಟ್ಟಿದವು. ॥ ೬ ॥

---

[1] ವರ್ಣೇ—ಕ, ಖ.

[2] ತಥಾ ಕೂಟಂ—ಡ, ಪ.
ತಥಾರ್ಣಂ ಚ—ಖ, ಗ, ಚ, ಝ.

[3] ಮಾತೃಕಾ—ಝ, ಡ, ಪ.

[4] ಏತೇ ವೈ—ಖ, ಗ, ಚ, ಜ, ಝ.

[5] ಷಟ್ ಸುಕಂಮಾನಿ—ಫ.
ಷಟ್ ಚ ಭೇದಾನಿ—ಡ, ಪ.

[6] ತೇಷಾಂ—ಕ, ಖ, ಝ.
ಏಷಾಂ—ಥ.

[7] ಸಮುದ್ಭವಂ—ಖ, ಗ, ಚ, ಝ.

[8] ರೂಪಭೇದಂ ತ—ಖ, ಗ, ಚ, ಜ, ಝ.
ರೂಪಂ ಭೇದಂ—ಟ.

[9] ಥಾಂಶಕಂ ಖ, ಗ, ಚ, ಜ, ಝ.
ಥಾಂಶಕಂ—ಭ.
ರೂಪಭೇದಾಶ್ಚ ಕ್ರಮಂ ತಥಾ – ಡ.

[10] ತತ್ತ್ವಮೂರ್ತ್ಯಾದಿ—ಥ.

[11] ಭೇದಂ ಚಾ—ಖ, ಗ, ಚ, ಜ, ಝ.

[12] ದೇವಂ—ಡ, ಥ, ಪ, ಫ.

[13] ಯಥಾ—ಘ, ಛ, ಟ, ತ.

ಸ್ಥೂಲಸೂಕ್ಷ್ಮಾಕೃತಿಂ ಚೈವ[1]
ಜೀವೋಪಾಧಿವಿಭೇದಕಮ್ ।
ಏತದ್ಭೇದಂ[2] ಸಮಾಸೇನ[3]
ಸಂಕ್ಷೇಪಾತ್ ಶೃಣು[4] ಷಣ್ಮುಖ ॥ ॥ ೭ ॥

ಶಿವತತ್ತ್ವಾತ್ ಪರಾತ್ ಸೂಕ್ಷ್ಮಾತ್[5]
ಬಿಂದುರೂಪಂ ಚ ಜಾಯತೇ ।
ಬಿಂದೋರ್ನಾದಃ[6] ಸಮುತ್ಪನ್ನಃ[7]
ನಾದಾತ್ ಶಕ್ತಿರಜಾಯತ[8] ॥ ॥ ೮ ॥

ಶಕ್ತೇಸ್ತು ಜಾಯತೇ ಶಬ್ದಃ
ಶಬ್ದಾಜ್ಜಾತಂ ತು[9] ವಾಗ್ಭವಮ್[10] ।

ಎಲೈ ಷಣ್ಮುಖನೇ! ವರ್ಣಗಳ ಸ್ಥೂಲಾಕಾರ ಸೂಕ್ಷ್ಮಾಕಾರ ಜೀವಭೇದ ಮತ್ತು ಉಪಾಧಿಗಳನ್ನು ಕ್ರಮವಾಗಿ ಸಂಕ್ಷೇಪವಾಗಿ ಹೇಳುವೆನು ಕೇಳು. ॥ ೭ ॥

ಉತ್ಕೃಷ್ಟವೂ ವ್ಯೋಮಾತೀತವೂ ಆದ ಶಿವತತ್ತ್ವದ ದೆಸೆಯಿಂದ ಬಿಂದುಸ್ವರೂಪವು ಹುಟ್ಟುತ್ತದೆ. ಕುಂಡಲಿನೀಶಕ್ತಿಯಾದ ಬಿಂದುವಿನಿಂದ ನಾದವು ಜನಿಸುತ್ತದೆ. ನಾದದಿಂದ ಶಕ್ತಿಯು ಉತ್ಪನ್ನವಾಯಿತು. ॥ ೮ ॥

ಶಕ್ತಿಯು ದೆಸೆಯಿಂದ ಶಬ್ದವು ಹುಟ್ಟುತ್ತದೆ. ಶಬ್ದದಿಂದ ವಾಗ್ಭವವು ಹುಟ್ಟು

---

1 ಕೃತಿಶ್ಚೈವ—ಡ, ಪ, ಪ.
2 ಏತತ್ಸರ್ವಂ—ಡ, ಪ.
3 ಮಹಾಸೇನ—ಖ, ಗ, ಚ, ಝ.
4 ಶ್ರೂಯತಾಮಪಿ—ಡ, ಪ.
5 ಶಿವತತ್ತ್ವೇ ಪರೇ ಸೂಕ್ಷ್ಮೇ—ಖ, ಗ, ಚ, ಜ, ಝ.
6 ನ್ನಾದಂ—ಥ.
7 ಸಮುತ್ಪನ್ನಂ—ಛ, ಟ, ತ, ಥ. ದ, ಪ.
8 ನಾದಾನ್ತೇ ಶಕ್ತಿ ಜಾಯತೇ—ಗ, ಘ, ಛ, ಟ, ಠ, ಡ, ಢ, ತ, ಥ, ದ, ಪ.
9 ಚ್ಛಾಯೇತ—ಗ, ಚ.
10 ವಾಗ್ಭವೇತ್—ಥ.

ವಾಗ್ಭವಾಚ್ಚ[1] ಕಲಾಃ ಜಾತಾಃ
ಕಲಾಭ್ಯೋ ಸಕಲಾಸ್ತಥಾ[2] ‖ ‖ ೯ ‖

ಕಲಾಶ್ಚ ವಿಕಲಾಶ್ಚೈವ
ವರ್ಣಾಶ್ಚೈವ ಸಮುದ್ಭವಾಃ ।
ಪ್ರಣವಃ ಪ್ರಥಮಂ ಪ್ರೋಕ್ತಃ
ಆ ಈ ಊ ತದನಂತರಮ್[3] ‖ ‖ ೧೦ ‖

[4]ತಸ್ಮಾದ್ವೈ ವಾಚಕೋ ಮನ್ತ್ರಃ
ಮನ್ತ್ರಸ್ತೈರೇವ[5] ಭಿದ್ಯತೇ ।
ಏವಂ[6] ಸೃಷ್ಟಿಕ್ರಮಃ ಪ್ರೋಕ್ತಃ[7]
ತೇಷಾಂ[8] ಲಕ್ಷಣಮುಚ್ಯತೇ ‖ ‖ ೧೧ ‖

ತ್ತದೆ. ವಾಗ್ಭವದಿಂದ ಕಲಾಕ್ಷರಗಳೂ, ಕಲಾಕ್ಷರಗಳಿಂದ ವಿಕಲಾಕ್ಷರಗಳೂ ಹುಟ್ಟು ತ್ತವೆ. ‖ ೯ ‖

ಹೀಗೆ ಕಲೆ ಮತ್ತು ವಿಕಲೆಗಳೆಂಬ ಸಮುಸ್ತವರ್ಣಗಳೂ ಹುಟ್ಟುತ್ತವೆ. ಮೊದಲು ಓಂಕಾರವು ಉಕ್ತವಾಗುತ್ತದೆ. ಅದರ ತರುವಾಯ ಅ, ಇ, ಉ—ವರ್ಣಗಳು ಉಕ್ತ ವಾಗುತ್ತವೆ. ‖ ೧೦ ‖

ವರ್ಣೋದ್ಧೃತವಾದ್ದರಿಂದಲೇ ಮಂತ್ರವು ವಾಚಕವೆನಿಸಿಕೊಳ್ಳುತ್ತದೆ. ಆ ಬಿಂದ್ವಾದಿಗಳಿಂದಲೇ ಮಂತ್ರವು ಭೇದವನ್ನು ಹೊಂದುತ್ತದೆ. ಹೀಗೆ ಸೃಷ್ಟಿಕರ್ಮವು ಹೇಳಲ್ಪಟ್ಟಿತು. ಇನ್ನೂ ಆ ಬಿಂದ್ವಾದಿಗಳ ಲಕ್ಷಣವನ್ನು ಹೇಳುತ್ತೇನೆ. ‖ ೧೧ ‖

---

1 ವಾಗ್ಭವೇ ತು—ಡ, ಪ, ಫ.

2 ಲಾಃ ಸ್ಮೃತಾಃ—ಫ.

3 ಈ ಪದ್ಯ—ಫ. ಪುಸ್ತಕದಲ್ಲಿ ಮಾತ್ರ ದೊರೆಯುತ್ತದೆ.

4 ಈ ಅರ್ಧಪದ್ಯಸ್ಥಾನದಲ್ಲಿ ಫ, ಪುಸ್ತಕದಲ್ಲಿ "ತಸ್ಯ ವಾಚಕಮು ಕ್ತಾಶ್ಚ ಮಂತ್ರಸ್ತೈರೇವ ಭಿದ್ಯತೇ" ಎಂಬ ಪಾಠವಿದೆ.

5 ಸ್ತೇನೈವ—ಪ.

6 ಏತತ್—ಕ, ಖ, ಗ, ಜ, ಝ, ಟ, ಠ, ಡ, ಢ, ತ, ಥ, ದ, ಧ.
ತತ್—ಛ.

7 ಕ್ರಮಂ ಪ್ರೋಕ್ತಂ—ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಪ.

8 ತತೋ—ಚ.

[1]ಬಿಂದುರೂಪಾ[2] ಪರಾ ಶಕ್ತಿಃ
ನಾದಶ್ಚೈವಾದಿರುಚ್ಯತೇ[3] |
ಶಕ್ತಿರಿಚ್ಛೇತಿ ವಿಜ್ಞೇಯಾ[4]
ಶಬ್ದೋ ಜ್ಞಾನಮಿಹೋಚ್ಯತೇ[5] || || ೧೨ ||

ವಾಗ್ಭವಂ[6] ಸ್ಯಾತ್ ಕ್ರಿಯಾಶಕ್ತಿಃ
ಕಲಾ ವೈ ಷೋಡಶಸ್ವರಾಃ
ತೇಷಾಂ ರೂಪಂ ದ್ವಿಧಾ[7] ಪ್ರೋಕ್ತಃ
ಪ್ರಕೃತಿರ್ವಿಕೃತಿಸ್ತಥಾ || || ೧೩ ||

ಪ್ರಕೃತಿಃ ಸಪ್ತ ವರ್ಣಾಶ್ಚ[8]
ವಿಕೃತಿಸ್ತು ನವಾರ್ಣಕಾಃ[9] |

ಶಿವನ ಪರಾಶಕ್ತಿಯು ಬಿಂದುರೂಪವಾಗುತ್ತದೆ. ಆದಿಶಕ್ತಿಯನ್ನು ನಾದವೆಂದು ಹೇಳುತ್ತಾರೆ. ಇಚ್ಛಾಶಕ್ತಿಯನ್ನೇ ಶಕ್ತಿಯೆಂದು ತಿಳಿಯಬೇಕು. ಇಲ್ಲಿ ಜ್ಞಾನ ಶಕ್ತಿಯೇ ಶಬ್ದವು. || ೧೨ ||

ಕ್ರಿಯಾಶಕ್ತಿಯು ವಾಗ್ಭವ ತತ್ತ್ವ. ಹದಿನಾರು ಸ್ವರಗಳು ಕಲೆಗಳೆನಿಸುತ್ತವೆ. ಸ್ವರಗಳ ಸ್ವರೂಪವು ಪ್ರಕೃತಿ ಮತ್ತು ವಿಕೃತಿಯೆಂದು ಎರಡು ವಿಧ. || ೧೩ ||

ಏಳು ವರ್ಣಗಳಿಗೆ ಪ್ರಕೃತಿಯೆಂದೂ ಒಂಭತ್ತು ವರ್ಣಗಳಿಗೆ ವಿಕೃತಿಯೆಂದೂ ಹೆಸರು. ಅಕಾರ, ಇಕಾರ, ಉಕಾರ, ಋಕಾರ— || ೧೪ ||

---

1 ಈ ಅರ್ಧಪದ್ಯ—ಡ, ಫ, ಪುಸ್ತಕಗಳಲ್ಲಿಲ್ಲ.
2 ರೂಪಂ—ಛ, ಟ, ಠ, ದ, ಧ, ಪ, ಬ.
3 ದಿರೀರಿತಃ—ಖ.
4 ವಿಜ್ಞೇಯಂ—ಕ.
5 ಶಬ್ದಶ್ಚ ಜ್ಞಾನಮೀರಿತಃ—ಖ, ಝ.
6 ವಾಗ್ಭವಾ—ಕ, ಖ, ತ.
7 ಯಥಾ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ.
8 ವರ್ಣಾನಿ—ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ.
9 ನವಾರ್ಣಕಂ—ಗ, ಚ, ಜ, ತ, ದ.

ಅಕಾರಶ್ಚ ಇಕಾರಶ್ಚ[1]
ಉಕಾರಶ್ಚ[2] ಋಕಾರಕಃ[3] ॥ ॥ ೧೪ ॥

ಇಕಾರಶ್ಚೈವ ಏಕಾರಃ
ಓಕಾರಶ್ಚ ತಥೈವ ಚ ।
ಏತೇ ಸಪ್ತಸ್ವರಾಃ ಪ್ರೋಕ್ತಾಃ
ಪ್ರಕೃತಿಸ್ತು ಸಮೀರಿತಾಃ ॥ ॥ ೧೫ ॥

ಶೇಷಾಸ್ತು ವಿಕೃತಿಃ[4] ಪ್ರೋಕ್ತಾಃ[5]
ತೇಷಾ[6]ಮುದ್ಭವ[7] ಉಚ್ಯತೇ ।
ಅಕಾರಜನ್ಯಶ್ಚಾಕಾರಃ[8]
ಇಕಾರೇ ತ್ವೀಸಮುದ್ಭವಃ[9] ॥ ॥ ೧೬ ॥

—ಲೃಕಾರ ಏಕಾರ ಮತ್ತು ಓಕಾರ ಈ ಏಳು ಸ್ವರವರ್ಣಗಳನ್ನು ಪ್ರಕೃತಿಗಳೆಂದು ಕರೆಯುತ್ತಾರೆ. ॥ ೧೫ ॥

ಉಳಿದ ಒಂಬತ್ತು ಸ್ವರವರ್ಣಗಳು ವಿಕೃತಿಗಳು. ಇನ್ನು ಅವುಗಳ ಉತ್ಪತ್ತಿಯನ್ನು ಹೇಳುತ್ತೇನೆ. ಆಕಾರವು ಅಕಾರದಿಂದ ಹುಟ್ಟಿತು. ಇಕಾರದಲ್ಲಿ ಈಕಾರ ಉದ್ಭವವಾಗುತ್ತದೆ. ॥ ೧೬ ॥

---

1 ರಂ ಚ—ಛ, ಟ, ಠ, ಡ, ಢ, ತ, ಥ, ದ, ಧ, ಫ.

2 ಕಾರಂ ಚ—ಛ, ಟ, ಠ, ಡ, ಢ, ತ, ಥ, ದ, ಧ. ಫ.
ತಥೋಕಾರ—ಚ.

3 ಋಕಾರಕಃ—ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ.

4 ಶೇಷಾ ವಿಕೃತಯಃ—ಕ, ಖ, ಚ, ಝ, ಧ.

5 ಪ್ರೋಕ್ತಂ—ಘ.

6 ತಾಸಾಂ—ಚ.

7 ಮುದ್ಭವಂ—ಗ, ಘ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

8 ಅಕಾರೇ ಚೋದ್ಭವಾಕಾರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ.

9 ತ್ವೀಕಾರಸಂಭವಃ—ಘ, ಜ, ಟ, ಠ, ಡ.
ತ್ವೀಸಮುದ್ಭವಂ—ಛ, ಢ, ತ, ಥ, ದ.

ಉಕಾರೇ ಚೈವ ಊಕಾರಃ[1]
ಋಕಾರೇ ಋೂಸಮುದ್ಭವಃ[2] ।
ಇಕಾರೇ ಚೈವ ಈಕಾರಃ[3]
ಏಕಾರಾದೈ[4]ಸಮುದ್ಭವಃ[5] ॥ ॥ ೧೭ ॥

ಓಕಾರಾದೌ[6]ಸ್ತಥಾ ಜ್ಞೇಯಃ
ಕ್ರಮೇಣೈವ ಸಮುದ್ಭವಾಃ[7] ।
ಏತೇ ವಿಕೃತಯಃ[8] ಪ್ರೋಕ್ತಾಃ
ಆಕಾರಾದಿನವಾರ್ಣಕಾಃ ॥ ೧೮ ॥

ಅಕಾರಾದಿ ವಿಸರ್ಗಾಂತಾಃ[9]
ಏತೇ[10] ವೈ ಷೋಡಶ ಸ್ವರಾಃ ।

ಉಕಾರದಿಂದ ಊಕಾರವೂ, ಋಕಾರದಿಂದ ಋೂಕಾರವೂ, ಇಕಾರದಿಂದ ಈಕಾರವೂ, ಏಕಾರದಿಂದ ಐಕಾರವೂ ಉದ್ಭವಿಸುತ್ತವೆ. ॥ ೧೭ ॥

ಓಕಾರದಿಂದ ಔಕಾರವು ಹುಟ್ಟುತ್ತದೆ. ಹೀಗೆ ಅಕಾರಾದಿ ಹ್ರಸ್ವಗಳಿಂದ ಆಕಾರಾದಿದೀರ್ಘಗಳು ಕ್ರಮವಾಗಿ ಹುಟ್ಟುತ್ತವೆ. ಆ, ಈ, ಊ, ಋೂ, ೡ, ಐ, ಔ, ಅಂ, ಅಃ ಈ ಒಂಭತ್ತು ವರ್ಣಗಳು ವಿಕೃತಿಗಳು. ॥ ೧೮ ॥

ಅಕಾರದಿಂದ ವಿಸರ್ಗದವರೆಗಿನ ಈ ಹದಿನಾರು ವರ್ಣಗಳು ಸ್ವರಗಳೆನಿಸುತ್ತವೆ. ಕಲಾ, ಮಾತ್ರಾ, ಸ್ವರ, ಜೀವ ಪ್ರಕೃತಿ, ಹಾಗೂ ವಿಕೃತಿ— ॥ ೧೯ ॥

---

1 ಊಕಾರಂ—ಛ, ಟ, ಡ, ಥ, ಠ, ತ, ಥ, ದ, ಪ.
2 ತು ಋಕಾರಕಂ—ಫ. ಋೂಸಮುದ್ಭವಂ—ಡ.
3 ೡಕಾರಂ—ಘ, ಡ, ಥ, ತ, ಥ, ದ, ಪ, ಫ, ಭ.
4 ಏಕಾರೇ ತ್ವೈ—ಗ, ಜ, ಜ, ಪಾ.
5 ಸಂಭವಃ—ಟ, ಠ, ಥ, ತ, ಥ, ದ.
6 ಓಕಾರೇ ಚೌ—ಖ, ಗ, ಚ, ಜ, ಝ.
ಓಕಾರೇ ಔ—ಘ, ಥ, ಧ, ಪ.
7 ಸಮುದ್ಭವಃ—ಖ, ಗ, ಚ, ಜ, ಝ.
8 ಏತೇ ವೈ ವಿಕೃತಿಃ—ಗ, ಘ, ಛ, ಜ, ಪ.
9 ವಿಸರ್ಗಾಂತಂ—ಝ, ಡ, ಪ.
10 ಚೈತೇ—ಧ. ಏತಾ—ಡ.

ಕಲಾ ಮಾತ್ರಾಃ[1] ಸ್ವರಾಃ ಜೀವಾಃ
ಪ್ರಕೃತಿರ್ವಿಕೃತಿಸ್ತಥಾ ॥ ॥ ೧೯ ॥

ಪ್ರಾಣ ಆತ್ಮಾ ನಾ ಚ ದೇಹೀ[2]
ಕಲಾ ಪರ್ಯಾಯವಾಚಕಾಃ[3] ।
[4]ಏತಾನಿ ದಶ ನಾಮಾನಿ
ಕಲಾಸ್ವೇವ ಪ್ರಯುಂಜತೇ[5] ॥ ॥ ೨೦ ॥

ಕಾಲಭೇದಸ್ತ್ವಯಂ ಪ್ರೋಕ್ತಃ[6]
ವಿಕಲಾಭೇದಕಂ[7] ಶೃಣು ।
ಕಕಾರಾದಿಕ್ಷಕಾರಾನ್ತಾಃ[8]
ವರ್ಣಾಶ್ಚ ವಿಕಲಾಃ ಸ್ಮೃತಾಃ[9] ॥ ॥ ೨೧ ॥

—ಪ್ರಾಣ, ಆತ್ಮಾ ನಾ—ಪುರುಷ ಮತ್ತು ದೇಹೀ ಎಂಬ ಶಬ್ದಗಳು ಕಲಾ ಶಬ್ದದ ಪರ್ಯಾಯಗಳು. ಈ ಹತ್ತು ನಾಮಗಳನ್ನು ಕಲೆಗಳಿಗೆ ಪ್ರಯೋಗಿಸುತ್ತಾರೆ. ॥ ೨೦ ॥

ಕಲಾಭೇದವನ್ನು ಹೇಳಿದ್ದಾಯಿತು. ಇನ್ನು ವಿಕಲಾಭೇದವನ್ನು ಕೇಳು. ಕಕಾರ ಮೊದಲ್ಗೊಂಡು ಕ್ಷಕಾರದವರೆಗಿನ ವರ್ಣಗಳು ವಿಕಲಗಳು. ॥ ೨೧ ॥

---

1 ಮಂತ್ರಾಃ—ಕ.
2 ಪ್ರಾಣಾ ಆತ್ಮಾ ಚ ದೇಹೀ ಚ—ಗ, ಚ.
ಪ್ರಾಣಾತ್ಮನಾ ಚ ದೇಹೀ ಚ—ಕ, ಘ, ಥ, ಟ, ಭ.
ಪ್ರಾಣಾತ್ಮನೌ ಚ ದೇಹೀ ಚ—ಖ, ಝ.
ಪ್ರಾಣಶ್ಚಾತ್ಮಾ ಚ ದೇಹೀ ಚ—ಧ.
ಪ್ರಾಣಾತ್ಮನಶ್ಚ ದೇಹೀ ಚ—ಫ.
3 ವಾಚಕಃ—ಡ, ಪ.
4 ಈ ಅರ್ಧಪದ್ಯ—ಕ, ಛ, ಝ, ಟ, ಠ, ಡ, ಢ, ತ, ಥ, ಧ, ಫ. ಪುಸ್ತಕಗಳಲ್ಲಿಲ್ಲ.
5 ಕಲಾನಾಮೇವ ಯುಜ್ಯತೇ—ಖ, ಗ, ಚ, ಜ.
6 ಭೇದಮಿದಂ— ಪ್ರೋಕ್ತಂ—ಕ, ಖ, ಗ, ಘ, ಛ, ಜ, ಝ, ಟ, ಠ, ಡ, ಢ. ತ, ಥ, ದ.
7 ಭೇದಮುಥ—ಡ, ಬ.
8 ಕ್ಷಕಾರಾನ್ತಂ—ಡ. ಥ, ಧ, ಪ, ಫ.
9 ವಿಕಲಾನಿ ತತಃ—ಫ.

[1]ಕಕಾರಾದೀತಿ ಪಂಚಾರ್ಣಂ
ಅಕಾರಾತ್ತು ಸಮುದ್ಭವಮ್[2] |
ಚಕಾರಾದೀತಿ ಪಞ್ಚಾರ್ಣಂ
ಇಕಾರಾತ್ತು ಸಮುದ್ಭವಮ್[3] || || ೨೨ ||

[4]ಟಕಾರಾದೀತಿ ಪಞ್ಚಾರ್ಣಂ
ಋಕಾರಾತ್ತು ಸಮುದ್ಭವಮ್ |
ತಕಾರಾದೀತಿ ಪಞ್ಚಾರ್ಣಂ
ಇಕಾರಾತ್ತು ಸಮುದ್ಭವಮ್ || || ೨೩ ||

[5]ಪಕಾರಾದೀತಿ ಪಂಚಾರ್ಣಂ
ಉಕಾರಾತ್ತು ಸಮುದ್ಭವಮ್[6] |

ಕಕಾರದಿಂದ ಮೊದಲಾಗುವ ಐದು ವರ್ಣಗಳು ಅಕಾರದಿಂದ ಹುಟ್ಟುತ್ತವೆ. ಚಕಾರದಿಂದ ಮೊದಲಾಗುವ ಐದು ವರ್ಣಗಳು ಇಕಾರದಿಂದ ಹುಟ್ಟುತ್ತವೆ. || ೨೨ ||

ಟಕಾರ ಮೊದಲಾದ ಐದು ವರ್ಣಗಳು ಋಕಾರದಿಂದ ಹುಟ್ಟುತ್ತವೆ. ತಕಾರ ಮೊದಲಾದ ಐದು ವರ್ಣಗಳು ಇಕಾರದಿಂದ ಹುಟ್ಟುತ್ತವೆ. || ೨೩ ||

---

1 ಈ ಅರ್ಧಪದ್ಯ—ಕ, ಘ, ಛ, ಟ, ಠ, ಭ. ಪುಸ್ತಕಗಳಲ್ಲಿಲ್ಲ.

2 ಕಕಾರಾದೀನಿ ವರ್ಣಾನಿ ಅಕಾರೇ ತು ಸಮುದ್ಭವಾಃ—ಜ.
ಕಕಾರಾದೀನಿ ವರ್ಣಾನಿ ಇ(ಅ)ಕಾರೇ ತು ಸಮುದ್ಭವಾಃ—ಗ, ಚ.
ಕಕಾರಾದೀನಿ ಪಂಚಾರ್ಣಾಃ ಇಕಾರೇ ತು ಸಮುದ್ಭವಾಃ—ಝ.
ಕಕಾರಾದೀತಿ ಪಂಚಾರ್ಣಂ ಅಕಾರೇ ತು ಸಮುದ್ಭವಂ—ಡ, ಪ.

3 ಚಕಾರಾದೀತಿ ಪಂಚಾರ್ಣಾ ಉಕಾರೇ ತು ಸಮುದ್ಭವಾಃ—ಗ, ಚ, ಝ, ತ, ಥ, ದ, ಢ
ಚಕಾರಾದೀತಿ ಪಂಚಾರ್ಣಂ ಉಕಾರೇ ತು ಸಮುದ್ಭವಂ—ಡ, ಪ.

4 ಗ್ರಂಥಗಳಲ್ಲೆಲ್ಲೂ ದೊರೆಯದ ಈ ಪದ್ಯವನ್ನು ಸಂದರ್ಭದ ಮತ್ತು ಕ್ರಮದ ಔಚಿತ್ಯದಿಂದ ಸಂಯೋಜಿಸಲಾಗಿದೆ.

5 ಈ ಅರ್ಧಪದ್ಯ—ಕ, ಖ, ಘ, ಛ, ಜ, ಟ, ಠ, ಡ, ಢ, ಪ, ಫ, ಬ, ಭ. ಪುಸ್ತಕಗಳಲ್ಲಿಲ್ಲ.

6 ಪಕಾರಾದೀನಿ ಪಂಚಾರ್ಣಾ ಏಕಾರೇ ತು ಸಮುದ್ಭವಾಃ—ಗ, ಚ, ಝ, ಢ, ತ, ಥ, ದ.
ಪಕಾರಾದೀತಿ ಪಂಚಾರ್ಣಮೇಕಾರೇ ತು ಸಮುದ್ಭವಂ—ಡ, ಪ.

[1]ಓಕಾರಾತ್ತು ಸಮುದ್ಭೂತಾ
ಯಕಾರಾದಿ ದಶ ಸ್ಮೃತಾಃ[2] ॥ ॥ ೨೪ ॥

[3]ಕಕಾರಾಚ್ಚ [4]ಸಮುದ್ಭೂತಾಃ
ಯಕಾರಾದಿ ದಶಾ[ರ್ಣಕಾಃ]ಕ್ಷರಾಃ ।
ಏತೇ ವೈ ವಿಕಲಾಃ ಪ್ರೋಕ್ತಾಃ
ತೇ ಪಞ್ಚತ್ರಿಂಶದ[ರ್ಣಕಾಃ]ಕ್ಷರಾಃ[5] ॥ ॥ ೨೫ ॥

ದೇಹೋಪಾಧಿಶರೀರಾಣಿ[6]
ಕ್ಷೇತ್ರಾಧಾರೌ[7] ತನುಸ್ತಥಾ ।
ವ್ಯಂಜನಂ ವಿಕಲಾ ಶಕ್ತಿಃ
ಬಿನ್ದುಪರ್ಯಾಯವಾಚಕಾಃ[8] ॥ ॥ ೨೬ ॥

ಪಕಾರ ಮೊದಲಾದ ಐದು ವರ್ಣಗಳು ಉಕಾರದಿಂದ ಹುಟ್ಟುತ್ತವೆ. ಯಕಾರ ಮೊದಲಾದ ಹತ್ತು ವರ್ಣಗಳು ಓಕಾರದಿಂದ ಹುಟ್ಟುತ್ತವೆ. ॥ ೨೪ ॥

ಯಕಾರ ಮೊದಲಾದ ಹತ್ತು ವರ್ಣಗಳು ಕಕಾರದಿಂದಲೂ ಹುಟ್ಟುತ್ತವೆ. ಈ ಮೂವತ್ತೈದು ವರ್ಣಗಳು ವಿಕಲಗಳು. ॥ ೨೫ ॥

ದೇಹ, ಉಪಾಧಿ, ಶರೀರ, ಕ್ಷೇತ್ರ, ಆಧಾರ, ತನು, ವ್ಯಂಜನ, ವಿಕಲಾ, ಹಾಗೂ ಶಕ್ತಿಶಬ್ದಗಳು ಬಿಂದುವಿನ ಪರ್ಯಾಯಶಬ್ದಗಳು. ॥ ೨೬ ॥

---

1 ಈ ಅರ್ಧಪದ್ಯ—ಕ, ಘ, ಛ, ಟ, ಠ, ಭ. ಪುಸ್ತಕಗಳಲ್ಲಿಲ್ಲ.
2 ಓಂಕಾರೇ ತು ಸಮುದ್ಭೂತಾ ಷದಕಾರಾದೀನಿ ಪಂಚಮಂ—ಡ, ಪ, ಫ.
3 ಈ ಪದ್ಯ—ಕ, ಖ, ಘ, ಛ, ಜ, ಟ, ಠ, ಡ, ಢ, ಪ, ಫ, ಬ, ಭ. ಪುಸ್ತಕಗಳಲ್ಲಿಲ್ಲ.
4 ಕಕಾರೇ ಚ—ಕ, ಖ, ಗ, ಚ.
ತಕಾರೇ ಚ—ಝ.
5 ಕಕಾರಾದಿ ಕ್ಷಕಾರಾನ್ತಂ ಪಂಚತ್ರಿಂಶಾಕ್ಷರಾಃ ಸ್ಮೃತಾಃ—ಡ, ಪ.
6 ಶರೀರಂ ಚ—ಖ, ಗ, ಚ.
7 ಕ್ಷೇತ್ರಾಧಾರಃ—ಗ, ಚ. ಕ್ಷೇತ್ರಾಧಾರೇ—ಖ, ಝ.
ಕ್ಷೇತ್ರಾಧಾರಂ—ಕ.
8 ವಾಚಕಃ—ಘ, ಠ, ಢ, ಫ.

ಕಲಾನಾಂ ವಿಕಲಾನಾಂ ತು[1]
ರೂಪತ್ರಯಮಿಹೋಚ್ಯತೇ[2] ।
ಶಿವಾಗ್ನಿಭೂತರುದ್ರಾಶ್ಚ
ತ್ರಯೋದಶತಿಥಿಸ್ತಥಾ ॥ ॥ ೨೭ ॥

ಏತೇ ವೈ ಸ್ವರವರ್ಣಾಶ್ಚ[3]
ಪುಲ್ಲಿಂಗಾಶ್ಚೇತಿ ಕೀರ್ತಿತಾಃ ।
ಪಕ್ಷೋ ವೇದೋ ರಸೋ ಭಾನುಃ
ಮನುಶ್ಚೈವಾಧಿಕಾರಕಮ್[4] ॥ ॥ ೨೮ ॥

ಏತಾನಿ ಷಟ್ ಚ ಬೀಜಾನಿ[5]
ಸ್ತ್ರೀಲಿಂಗಾನೀತಿ[6] ಕೀರ್ತಿತಮ್[7] ।

ವರ್ಣಭೇದವನ್ನು ನಿರೂಪಿಸುವ ಸಂದರ್ಭದಲ್ಲಿ ಕಲೆಗಳಿಗೂ ವಿಕಲೆಗಳಿಗೂ ಮೂರು ರೂಪಗಳನ್ನು ಹೇಳಲಾಗುತ್ತದೆ. (ಶಿವ=) ಮೊದಲನೆಯ, (ಅಗ್ನಿ=) ಮೂರನೆಯ, (ಭೂತ=) ಐದನೆಯ (ರುದ್ರ=) ಹನ್ನೊಂದನೆಯ, ಹದಿಮೂರನೆಯ ಹಾಗೂ (ತಿಥಿ=) ಹದಿನೈದನೆಯ— ॥ ೨೭ ॥

—ಅಂದರೆ ಅ, ಇ, ಉ, ಏ, ಓ, ಅಂ ಎಂಬ ಆರು ಸ್ವರಾಕ್ಷರಗಳು ಪುಲ್ಲಿಂಗಗಳು. ಸ್ವರಗಳಲ್ಲಿ (ಪಕ್ಷ=) ಎರಡನೆಯ, (ವೇದ=) ನಾಲ್ಕನೆಯ, (ರಸ=) ಆರನೆಯ, (ಭಾನು=) ಹನ್ನೆರಡನೆಯ, (ಮನು=) ಹದಿನಾಲ್ಕನೆಯ ಮತ್ತು (ಅಧಿಕಾರಕ=) ಹದಿನಾರನೆಯ— ॥ ೨೮ ॥

—ಅಂದರೆ ಆ, ಈ, ಊ, ಐ, ಔ, ಅಃ ಎಂಬ ಈ ಆರು ಅಕ್ಷರಗಳು ಸ್ತ್ರೀ

---

1 ಚ—ಝ.
2 ತ್ರೀಣಿ ರೂಪಾಣಿ ವಕ್ಷ್ಯತೇ—ಖ, ಗ, ಚ, ಝ,
ತ್ರಯೋ ಭೇದಾಶ್ಚ ವಕ್ಷ್ಯತೇ—ಡ, ಪ.
3 ಸ್ವರವರ್ಣಾನಿ—ಕ, ಗ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ.
4 ವಾದಿ ಷೋಡಶ—ಪ.
ವಾನುಷೋಡಶ—ಡ.
5 ಏತೇ ವೈ ಷಟ್ ಚ ನಾಮಾನಿ—ಗ, ಪ.
6 ಗಾಶ್ಚೇತಿ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ.
7 ಕೀರ್ತಿತಾಃ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಫ.

ಋ ೠ ಌ ೡ ಚ ಚತ್ವಾರಃ
ನಪುಂಸಕಾಃ[1] ಇತಿ ಸ್ಮೃತಾಃ[2] ॥ ॥ ೨೯ ॥

ಕಕಾರಶ್ಚ ಗಕಾರಶ್ಚ
ಚಕಾರಶ್ಚ ಜಕಾರಕಃ ।
ಟಕಾರಶ್ಚ ಡಕಾರಶ್ಚ
ತಕಾರಶ್ಚ ದಕಾರಕಃ[3] ॥ ॥ ೩೦ ॥

ಪಕಾರಶ್ಚ ಬಕಾರಶ್ಚ
ಷಕಾರಶ್ಚ[4] ಕ್ಷಕಾರಕಃ[5] ।
ಏತೇ ದ್ವಾದಶವರ್ಣಾಶ್ಚ[6]
ಪುಲ್ಲಿಂಗಾಶ್ಚೇತಿ ಕೀರ್ತಿತಾಃ[7] ॥ ॥ ೩೧ ॥

ಲಿಂಗಗಳು. ಋ, ೠ, ಌ, ೡ, ಎಂಬ ಈ ನಾಲ್ಕು ಅಕ್ಷರಗಳು ನಪುಂಸಕಲಿಂಗಗಳು. ॥ ೨೯ ॥

ಕಕಾರ, ಗಕಾರ, ಚಕಾರ, ಜ,ಕಾರ, ಟಕಾರ, ಡಕಾರ ॥ ೩೦ ॥

ತಕಾರ, ದಕಾರ, ಪಕಾರ, ಬಕಾರ, ಷಕಾರ ಮತ್ತು ಕ್ಷಕಾರ ಈ ಹನ್ನೆರಡು ಅಕ್ಷರಗಳು ಪುಲ್ಲಿಂಗಗಳು. ॥ ೩೧ ॥

---

1 ನಪುಂಸಕಂ—ಕ, ಡ, ಥ, ಪ.

2 ಸ್ಮೃತಂ—ಧ, ಫ.
ಸ್ಮೃತಃ—ಘ, ಝ.

3 ಕಕಾರಂ ಚ ಗಕಾರಂ ಚ
ಚಕಾರಂ ಚ ಜಕಾರಕಮ್ ।
ಟಕಾರಂ ಚ ಡಕಾರಂ ಚ
ತಕಾರಂ ಚ ದಕಾರಕಮ್—
ಕ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಬ, ಭ.

4 ಪಕಾರಂ ಚ ಬಕಾರಂ ಚ
ಷಕಾರಂ ಚ—ಕ, ಗ, ಘ, ಚ, ಛ, ಟ, ಠ, ಡ, ಢ, ತ, ಥ, ದ, ಪ, ಬ, ಭ.

5 ಹಕಾರಕಃ—ಖ, ಝ.
ಕ್ಷಕಾರಕಂ—ಗ, ಘ, ಚ, ಛ, ಜ, ಟ, ಠ, ಡ, ತ, ಥ, ದ, ಪ, ಭ.

6 ವರ್ಣಾನಿ—ಕ, ಘ, ಛ, ಟ, ಠ, ಢ, ತ, ಥ, ದ, ಫ, ಭ.
ಬೀಜಾನಿ—ಡ, ಪ.

7 ಗಾನಿ ವಿನಿರ್ದಿಶೇತ್—ಫ.

ಖಕಾರಶ್ಚ ಘಕಾರಶ್ಚ
ಛಕಾರಶ್ಚ ಝಕಾರಕಃ |
ಠಕಾರಶ್ಚ ಢಕಾರಶ್ಚ
ಥಕಾರಶ್ಚ ಧಕಾರಕಃ[1] || ||೩೨||

ಫಕಾರಶ್ಚ ಭಕಾರಶ್ಚ
ಶಕಾರಶ್ಚ ಸಕಾರಕಃ[2] |
ಏತಾನಿ[3] ಭಾನುಬೀಜಾನಿ
ಸ್ತ್ರೀಲಿಂಗಾನೀತಿ ಕೀರ್ತಿತಮ್[4] || ||೩೩||

ಶೇಷಂ[5] ನಪುಂಸಕಂ[6] ವಿದ್ಯಾತ್[7]
ತ್ರಯೋ ಭೇದಾಃ[8] ಇತಿ ಸ್ಮೃತಾಃ[9] |

ಖಕಾರ, ಘಕಾರ, ಛಕಾರ, ಝಕಾರ, ಠಕಾರ ||೩೨||

ಢಕಾರ, ಥಕಾರ, ಧಕಾರ, ಫಕಾರ, ಭಕಾರ, ಶಕಾರ, ಸಕಾರ ಈ ಹನ್ನೆರಡು ಅಕ್ಷರಗಳು ಸ್ತ್ರೀಲಿಂಗಗಳು. ||೩೩||

ಉಳಿದ ಜ ಞ ಣ ನ ಮ ಯ ರ ಲ ವ ಹ ಳ ವರ್ಣಗಳನ್ನು ನಪುಂಸಕಗಳೆಂದು

1-2 ಖಕಾರಂ ಚ ಘಕಾರಂ ಚ
ಛಕಾರಂ ಚ ಝಕಾರಕಮ್ |
ಠಕಾರಂ ಚ ಢಕಾರಂ ಚ
ಥಕಾರಂ ಧಕಾಕರಂ ||
ಫಕಾರಂ ಚ ಭಕಾರಂ ಚ
ಶಕಾರಂ ಚ ಸಕಾರಕಮ್ |—
ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಭ.

3 ಏತೇ ವೈ --ಕ, ಗ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಪ, ಫ, ಭ.

4 ಜ್ಞಾಯಾತ್ಸ್ತ್ರೀತಿ ಪ್ರಕೀರ್ತಿತಾಃ—ಕ, ಖ, ಘ, ಚ, ಛ, ಝ, ಟ, ಠ, ಢ, ತ, ಥ, ದ, ಭ.
ಜಾಯಾಸ್ತ್ರೀತಿ ಪ್ರಕೀರ್ತಿತಂ—ಫ.

5 ಶೇಷಾಃ—ಖ, ಝ.
ಶೇಷಾಃ—ಟ, ಢ, ಧ, ಫ,

6 ನಪುಂಸಕಾಃ—ಖ, ಝ.
ನಪುಂಸಕಾಃ—ಧ.

7 ವಿಂದ್ಯಾತ್—ಟ, ಢ, ತ, ದ, ಧ.
ಜ್ಞೇಯಾಃ—ಪ, ಫ.

8 ರೂಪಾಃ—ಡ, ಪ.

9 ಸ್ಮೃತಮ್—ಫ.

ಅಕಾರಾದಿ ತ್ರಯೋ ವ್ಯೋಮ
[1]ತ್ರೀಕಾರಾದಿತ್ರಯೋಽನಿಲಃ ॥ ॥ ೩೪ ॥

ಋಕಾರಾದಿ ತ್ರಯೋ ವರ್ಣಾಃ[2]
ವೈಶ್ವಾನರ[3] ಇತಿ ಸ್ಮೃತಾಃ
ಌಕಾರಾದಿ[4]ತ್ರಯೋ ಹ್ಯಾಪಃ
ಓಕಾರಾದಿ[5]ತ್ರಯೋ ಮಹೀ ॥ ॥ ೩೫ ॥

[6]ಕಕಾರಾದಿಙಕಾರಾನ್ತಾಃ
ಲಕಾರಶ್ಚ ಳಕಾರಕಃ ।

ತಿಳಿಯಬೇಕು. ಹೀಗೆ ವರ್ಣಗಳಲ್ಲಿ ಲಿಂಗನಿಮಿತ್ತವಾಗಿ ಮೂರು ಭೇದಗಳಿವೆ. ಅಕಾರಾದಿ ಮೂರು ಅಕ್ಷರಗಳು (ಅ, ಆ, ಇ) ಆಕಾಶತತ್ತ್ವಬೀಜಗಳು. ಈಕಾರಾದಿ ಮೂರು ಅಕ್ಷರಗಳು (ಈ, ಉ, ಊ) ವಾಯುತತ್ತ್ವಬೀಜಗಳು. ॥ ೩೪ ॥

ಋಕಾರಾದಿ ಮೂರು ಅಕ್ಷರಗಳು (ಋ, ೠ, ಌ) ಅಗ್ನಿತತ್ತ್ವಬೀಜಗಳು. ಌಕಾರಾದಿ ಮೂರು ಅಕ್ಷರಗಳು (ಌ, ಏ, ಐ,) ಅಪ್ತತ್ತ್ವ ಬೀಜಗಳು ಓಕಾರಾದಿ ಮೂರು ಅಕ್ಷರಗಳು (ಓ, ಔ, ಅಂ) ಭೂಮಿತತ್ತ್ವಬೀಜಗಳು. ॥ ೩೫ ॥

ಕಕಾರಾದಿ ಙಕಾರದವರೆಗಿನ ಐದು ವರ್ಣಗಳು (ಕ, ಖ, ಗ, ಘ, ಙ) ಲಕಾರ

---

[1] 'ತ್ರೀಕಾರಾದಿ' ಇಲ್ಲಿಂದ 'ಹ್ಯಾಪಃ' ವರೆಗಿನ ಭಾಗ ಘ. ಪುಸ್ತಕದಲ್ಲಿಲ್ಲ.
[2] ಋಕಾರಾದೀನಿ ವರ್ಣಾನಿ—ಕ, ಗ, ಘ, ಛ, ಜ, ಟ, ಠ, ಢ, ತ, ಥ, ದ, ಫ, ಭ.
ಋಕಾರಾದಿ ತ್ರಿವರ್ಣಾಶ್ಚ—ಖ, ಝ.
ಉಕಾರಾದಿ ತ್ರಿವರ್ಣಾಶ್ಚ—ಧ.
ಋಕಾರಾದಿ ಚತುರ್ಣಾಂ ತು—ಡ, ಪ.
[3] ತೇಷಾಮಗ್ನಿ—ಕ, ಗ, ಘ, ಛ, ಜ, ಟ, ಠ. ಡ, ಢ, ತ, ಥ, ದ, ಫ, ಭ.
ಅಗ್ನಿರಿತ್ಯುಚ್ಯತೇ ತಥಾ— ಧ.
ತೇಜೋಮುಕ್ತಿರಿತಿ ಸ್ಮೃತಂ—ಪ.
[4] ಏಕಾರಾದಿ—ಖ, ಗ, ಚ, ಜ, ಝ, ತ, ಥ.
ಓಕಾರಾದಿ—ಕ, ಧ.
ಲೃಕಾರಾದಿ—ಢ.
[5] ಓಕಾರಾದಿ—ಗ, ಚ, ಟ, ಧ, ಫ, ಭ.
[6] ಇಲ್ಲಿಂದ ''ಳಕಾರಶ್ಚ ಕ್ಷಕಾರಕಃ'' ವರೆಗಿನ ಭಾಗ—ಘ. ಪುಸ್ತಕದಲ್ಲಿದೆ.

ಪೃಥಿವ್ಯಂಶಾಃ ಇತಿ ಜ್ಞೇಯಂ
ಚಕಾರಾದೀತಿ ಪಞ್ಚಕಮ್[1] || || ೩೬ ||

ವಕಾರಶ್ಚ ಶಕಾರಶ್ಚ
ಜಲಾಂಶಕಾಃ ಇತಿ ಸ್ಮೃತಾಃ |
ಟಕಾರಾದಿ ಣಕಾರಾನ್ತಾಃ
ರಕಾರಶ್ಚ ಸಕಾರಕಃ[2] || || ೩೭ ||

ತೇಜೋಽಂಶಕಾಃ ಇತಿ ಜ್ಞೇಯಂ
ತಕಾರಾದೀತಿ ಪಞ್ಚಕಮ್ |
ಯಕಾರಶ್ಚ ಷಕಾರಶ್ಚ
ಹ್ಯನಿಲಾಂಶಾಃ ಇತಿ ಸ್ಮೃತಮ್[3] || || ೩೮ ||

ಮತ್ತು ಳಕಾರಗಳನ್ನು ಭೂಮಿತತ್ತ್ವಬೀಜಗಳೆಂದು ತಿಳಿಯಬೇಕು. ಚಕಾರಾದಿ ಐದು ವರ್ಣಗಳು ಚ, ಛ, ಜ, ಝ, ಞ)— || ೩೬ ||

ವಕಾರ ಮತ್ತು ಶಕಾರಗಳು ಅಪ್ತತ್ತ್ವಬೀಜಗಳೆಂದು ತಿಳಿಯಬೇಕು. ಟಕಾರದಿಂದ ಣಕಾರದವರೆಗಿನ ಐದು ವರ್ಣಗಳು (ಟ, ಠ, ಡ, ಢ, ಣ) ರಕಾರ ಮತ್ತು ಸಕಾರಗಳು— || ೩೭ ||

—ಅಗ್ನಿತತ್ತ್ವಬೀಜಗಳು ತಕಾರಾದಿಯಾದ ಐದು ವರ್ಣಗಳು (ತ, ಥ, ದ, ಧ, ನ) ಯಕಾರ ಮತ್ತು ಷಕಾರಗಳು ವಾಯುತತ್ತ್ವಬೀಜಗಳು || ೩೮ ||

---

[1] ಕಕಾರಾದಿ ತಕಾರಾನ್ತಂ
ಲಕಾರಂ ಚ ಳಕಾರಕಮ್ ।
ಪೃಥಿವ್ಯಂಶಮಿತಿ ಜ್ಞೇಯಂ
ಚಕಾರಾದೀನಿ ಪಂಚಕಮ್ ॥—ಫ.

[2] ವಕಾರಂ ಚ ಶಕಾರಂ ಚ
ಜಲಾಂಶಕಮಿತಿ ಸ್ಮೃತಮ್ ।
ಗಕಾರಾದಿ ಣಕಾರಾನ್ತಂ
ರಕಾರಂ ಚ ಸಕಾರಕಮ್—ಫ.

[3] ತೇಜೋಽಂಶಕಮಿತಿ ಜ್ಞೇಯಂ
ತಕಾರಾದೀನಿ ಪಂಚಕಮ್ ।
ಯಕಾರಂ ಚ ಷಕಾರಂ ಚ
ಹ್ಯನಿಲಾಂಶಮಿತಿ ಸ್ಮೃತಮ್ ॥—ಫ.

ಪಕಾರಾದಿ ಮಕಾರಾನ್ತಾಃ
ಹಕಾರಶ್ಚ ಕ್ಷಕಾರಕಃ ।
ವ್ಯೋಮಾಂಶಕಾಃ ಇತಿ ಜ್ಞೇಯಂ
ಹ್ಯೇಷಾ ವೈ ತ್ವಂಶಕಸ್ಮೃತಿಃ[1] ॥ ॥ ೬೯ ॥

ಪ್ರಕೃತಿಃ ತತ್ತ್ವಬೀಜಂ[2] ಸ್ಯಾತ್
ವಿಕೃತಿಃ ಮೂರ್ತಿರುಚ್ಯತೇ[3] ।
ಪ್ರಭಾವೋ[4] ವಿಕಲಾಃ ಪ್ರೋಕ್ತಾಃ[5]
ಇತ್ಯೇತೇ[6] ತ್ರಿವಿಧಾಃ[7] ಸ್ಮೃತಾಃ[8] ॥ ॥ ೭೦ ॥

ಪ್ರಕೃತಿಃ ಹ್ರಸ್ವ[9] ಇತ್ಯುಕ್ತಾ[10]
ವಿಕೃತಿಃ ದೀರ್ಘ[11] ಉಚ್ಯತೇ[12] ।

ಪಕಾರದಿಂದ ಮಕಾರದವರೆಗಿನ ಐದು ವರ್ಣಗಳು (ಪ, ಫ, ಬ, ಭ, ಮ) ಹಕಾರ ಮತ್ತು ಕ್ಷಕಾರಗಳು ಆಕಾಶತತ್ತ್ವಬೀಜಗಳು. ಇದೇ ವರ್ಣಗಳ ಪಂಚ ತತ್ತ್ವಾಂಶಕಜ್ಞಾನ. ॥ ೬೯ ॥

ಪ್ರಕೃತಿಯೆಂದು ಕರೆಯುವ ಏಳು ಹ್ರಸ್ವಸ್ವರಗಳು ತತ್ತ್ವಬೀಜಗಳಾಗುತ್ತವೆ. ವಿಕೃತಿಯೆಂದು ಕರೆಯುವ ಒಂಭತ್ತು ದೀರ್ಘಸ್ವರಗಳು ಮೂರ್ತಿಬೀಜಗಳಾಗುತ್ತವೆ. ವಿಕಲಗಳೆಂದು ಕರೆಯುವ ವ್ಯಂಜನಗಳು ಪ್ರಭಾವಬೀಜಗಳು. ಹೀಗೆ ಅಕಾರಾದಿ ವರ್ಣಗಳು ತತ್ತ್ವಾದಿನಿಮಿತ್ತವಾಗಿ ಮೂರು ವಿಧವಾಗಿವೆ. ॥ ೭೦ ॥

ಪ್ರಕೃತಿಯನ್ನು ಹ್ರಸ್ವವೆಂದೂ, ವಿಕೃತಿಯನ್ನು ದೀರ್ಘವೆಂದೂ, ಒಂದು

---

1 ಪಕಾರಾದಿ ಮಕಾರಾನ್ತಂ
ಹಕಾರಂ ಚ ಕ್ಷಕಾರಕಂ ।
ವ್ಯೋಮಾಂಶಕಮಿತಿ ಜ್ಞೇಯಂ
ಏತೇ ವಾ ತ್ವಂಶಕಸ್ಮೃತಿಃ—ಘ.

2 ಸಪ್ತಬೀಜಾ—ಪ. ತತ್ತ್ವಭೇದಃ—ಝ, ಧ.

3 ಮೂರ್ತಿರೀರಿತಾ—ಝ.

4 ವಿಭಾವೋ—ಝ. ಪ್ರಭಾವಂ—ಛ, ಡ, ಘ.

5 ಪ್ರೋಕ್ತಂ—ಪ. ಪ್ರೋಕ್ತಾಃ—ಚ.

6 ಇತ್ಯೇವಂ—ಟ, ಠ, ಧ. ಇತ್ಯೇತತ್—ಥ.

7 ತ್ರಿವಿಧಂ—ಖ, ಚ, ಝ, ಧ. ತ್ರಿವಿಧಃ—ಘ.

8 ಸ್ಮೃತಂ—ಜ, ಧ. ಭವೇತ್—ಖ, ಗ, ಝ.

9 ಹ್ರಸ್ವಂ—ಕ, ಖ, ಗ, ಝ, ಘ.

10 ತ್ಯುಕ್ತಾಃ—ಚ. ತ್ಯುಕ್ತಂ—ಘ.

11 ದೀರ್ಘಂ—ಖ, ಝ.

12 ಈರಿತಾ—ಖ, ಝ.

ಏಕಮಾತ್ರೋ[1] ಭವೇತ್ ಹ್ರಸ್ವಃ[2]
ದ್ವಿಮಾತ್ರೋ ದೀರ್ಘ ಉಚ್ಯತೇ[3] ॥ ॥ ೪೧ ॥

[4]ತ್ರಿಮಾತ್ರಸ್ತು ಪ್ಲುತೋ ಜ್ಞೇಯಃ
ವ್ಯಂಜನಂ ತ್ವರ್ಧಮಾತ್ರಕಮ್[5] ।
ಮಾತ್ರಾಸಂಖ್ಯಾ ತ್ವಿತಿ ಪ್ರೋಕ್ತಾ
ತಾಸಾಂ ಲಕ್ಷಣಮುಚ್ಯತೇ ॥ ॥ ೪೨ ॥

ಅಕಾರಃ[6] ಸರ್ವದೈವತ್ಯಃ[7]
ರಕ್ತಃ[8] ಸರ್ವವಶೀಕರಃ[9] ।

ಮಾತ್ರೆಯುಳ್ಳದ್ದನ್ನು ಹ್ರಸ್ವವೆಂದೂ, ಎರಡು ಮಾತ್ರೆಯುಳ್ಳದ್ದನ್ನು ದೀರ್ಘವೆಂದೂ ಹೇಳುತ್ತಾರೆ. ॥ ೪೧ ॥

ಪ್ಲುತವನ್ನು ಮೂರು ಮಾತ್ರೆಗಳನ್ನುಳ್ಳದ್ದೆಂದು ತಿಳಿಯಬೇಕು. ವ್ಯಂಜನವು ಅರ್ಧಮಾತ್ರೆಯನ್ನುಳ್ಳದ್ದು. ಹೀಗೆ ಮಾತ್ರೆಗಳ ಗಣನೆಯನ್ನು ಹೇಳಿದ್ದಾಯಿತು. ಈಗ ಕಲಾ ಮತ್ತು ವಿಕಲಾಕ್ಷರಗಳ ಸ್ವರೂಪವನ್ನು ನಿರೂಪಿಸುವೆನು. ॥ ೪೨ ॥

ಅಕಾರವು ಸರ್ವದೇವತಾಮಯವೂ ಕೆಂಪುಬಣ್ಣವುಳ್ಳದ್ದೂ ಸಕಲಕಾರ್ಯ

---

[1] ಏಕಮಾತ್ರಂ—ಕ, ಘ, ಟ, ಠ, ಡ, ಢ, ತ, ಥ, ದ, ಧ, ಪ.
[2] ಹ್ರಸ್ವಂ—ಟ, ಡ.
[3] ದ್ವಿಮಾತ್ರಂ ದೀರ್ಘಮಿಷ್ಯತೇ—ಕ. ಘ, ಛ, ಟ, ಡ, ಢ, ತ, ಥ, ದ, ಧ, ಫ.
'ಏಕಮಾತ್ರ' ಇತ್ಯಾದಿ ಅರ್ಧಪದ್ಯ ಫ. ಪುಸ್ತಕದಲ್ಲಿಲ್ಲ.
[4] ಈ ಅರ್ಧಪದ್ಯ—ಗ, ಚ, ಝ. ಪುಸ್ತಕಗಳಲ್ಲಿದೆ.
[5] ವಿಕಲಾ ತ್ವರ್ಧಮಾತ್ರಂ ಸ್ಯಾದಿತ್ಯೇತಲ್ಲಕ್ಷಣಂ ಭವೇತ್—ಗ, ಚ, ಝ.
ವ್ಯಂಜಕಂ ತ್ವರ್ಧಮಾತ್ರಂ ಸ್ಯಾದಿತ್ಯೇವಂ ಲಕ್ಷಣಂ ಭವೇತ್—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ, ಭ.
[6] ಅಕಾರಂ—ಕ, ಘ, ಠ, ಡ, ಢ, ತ, ಥ, ದ, ಧ, ಫ.
[7] ದೈವತ್ಯಂ—ಠ. ಢ, ತ, ಥ, ದ, ಧ, ಫ.
ದೇವತ್ವಂ—ಕ, ಘ, ಡ.
[8] ರಕ್ತಂ—ಕ, ಖ, ಗ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.
[9] ವಶೀಕರಂ—ಕ, ಖ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.
ಶರೀರಕಂ—ಗ.

ಆಕಾರಃ[1] ಸ್ಯಾತ್ ಪರಾಶಕ್ತಿಃ
ಶ್ವೇತಶ್ಚಾಕರ್ಷಣೋ[2] ಭವೇತ್ ॥ ॥ ೪೩ ॥

ಇಕಾರೋ[3] ವಿಷ್ಣುದೈವತ್ಯಃ
ಶ್ಯಾಮೋ[4] ರಕ್ಷಾಕರೋ ಭವೇತ್[5] ।
ಮಾಯಾಶಕ್ತಿರಿತೀಕಾರಃ[6]
ಪೀತಃ ಸ್ತ್ರೀಣಾಂ ವಶೀಕರಃ[7] ॥ ॥ ೪೪ ॥

ಉಕಾರೋ[8] ವಾಸ್ತುದೈವತ್ಯಃ[9]
ಕೃಷ್ಣೋ ರಾಜವಶೀಕರಃ ।

ವಶೀಕರಣವೂ ಆಗಿರುತ್ತದೆ. ಆಕಾರಕ್ಕೆ ಪರಾಶಕ್ತಿಯು ಅಧಿದೇವತೆ. ಇದು ಬಿಳೀ ಬಣ್ಣವನ್ನುಳ್ಳದ್ದೂ ಆಕರ್ಷಿಸುವ ಪ್ರಯೋಜನವುಳ್ಳದ್ದೂ ಆಗಿದೆ. ॥ ೪೩ ॥

ಇಕಾರಕ್ಕೆ ವಿಷ್ಣು ಅಧಿದೇವತೆ. ಇದು ಕಪ್ಪುಬಣ್ಣವುಳ್ಳದ್ದೂ ರಕ್ಷಣೆಯನ್ನು ಕೊಡುವುದೂ ಆಗಿರುತ್ತದೆ. ಈಕಾರಕ್ಕೆ ಮಾಯಾಶಕ್ತಿಯು ಅಧಿದೇವತೆ. ಇದು ಹಳದಿಬಣ್ಣವುಳ್ಳದ್ದೂ ಸ್ತ್ರೀಯರನ್ನು ವಶಗೊಳಿಸುವುದೂ ಆಗಿರುತ್ತದೆ. ॥ ೪೪ ॥

ಉಕಾರಕ್ಕೆ ವಾಸ್ತುದೇವತೆಯು ಅಧಿದೇವತೆ. ಇದು ಕಪ್ಪುಬಣ್ಣವುಳ್ಳದ್ದೂ

---

1 ಆಕಾರಂ—ಗ, ಜ, ಠ, ಡ, ಢ, ತ, ಥ, ದ, ಭ.
2 ಶ್ವೇತಂ ಚಾಕರ್ಷಣಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ. ಭ.
3 ಇಕಾರಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಫ, ಬ, ಭ.
4 ವಿಷ್ಣುದೈವತ್ಯಂಶ್ಯಾಮಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.
5 ರಕ್ಷಣಮೇವ ಚ—ಡ, ಪ.
ರಕ್ಷಾಕರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಡ, ಢ, ತ, ಥ, ದ, ಧ.
6 ಈಕಾರಂ—ಕ, ಟ, ಠ, ಢ, ತ, ಥ, ದ. ಧ, ಭ.
7 ಪೀತಂ ಸ್ತ್ರೀಣಾಂ ವಶೀಕರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.
8 ಉಕಾರಂ—ಕ, ಟ, ಠ, ಡ, ಢ, ತ, ಥ, ದ, ಪ, ಫ, ಭ.
9 ವಾಯುದೈವತ್ಯಂ—ಫ.
ವಾಸ್ತುದೈವತ್ಯಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಬ, ಭ.

ಊಕಾರೋ[1] ಭೂಮಿದೈವತ್ಯಃ[2]
ಶ್ಯಾಮೋ ಲೋಕವಶೀಕರಃ[3] ॥ ॥ ೪೫ ॥

ಋಕಾರೋ ಬ್ರಹ್ಮಣೋ ಜ್ಞೇಯಃ
ಪೀತೋ[4] ಗ್ರಹವಿನಾಶಕಃ[5] ।
ಶಿಖಣ್ಡಿರೂಪಃ ೠಕಾರಃ
ಹ್ಯಞ್ಜನೋ[6] ಜ್ವರನಾಶಕಃ[7] ॥ ॥ ೪೬ ॥

ರಾಜರನ್ನು ವಶಗೊಳಿಸುವುದೂ ಆಗಿರುತ್ತದೆ. ಊಕಾರಕ್ಕೆ ಭೂಮಿದೇವತೆಯು ಅಧಿದೇವತೆ. ಇದು ಕಪ್ಪು ಬಣ್ಣವನ್ನುಳ್ಳದ್ದೂ ಜನರನ್ನು ವಶಗೊಳಿಸುವುದು ಆಗಿರುತ್ತದೆ. ॥ ೪೫ ॥

ಋಕಾರಕ್ಕೆ ಬ್ರಹ್ಮನು ಅಧಿದೇವತೆ. ಇದನ್ನು ಹಳದಿಬಣ್ಣವುಳ್ಳದ್ದೆಂದೂ ಗ್ರಹಪೀಡೆಯನ್ನು ನಾಶಮಾಡುವುದೆಂದೂ ತಿಳಿಯಬೇಕು. ೠಕಾರಕ್ಕೆ ಶಿಖಂಡಿಯು ಅಧಿದೇವತೆ. ಇದನ್ನು ಅಂಜನವರ್ಣವನ್ನುಳ್ಳದ್ದೆಂದೂ ಜ್ವರರೋಗವನ್ನು ನಾಶಮಾಡುವುದೆಂದೂ ತಿಳಿಯಬೇಕು. ॥ ೪೬ ॥

---

1 ಕೃಷ್ಣಂ ರಾಜವಶೀಕರಮ್, ಊಕಾರಂ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಬ, ಭ.

2 ದೈವತ್ಯಂ—ಕ, ಖ, ಗ, ಘ. ಚ, ಛ, ಜ, ಟ, ಠ, ಡ, ಢ, ತ. ಥ, ದ, ಧ, ಪ, ಬ, ಭ.

3 ಶ್ಯಾಮಂ ಲೋಕವಶೀಕರಂ—ಕ, ಖ, ಗ, ಘ, ಚ, ಛ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ, ಭ.

4 ಋಕಾರಂ ಬ್ರಹ್ಮಣೋ ಜ್ಞೇಯಂ ಪೀತಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಡ, ಢ, ತ, ಥ, ದ, ಪ, ಫ, ಬ, ಭ.

5 ಗ್ರಹವಿನಾಶಕಂ—ಡ.
ಗ್ರಹವಿನಾಶಕಂ—ಖ, ಗ, ಚ, ಜ, ಝ.
ಗ್ರಾಮವರ್ಣನಂ—ಫ.

6 ಶಿಖಣ್ಡಿರೂಪಂ ೠಕಾರಂ ಹ್ಯಂಜನಂ—ಕ, ಖ, ಗ. ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಬ, ಭ.

7 ಜ್ವರನಾಶಕಂ—ಖ, ಝ.
ಜ್ವರನಾಶನಂ—ಕ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ. ಪ, ಫ, ಬ, ಭ.

ಅಶ್ವಿನೀಭ್ಯಾಂ ಌ ೡ ಚೈವ[1]
ಸಿತರಕ್ತೌ ಜ್ವರಾಪಹೌ ।
ಏಕಾರೋ ವೀರಭದ್ರೀಯಃ
ಪೀತಃ ಸರ್ವಾರ್ಥಸಿದ್ಧಿದಃ ॥ ॥ ೪೭ ॥

ಐಕಾರಂ ವಾಗ್ಭವಂ ವಿದ್ಯಾತ್[2]
ಸ್ಫಾಟಿಕಂ[3] ಜ್ಞಾನಸಿದ್ಧಿದಮ್ ।
ಓಕಾರಮೀಶ್ವರಂ ವಿದ್ಯಾತ್[4]
ಜ್ಯೋತಿಃ ಸರ್ವಫಲಪ್ರದಮ್ ॥ ॥ ೪೮ ॥

ಔಕಾರಃ[5] ಆದಿಶಕ್ತಿಃ ಸ್ಯಾತ್
ಶುಕ್ಲಃ ಸರ್ವಾರ್ಥಸಿದ್ಧಿದಃ[6] ।

ಌ ೡ ಕಾರಗಳಿಗೆ ಅಶ್ವಿನೀದೇವತೆಗಳು ಅಧಿದೇವತೆಗಳು. ಇವು ಬಿಳಿ–ಕೆಂಪು ಬಣ್ಣವುಳ್ಳವುಗಳೂ ಜ್ವರರೋಗವಿನಾಶಕಗಳೂ ಆಗಿರುತ್ತವೆ. ಏಕಾರಕ್ಕೆ ವೀರಭದ್ರನು ಅಧಿದೇವತೆ. ಇದು ಹಳದಿಬಣ್ಣವನ್ನುಳ್ಳದ್ದೂ ಸಕಲಪ್ರಯೋಜನದಾಯಕವೂ ಆಗಿರುತ್ತದೆ. ॥ ೪೭ ॥

ಐಕಾರಕ್ಕೆ ಸರಸ್ವತಿಯು ಅಧಿದೇವತೆ. ಇದನ್ನು ಸ್ಫಟಿಕದ ಬಣ್ಣವುಳ್ಳದ್ದೆಂದೂ, ಜ್ಞಾನಸಿದ್ಧಿದಾಯಕವೆಂದೂ ತಿಳಿಯಬೇಕು. ಓಕಾರಕ್ಕೆ ಈಶ್ವರನು ಅಧಿದೇವತೆ. ಇದನ್ನು ತೇಜಸ್ಸಿನ ವರ್ಣವುಳ್ಳದ್ದೆಂದೂ ಸಕಲ ಪ್ರಯೋಜನದಾಯಕವೆಂದೂ ತಿಳಿಯಬೇಕು. ॥ ೪೮ ॥

ಔಕಾರಕ್ಕೆ ಆದಿಶಕ್ತಿಯು ಅಧಿದೇವತೆ. ಇದು ಬಿಳಿಬಣ್ಣವುಳ್ಳದ್ದೂ ಸಕಲ

---

1 ಭ್ಯಾಂ ತು ಌ ೡ ಚ—ಕ, ಛ, ತ, ಥ, ದ, ಧ, ಠ, ಡ, ಫ.
ಭ್ಯಾಂ ಚ ಌ ೡ ಚ—ಟ, ಪ.
ಭ್ಯಾಂ ಌ ೡ ಕಾರಂ—ಗ, ಜ.
2 ವಿಂದ್ಯಾತ್—ಘ, ಟ, ಠ, ಢ, ತ, ಥ, ದ, ಧ.
3 ಟಿ, ಕಂ–ಪ, ಫ.
4 ವಿಂದ್ಯಾತ್—ಘ, ಟ, ಠ, ಢ, ಥ, ದ, ಧ.
5 ಔಕಾರಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಫ.
6 ಶುಕ್ಲಂ ಸರ್ವತ್ರ ಸಿದ್ಧಿದಂ—ಕ, ಖ, ಗ, ಘ, ಚ, ಛ. ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

ಅಂಕಾರಸ್ತು[1] ಮಹೇಶಃ[2] ಸ್ಯಾತ್
ರಕ್ತವರ್ಣಃ ಸುಖಪ್ರದಃ[3] ॥ ॥ ೪೯ ॥

ಅಃಕಾರಃ ಕಾಲರುದ್ರಶ್ಚ[4]
ರಕ್ತಃ[5] ಪಾಶನಿಕೃನ್ತನಃ[6] ।
ಪ್ರಾಜಾಪತ್ಯಃ[7] ಕಕಾರಃ ಸ್ಯಾತ್[8]
ಪೀತಃ[9] ಸೃಷ್ಟಿಕರೋ[10] ಭವೇತ್ ॥ ॥ ೫೦ ॥

ಪ್ರಯೋಜನದಾಯಕವೂ ಆಗಿರುತ್ತದೆ. ಅಂಕಾರಕ್ಕೆ ಮಹೇಶನೇ ಅಧಿದೇವತೆ. ಇದು ಕೆಂಪುಬಣ್ಣವುಳ್ಳದ್ದೂ ಸುಖದಾಯಕವೂ ಆಗಿರುತ್ತದೆ. ॥ ೪೯ ॥

ಅಃಕಾರಕ್ಕೆ ಕಾಲರುದ್ರನು ಅಧಿದೇವತೆ. ಇದು ಕೆಂಪುಬಣ್ಣವುಳ್ಳದ್ದೂ, ಸಂಸಾರಪಾಶವನ್ನು ಕತ್ತರಿಸುವುದೂ ಆಗಿರುತ್ತದೆ. ಕಕಾರಕ್ಕೆ ಬ್ರಹ್ಮನು ಅಧಿದೇವತೆ. ಇದು ಹಳದಿಬಣ್ಣವುಳ್ಳದ್ದೂ ಸೃಷ್ಟಿಕರ್ತವೂ ಆಗಿರುತ್ತದೆ. ॥ ೫೦ ॥

---

1 ಅಂಕಾರಂ ತು—ಕ, ಜ.

2 ಮಹೇಶಂ—ಕ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

3 ರಕ್ತವರ್ಣಂ ಸುಖಪ್ರದಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

4 ಅಃಕಾರಂ–ಕಾಲರುದ್ರಂ ಚ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ.

5 ರಕ್ತಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

6 ಪಾಶವಿಕೃನ್ತನಂ—ಛ, ಟ.
ಕಾಲಾಗ್ನಿಕೃನ್ತನಂ—ಫ.
ಪಾಶನಿಕೃನ್ತನಂ—ಕ, ಖ, ಗ, ಘ, ಚ, ಛ, ಜ, ಝ, ಠ, ಡ, ಢ, ತ, ಧ, ದ, ಥ, ಪ.

7 ಪ್ರಾಜಾಪತ್ಯಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

8 ಕಕಾರಂ ಸ್ಯಾತ್—ಗ, ಘ, ಚ, ಛ, ಜ, ಠ, ಡ, ಢ, ತ, ಥ, ದ, ಧ, ಪ, ಫ, ಭ.
ಕಕಾರಶ್ಚ--ಕ, ಖ, ಘ.

9 ಪೀತಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಛ,

10 ವೃಷ್ಟಿಕರಂ—ಕ, ಛ, ಝ, ಟ, ಡ, ಢ, ತ, ಥ, ದ, ಭ.
ಪುಷ್ಟಿಕರಂ—ಖ, ಠ, ಥ, ಪ. ಸೃಷ್ಟಿಕರಂ—ಗ, ಚ, ಜ.

ಖಕಾರೋ[1] ಜಾಹ್ನವೀಬೀಜಂ[2]
ಕ್ಷೀರಾಭಃ ಪಾಪನಾಶನಃ ।
ಗಕಾರೋ[3] ಗಣಬೀಜಂ[4] ಸ್ಯಾತ್[5]
ರಕ್ತಾಭೋ ವಿಘ್ನನಾಶನಃ[6] ॥ ॥ ೫೧ ॥

ಘಕಾರೋ ಭೈರವೋ ಜ್ಞೇಯಃ
ಮುಕ್ತಾಭಃ ಶತ್ರುನಾಶನಃ[7] ।
ಙಕಾರಃ ಕಾಲಬೀಜಂ ಸ್ಯಾತ್[8]
ಕಾಲಃ ಸರ್ವಜಯೋ[9] ಭವೇತ್ ॥ ॥ ೫೨ ॥

ಖಕಾರಕ್ಕೆ ಗಂಗೆಯು ಅಧಿದೇವತೆ. ಇದು ಹಾಲಿನ ಬಣ್ಣವನ್ನುಳ್ಳದ್ದೂ ಪಾಪ ನಾಶಕವೂ ಆಗಿರುತ್ತದೆ. ಗಕಾರಕ್ಕೆ ಗಣಪತಿಯು ಅಧಿದೇವತೆ. ಇದು ಕೆಂಪು ಕಾಂತಿ ಯನ್ನುಳ್ಳದ್ದೂ ವಿಘ್ನನಾಶಕವೂ ಆಗಿರುತ್ತದೆ. ॥ ೫೧ ॥

ಘಕಾರಕ್ಕೆ ಭೈರವನು ಅಧಿದೇವತೆ. ಇದನ್ನು ಮುತ್ತಿನ ಕಾಂತಿಯುಳ್ಳದ್ದೆಂದೂ ಶತ್ರುನಾಶಕವೆಂದೂ ತಿಳಿಯಬೇಕು. ಙಕಾರಕ್ಕೆ ಕಾಲನು ಅಧಿದೇವತೆ. ಇದು ಕಪ್ಪುಬಣ್ಣವುಳ್ಳದ್ದೂ ಸಕಲ ಜಯವನ್ನುಂಟುಮಾಡುವುದೂ ಆಗಿರುತ್ತದೆ. ॥ ೫೨ ॥

---

1 ಖಕಾರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ಥ, ದ, ಧ, ಪ, ಫ, ಭ.

2 ಜಾಹ್ನವೀ ಜ್ಞೇಯಂ—ಕ, ಖ, ಘ, ಛ, ಝ, ಟ, ಠ, ಡ, ಢ, ತ, ಥ, ದ.

3 ಕ್ಷಿರಾಭಂ ಪಾಪನಾಶನಂ ಗಕಾರಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

4 ಗಣರೂಪಂ—ಕ, ಖ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ, ಫ.

5 ಚ—ಝ, ಢ, ತ, ಥ, ದ

6 ರಕ್ತಾಭಂ ವಿಘ್ನನಾಶನಮ್—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

8 ಘಕಾರಂ ಭೈರವಂ ಜ್ಞೇಯಂ ಮುಕ್ತಾಭಂ ಶತ್ರುನಾಶನಮ್—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

7 ಚ—ಝ,

9 ಕಾಲಂ ಸರ್ವಜಯಮ್—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

ಚಕಾರಃ ಚಣ್ಡರುದ್ರಃ[1] ಸ್ಯಾತ್
ಅಞ್ಜನಃ[2] ತ್ರಿಪುರಾಪಹಃ[3] ।
ಛಕಾರೋ[4] ಭದ್ರಕಾಲೀ[5] ಸ್ಯಾತ್
ರಾಜಾವರ್ತೋ[6] ಜಯಪ್ರದಃ[7] ॥ ॥ ೫೩ ॥

ಜಕಾರೋ[8] ಜಮ್ಭಹಾ[9] ಜ್ಞೇಯಃ
ರಕ್ತಾಭಶ್ಚ[10] ಜಯಾವಹಃ[11] ।

ಚಕಾರಕ್ಕೆ ಚಂಡರುದ್ರನು ಅಧಿದೇವತೆ. ಇದು ಕಪ್ಪುಬಣ್ಣವನ್ನುಳ್ಳದ್ದೂ ತ್ರಿಪುರನಾಶಕವೂ ಆಗಿರುತ್ತದೆ. ಛಕಾರಕ್ಕೆ ಭದ್ರಕಾಲಿಯು ಅಧಿದೇವತೆ. ಇದು ರಾಜಾವರ್ತಶಿಲೆಯ ಬಣ್ಣವನ್ನುಳ್ಳದ್ದೂ, ವಿಜಯದಾಯಕವೂ ಆಗಿರುತ್ತದೆ. ॥ ೫೩ ॥

ಜಕಾರಕ್ಕೆ ಇಂದ್ರನು ಅಧಿದೇವತೆ. ಇದನ್ನು ಕೆಂಪುಬಣ್ಣವುಳ್ಳದ್ದೆಂದೂ, ಜಯಪ್ರದವಾದುದೆಂದೂ ತಿಳಿಯಬೇಕು. ಝಕಾರಕ್ಕಾದರೋ ಅರ್ಧನಾರೀಶ್ವರನು

---

[1] ಚಕಾರಂ ಚಣ್ಡರುದ್ರಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ.

[2] ಅಂಜನಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಭ.

[3] ಪುರನಾಶನಂ—ಫ.
ತ್ರಿಪುರಾಪಹಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಫ,

[4] ಛಕಾರಂ—ಕ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

[5] ಭದ್ರಕಾಲಿಂ—ಥ, ದ.

[6] ರಾಜಾವರ್ತಂ—ಕ, ಖ, ಗ, ಘ, ಚ, ಛ. ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

[7] ಜಯಪ್ರದಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಭ.
ಜಯಪ್ರದಾ—ಫ.

[8] ಜಕಾರಂ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

[9] ಜಂಭಭಿತ್—ಝ.

[10] ಜ್ಞೇಯಂ ರಕ್ತಾಭಂ ಚ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ. ಭಂಸ್ಯಾತ್—ಫ.

[11] ಜಯಾವಹಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

ಝುಕಾರಸ್ತ್ವ[1]ರ್ಧನಾರೀ ಸ್ಯಾತ್
ಶ್ಯಾಮರಕ್ತೋ[2] ಜಯಾವಹಃ[3] ॥ ॥ ೫೪ ॥

ಞಕಾರಃ[4] ಕೋಟಿರ್ವಿಜ್ಞೇಯಃ[5]
ಪೀತೋ[6] ರೋಗವಿನಾಶನಃ[7] ।
ಭೃಂಗೀಶಃ[8] ಸ್ಯಾತ್ ಟಕಾರಸ್ತು
ರಕ್ತಃ[9] ಸರ್ವಸುಖಾವಹಃ[10] ॥ ॥ ೫೫ ॥

ಅಧಿದೇವತೆ. ಇದು ಕಪ್ಪು ಕೆಂಪು ಬಣ್ಣವನ್ನುಳ್ಳದ್ದೆಂದೂ ವಿಜಯದಾಯಕವೆಂದೂ ಹೇಳುತ್ತಾರೆ. ॥ ೫೪ ॥

ಞಕಾರಕ್ಕೆ ಕೋಟಿರುದ್ರನು ಅಧಿದೇವತೆ. ಇದನ್ನು ಹಳದಿಬಣ್ಣವುಳ್ಳದ್ದೆಂದೂ, ರೋಗನಾಶಕವೆಂದೂ ತಿಳಿಯಬೇಕು. ಟಕಾರಕ್ಕೆ ಭೃಂಗೀಶನು ಅಧಿದೇವತೆ. ಇದು ಕೆಂಪುಬಣ್ಣವುಳ್ಳದ್ದೂ, ಸಮಸ್ತ ಸುಖವನ್ನುಂಟುಮಾಡುವುದೂ ಆಗಿರುತ್ತದೆ. ॥ ೫೫ ॥

---

[1] ಝುಂಕಾರಂ—ಗ, ಚ.
ಝುಕಾರಂ—ಕ, ಖ, ಘ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.
[2] ಶ್ಯಾಮಂ ರಕ್ತಂ—ಗ, ಚ, ಜ.
ಶಾಮರಕ್ತಂ—ಘ, ಛ, ಠ, ಡ, ಢ, ತ, ಥ, ದ, ಧ, ಭ.
ಸಿತರಕ್ತಂ—ಕ.
[3] ಜಯಾವಹಂ—ಕ, ಖ, ಗ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಫ.
[4] ಞಕಾರಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.
[5] ಕೋಟಿವಿಜ್ಞಾನಂ—ಥ.
ಕೋಟಿ ವಿಜ್ಞೇಯಂ—ಕ, ಖ, ಗ, ಘ, ಚ, ಛ, ಜ. ಝ, ಟ, ಠ, ಡ, ಢ, ತ, ಥ, ಧ, ಪ, ಫ, ಭ.
[6] ಪೀತಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ. ಭ.
[7] ರೋಗವಿನಾಶಕಂ—ಥ.
ರೋಗವಿನಾಶಕಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಫ, ದ, ಪ, ಫ, ಭ.
[8] ಭೃಂಗೀಶಂ—ಕ, ಘ, ಛ, ಟ, ಠ. ಢ, ತ, ಥ, ದ, ಧ, ಪ.
[9] ಟಕಾರಂ ತು ರಕ್ತಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.
[10] ಸರ್ವಸ್ಸುಖಪ್ರದಂ—ಫ.
ಸಮಸುಖಾವಹಂ—ಛ.
ಸರ್ವಸುಖಾವಹಂ—ಕ, ಖ, ಗ, ಘ, ಚ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ,

ಠಕಾರಃ[1] ಚನ್ದ್ರಬೀಜಂ ಸ್ಯಾತ್[2]
ಶ್ವೇತೋ[3] ಮೃತ್ಯುವಿನಾಶನಃ ।
ಡಕಾರಶ್ಚೈಕನೇತ್ರಃ ಸ್ಯಾತ್
ಪೀತಃ[4] ಕಾಲಜಯಪ್ರದಃ[5] ॥ ॥ ೫೬ ॥

ಢಕಾರೋ ಯಮಬೀಜಂ ಸ್ಯಾತ್
ನೀಲೋ[6] ಮೃತ್ಯುವಿನಾಶನಃ[7] ।
ಣಕಾರೋ ನನ್ದಿಬೀಜಂ ಸ್ಯಾತ್
ರಕ್ತಾಭಶ್ಚಾರ್ಥಸಿದ್ಧಿದಃ[8] ॥ ॥ ೫೭ ॥

ಠಕಾರಕ್ಕೆ ಚಂದ್ರನು ಅಧಿದೇವತೆ. ಇದು ಬಿಳಿಬಣ್ಣವುಳ್ಳದ್ದೂ ಅಪಮೃತ್ಯು ಪರಿಹಾರಕವೂ ಆಗಿರುತ್ತದೆ. ಡಕಾರಕ್ಕೆ ಏಕನೇತ್ರರುದ್ರನು ಅಧಿದೇವತೆ. ಇದು ಹಳದಿ ಬಣ್ಣವನ್ನುಳ್ಳದ್ದೂ ಕಾಲಜಯದಾಯಕವೂ ಆಗಿರುತ್ತದೆ. ॥ ೫೬ ॥

ಢಕಾರಕ್ಕೆ ಯಮನು ಅಧಿದೇವತೆ. ಇದು ನೀಲವರ್ಣವೂ ಅಪಮೃತ್ಯು ವಿನಾಶಕವೂ ಆಗಿರುತ್ತದೆ. ಣಕಾರಕ್ಕೆ ನಂದಿಯು ಅಧಿದೇವತೆ. ಇದು ಕೆಂಪು ಕಾನ್ತಿಯನ್ನುಳ್ಳದ್ದೂ ಐಶ್ವರ್ಯಪ್ರದವೂ ಆಗಿರುತ್ತದೆ. ॥ ೫೭ ॥

---

1 ಡಕಾರಂ—ಕ, ಖ, ಗ, ಘ, ಚ, ಛ, ಜ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ,
2 ಚ—ಝ.
3 ಸಿತಂ—ಕ, ಗ, ಚ, ಛ, ಝ, ಟ, ಡ, ತ.
ಪೀತಂ—ಧ.
ಶ್ವೇತಂ—ಖ, ಘ, ಜ, ಠ, ಢ, ಥ, ದ.
4 ವಿನಾಶನಮ್ । ಡಕಾರಂಚೈಕನೇತ್ರಂ ಸ್ಯಾತ್ ಪೀತಂ—ಕ, ಖ, ಗ, ಘ, ಚ, ಛ, ಜ. ಝ, ಟ, ಠ, ಡ, ಢ; ತ, ಥ, ದ, ಧ, ಪ, ಫ, ಭ.
5 ಜಯಂ ಭವೇತ್—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ, ಭ.
ಜಯಪ್ರದಂ—ಧ.
ಜಯಾವಹಂ—ಫ.
6 ಢಕಾರಂ ಯಮಬೀಜಂ ಸ್ಯಾನ್ನೀಲಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.
7 ಮೃತ್ಯುಜಯಾವಹಂ—ಫ.
ಮೃತ್ಯುವಿನಾಶನಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಭ.
8 ಣಕಾರಂ ನಂದಿಬೀಜಂ ಸ್ಯಾದ್ರಕ್ತಾಭಂ ಚಾರ್ಥ ಸಿದ್ಧಿದಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ, ಭ.

ಕಾರ್ಯಕಾರಣಸಂಯುಕ್ತಾಃ[4]
ಸರ್ವೇಷಾಂ ಚ ಷಡಾನನ[5] ।
[6]ತೇಷಾಂ ಚ ನಾಮಧೇಯಾನಿ
ವಕ್ಷ್ಯಾಮಿ ಶೃಣು ಷಣ್ಮುಖ ॥ ॥ ೯ ॥

ಪ್ರಥಮಂ ಹೃದಯಂ[7] ವಿದ್ಯಾತ್[8]
ದ್ವಿತೀಯಂ ತು ಶಿರೋ ಭವೇತ್ ।

ಅಃ ವರ್ಣವನ್ನು ಬಿಟ್ಟು ಉಳಿದವುಗಳಿಗೆ ಅನುಸ್ವಾರವನ್ನು ಸೇರಿಸಬೇಕು. ಹೀಗೆ ಸೇರಿಸಿದರೆ—ಹಾಂ ಹೀಂ ಹೂಂ ಹೈಂ ಹೌಂ ಹಃ ಎಂಬ ರೇಫರಹಿತವಾದ ಆರು ತಾಂತ್ರಿಕ ಶಿವಾಂಗಗಳಾಗುತ್ತವೆ. ರೇಫಸಹಿತವಾದ ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಎಂಬಿವು ವೈದಿಕ ಶಿವಾಂಗಗಳು. ಇನ್ನು ಅವುಗಳ ಹೆಸರನ್ನು ಹೇಳುವೆನು— ॥ ೯ ॥

ಹಾಂ ಅಥವಾ ಹ್ರಾಂ ಎಂಬ ಪ್ರಥಮ ಬೀಜವು ಹೃದಯಬೀಜ. ಹೀಂ ಅಥವಾ ಹ್ರೀಂ ಎಂಬ ದ್ವಿತೀಯಬೀಜವು ಶಿರೋಬೀಜ. ಹೂಂ ಅಥವಾ ಹ್ರೂಂ ಎಂಬ

---

1 ಸಂತ್ಯಕ್ತ್ವಾ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.
ಸಂನ್ಯಸ್ಯ—ಜ.
2 ಶೇಷಃ—ಖ, ಧ.
ಶೇಷೇ—ಘ.
3 ಷಡ್ವದವರ್ಣಯುಕ್—ಥ.
ಷಟ್ಪದವರ್ಣಯುಕ್—ಛ.
ಷಟ್ಪರವರ್ಣಯುಕ್—ಗ, ಚ.
4 ಸಂಯುಕ್ತಂ—ಗ, ಚ, ಫ.
5 ಷಡ್ವರ್ಣಾನಾಮನುಕ್ರಮಾತ್—ಝ.
6 ಈ ಅರ್ಧಪದ್ಯ—ಕ, ಖ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ, ಫ. ಪುಸ್ತಕಗಳಲ್ಲಿಲ್ಲ.
7 ಹೃದಯಂ ಪ್ರಥಮಂ—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ, ಫ.
8 ವಿಂದ್ಯಾತ್—ಕ, ಘ, ಟ, ಠ, ಢ, ತ, ಥ, ದ, ಧ, ಪ

ತೃತೀಯಂ ತು ಶಿಖಾಂ ವಿದ್ಯಾತ್[1]
ಚತುರ್ಥಂ ಕವಚಂ ಭವೇತ್ ॥ ॥ ೧೦ ॥

ಪಂಚಮಂ ನೇತ್ರತ್ರಯಂ ಸ್ಯಾತ್[2]
ಷಷ್ಠಮಸ್ತ್ರಮುದಾಹೃತಮ್[3] ।
ಏತಚ್ಛಿವಾಂಗ[4]ನಾಮಾನಿ
ಕೀರ್ತಿತಾನಿ ಕ್ರಮಾದ್ವಿದುಃ[5] ॥ ॥ ೧೧ ॥

ಆದೌ ಪ್ರಣವ[6]ಮುಚ್ಚಾರ್ಯ[7]
ಶಿವಾರ್ಣಂ[8] ತದನಂತರಮ್ ।

ತೃತೀಯಬೀಜವು ಶಿಖಾಬೀಜ. ಹ್ಯೆಂ ಅಥವಾ ಹ್ರೈಂ ಎಂಬ ಚತುರ್ಥಬೀಜವು ಕವಚಬೀಜ. ॥ ೧೦ ॥

ಹೌಂ ಅಥವಾ ಹ್ರೌಂ ಎಂಬ ಪಂಚಮಬೀಜವು ನೇತ್ರತ್ರಯಬೀಜ. ಹಃ ಅಥವಾ ಹ್ರಃ ಎಂಬ ಷಷ್ಠಬೀಜವು ಅಸ್ತ್ರಬೀಜ. ಇವು ಕ್ರಮವಾದ ಶಿವಾಂಗನಾಮಗಳು. ॥ ೧೧ ॥

ಪ್ರಣವ ಶಿವಾಂಗಬೀಜ ಚತುರ್ಥ್ಯಂತವಾದ ಹೃದಯಾದ್ಯಭಿಧಾನ, ನಮಃ ಮುಂತಾದ ಪಲ್ಲವಗಳನ್ನು ಕ್ರಮವಾಗಿ ಉಚ್ಚರಿಸಿದರೆ ಹೃದಯಾದ್ಯಂಗಮಂತ್ರಗಳಾಗುತ್ತವೆ. ಹೇಗೆಂದರೆ—

---

[1] ವಿಂದ್ಯಾತ್—ಕ, ಘ, ಟ, ಠ, ಢ, ತ, ಥ, ದ, ಧ, ಪ.

[2] ನೇತ್ರಮಿತ್ಯುಕ್ತಂ—ಝ.
ನೇತ್ರಯುಗ್ಮಂ ಚ—ಗ, ಚ
ನೇತ್ರಮುದ್ದಿಷ್ಟಂ—ಘ
ನೇತ್ರತ್ರಯಂ ಚೈವ—ಥ.

[3] ಅಸ್ತ್ರಂ ಷಷ್ಠ ಮುದಾಹೃತಂ—ಕ, ಖ, ಘ, ಛ, ಜ, ಟ, ಠ, ಢ, ತ, ಥ, ದ, ಧ.
ಷಷ್ಠಂಚಾಸ್ತ್ರಮುದಾಹೃತಂ—ಝ.
ಷಷ್ಠ ಮಸ್ತ್ರಮುದೀರಿತಂ—ಘ.

[4] ಏತೇ ಶಿವಾಂಗ—ಗ, ಚ.

[5] ಶಿವಾಂಗನಾಮಾನ್ಯೇತಾನಿ ಭಣಿತಾನಿ ಕ್ರಮೇಣ ತು—ಘ.

[6] ಪ್ರಣಮ—ಛ.

[7] ಮುಚ್ಚಾರ್ಯ—ಕ.

[8] ಜೀವಾರ್ಣ—ಕ, ಘ, ಛ, ಟ, ಢ, ತ, ಥ, ಧ.

ಅಭಿಧಾನಂ[1] ಚತುರ್ಥ್ಯನ್ತಂ[2]
ನಮಸ್ಕಾರಾದಿಭಿರ್ಯುತಮ್[3] ॥ ॥ ೧೨ ॥
[4]ಸ್ರಷ್ಟುಃ ವಿಂಶತಿಕಂ[5] ಬೀಜಂ
ಪಂಚವಿಂಶತಿಕಂ ತತಃ[6] ।
ದ್ವ್ಯಕ್ಷರಂ ಸವಿಸರ್ಗಂ ಚ
ಹೃನ್ಮಂತ್ರೇ[7] ಪಲ್ಲವಂ ಸ್ಮೃತಮ್ ॥ ॥ ೧೩ ॥

ಪ್ರಾಣಸ್ಯ ಸಪ್ತಮೇ[8] ಹ್ಯಾಪಃ
ದ್ವಿತೀಯಸ್ವರಯುಕ್ ಕ್ರಮಾತ್[9] ।

ವೈದಿಕ—ಓಂ ಹ್ರಾಂ ಹೃದಯಾಯನಮಃ, ಓಂ ಹ್ರೀಂ ಶಿರಸೇಸ್ವಾಹಾ, ಓಂ ಹ್ರೂಂ ಶಿಖಾಯೈವಷಟ್, ಓಂ ಹ್ರೈಂ ಕವಚಾಯ ಹುಂ, ಓಂ ಹ್ರೌಂ ನೇತ್ರ ತ್ರಯಾಯವೌಷಟ್, ಓಂ ಹ್ರಃ ಅಸ್ತ್ರಾಯ ಫಟ್. ॥ ೧೨ ॥

ನಕಾರವನ್ನೂ ಮಕಾರವನ್ನೂ ಉದ್ಧರಿಸಿ, ಮಕಾರಕ್ಕೆ ವಿಸರ್ಗವನ್ನು ಸೇರಿಸಿದರೆ 'ನಮಃ' ಎಂದು ಹೃದಯಮಂತ್ರಪಲ್ಲವವಾಗುತ್ತದೆ. ॥ ೧೩ ॥

ವಾಯುಬೀಜವಾದ ಯಕಾರಕ್ಕೆ ಸಪ್ತಮಬೀಜವಾದ ಸಕಾರವನ್ನೂ, ಅಬ್ಬೀಜ ವಾದ ವಕಾರವನ್ನೂ ಉದ್ಧರಿಸಿ ಆಕಾರವನ್ನು ಸೇರಿಸಬೇಕು. ವ್ಯೋಮಬೀಜವಾದ

---

1 ಅಭಿಧಾನ—ಜ.
2 ಚತುರ್ಥಂ ತು—ಕ,
3 ದಿಸಂಯುತಂ—ಘ.
4 ಇಲ್ಲಿಂದ 'ಕೀರ್ತಿತಂ' (ಶ್ಲೋ ೧೮) ವರೆಗೆ ಖ, ಢ, ಘ. ಪುಸ್ತಕಗಳಲ್ಲಿಲ್ಲ.
5 ಪ್ರಸ್ಪುರ್ವಿಂಶತಿ ತಂ—ಟ
ಸೃಷ್ಟಿವಿಂಶತಿಕಂ—ಠ, ಢ.
ಸೃಷ್ಟಿರ್ವಿಂಶತಿಕಂ—ಗ, ಚ, ಥ.
ಸ್ರಷ್ಟಂ ವಿಂಶತಿಕಂ—ಛ
ಸ್ರಷ್ಟವಿಂಶತಿಕಂ—ಢ
6 ತಥಾ—ಟ
7 ಹೃನ್ಮಂತ್ರ—ಕ
ಹೃನ್ನೇತ್ರ—ಥ
ಹೃನ್ಮಂತ್ರಂ—ಘ, ಛ, ಟ, ಢ, ತ, ದ
ಹೃನ್ಮಂತ್ರಃ—ಠ.
8 ಸಪ್ತಮಂ—ಗ, ಚ
9 ಯುಂಜ್ಯಾದ್ವದ್ವಿತೀಯಸ್ವರಂ ಕ್ರಮಾತ್—ಕ, ಘ, ಛ, ಟ, ಠ, ಢ, ತ, ಥ, ದ

[1]ಶೇ[2] ದ್ವಿತೀಯ[3]ಸ್ವರಂ ತದ್ವತ್[4]
ಶಿರೋಮಂತ್ರಸ್ಯ ಪಲ್ಲವಮ್ ॥ ॥ ೧೪ ॥

ಪಾರ್ಥಿವಾಂತಾಕ್ಷರಂ ಯಸ್ಯ
ತೃತೀಯಂ[5]ಚಾಕ್ಷರಂ ತತಃ ।
ದಶಾಂತ[6]ವ್ಯಂಜನಂ ತದ್ವತ್
ಶಿಖಾಮಂತ್ರಸ್ಯ ಪಲ್ಲವಮ್ ॥ ॥ ೧೫ ॥

ಚತುರ್ಥಾಂತಂ ಸ್ವರಂ ಬಿಂದು-
ನಾದೌ ಚ ಗಗನಾಕ್ಷರೇ ।
ಯುಂಜ್ಯಾತ್ ಕವಚಮಂತ್ರಸ್ಯ
ಪಲ್ಲವಂ ಪರಿಕೀರ್ತಿತಮ್ ॥ ॥ ೧೬ ॥

ಬೀಜದ್ವಯೇ ಶಿಖಾಯಾಶ್ಚ
ಪಲ್ಲವೇ ಪೂರ್ವಮಕ್ಷರಮ್ ।

ಹಕಾರವನ್ನು ಉದ್ಧರಿಸಿ ಆಕಾರವನ್ನು ಸೇರಿಸಬೇಕು. ಆಗ 'ಸ್ವಾಹಾ' ಎಂದು ಶಿರೋಮಂತ್ರಪಲ್ಲವವಾಗುತ್ತದೆ. ॥ ೧೪ ॥

ಪಾರ್ಥಿವಾನ್ತ್ಯಾಕ್ಷರವಾದ ವಕಾರವನ್ನು ಅದರ ತೃತೀಯಾಕ್ಷರವಾದ ಷಕಾರವನ್ನೂ ಅಕಾರದೊಡನೆ ಉದ್ಧರಿಸಿ ಹನ್ನೊಂದನೆಯ ವರ್ಗೀಯವ್ಯಂಜನವಾದ ಟಕಾರವನ್ನು ಸೇರಿಸಿದರೆ 'ವಷಟ್' ಎಂದು ಶಿಖಾಮಂತ್ರಪಲ್ಲವವಾಗುತ್ತದೆ. ॥ ೧೫ ॥

ವ್ಯೋಮಬೀಜವಾದ ಹಕಾರಕ್ಕೆ ಪಂಚಮಸ್ವರವಾದ ಉಕಾರವನ್ನೂ ಅನುಸ್ವಾರವನ್ನೂ ಸೇರಿಸಿದರೆ 'ಹುಂ' ಎಂದು ಕವಚಮಂತ್ರಪಲ್ಲವವಾಗುತ್ತದೆ. ॥ ೧೬ ॥

---

1 ಈ ಅರ್ಧಪದ್ಯ—ಪ. ಪುಸ್ತಕದಲ್ಲಿಲ್ಲ
2 ಖ—ಘ.
3 ದ್ವಿತೀಯಂ—ಕ
4 ತತ್—ತ.
5 ಪಾರ್ಥಿವಾಂತಂ ತತಸ್ತಸ್ಮಾತ್ ತ್ರಿತಯಂ—ಘ.
6 ದಶಾಂತಂ—ಖು, ಛ, ಟ, ಥ, ತ, ಥ, ಪ, ಪ.
ದಶಾಂತ್ಯ—ಶ.

ಚತುರ್ದಶಸ್ವರೋಪೇತಂ
ನೇತ್ರಮಂತ್ರಸ್ಯ ಪಲ್ಲವಮ್ ॥ ॥ ೧೭ ॥

[1]ಏಕವಿಂಶತಿವರ್ಣಾಂತಂ[2]
ದಶಾಂತ[3]ವ್ಯಂಜನಂ ತಥಾ[4] ।
ಏತದಾಯುಧಮಂತ್ರಸ್ಯ
ಪಲ್ಲವಂ ಚೇತಿ ಪರಿಕೀರ್ತಿತಮ್ ॥ ॥ ೧೮ ॥

ನಮೋಽನ್ತಂ ಹೃದಯಂ ವಿದ್ಯಾತ್[5]
ಸ್ವಾಹಾನ್ತಂ ಚ ಶಿರೋ ಭವೇತ್[6] ।
ವಷಡನ್ತಂ[7] ಶಿಖಾ ಜ್ಞೇಯಾ[8]
ಹುಂ ಕಾರಂ ಕವಚಂ ಭವೇತ್[9] ॥ ॥ ೧೯ ॥

ಶಿಖಾಮಂತ್ರಪಲ್ಲವದ ಪ್ರಥಮಬೀಜವಾದ ವಕಾರಕ್ಕೆ ಚತುರ್ದಶಸ್ವರವಾದ ಔಕಾರವನ್ನು ಸೇರಿಸಿದರೆ 'ವೌಷಟ್' ಎಂದು ನೇತ್ರಮಂತ್ರಪಲ್ಲವವಾಗುತ್ತದೆ. ॥ ೧೭ ॥

ಅಕಾರಸಹಿತವಾದ ಇಪ್ಪತ್ತೆರಡನೆಯ ವರ್ಗೀಯ ವ್ಯಂಜನವಾದ ಫಕಾರವನ್ನೂ, ಹನ್ನೊಂದನೆಯ ವರ್ಗೀಯ ವ್ಯಂಜನವಾದ ಟಕಾರವನ್ನೂ ಕ್ರಮವಾಗಿ ಉದ್ಧರಿಸಿದರೆ 'ಫಟ್' ಎಂದು ಅಸ್ತ್ರಮಂತ್ರದ ಪಲ್ಲವವಾಗುತ್ತದೆ. ॥ ೧೮ ॥

ಹೃದಯಮಂತ್ರವನ್ನು ನಮೋಂತವನ್ನಾಗಿಯೂ, ಶಿರೋಮಂತ್ರವನ್ನು

---

1 ಈ ಅರ್ಧಪದ್ಯ—ಟ. ಪುಸ್ತಕದಲ್ಲಿಲ್ಲ,
2 ಕರ್ಣಾಂತು—ಕ
ಕರ್ಣಾಂತಂ—ಘ, ಛ, ಟ, ಠ, ಢ, ತ, ದ.
3 ದಶಾಂಶ—ಘ. ಠ, ತ, ಪ.
4 ತತಃ—ಕ, ಘ, ಛ, ಟ, ಠ, ಢ, ತ, ದ, ಪ.
5 ವಿಂದ್ಯಾತ್—ಕ, ಘ, ಟ, ಠ, ಢ, ತ, ದ, ಧ, ಪ.
6 ಶಿರಸೋ ಭವೇತ್—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ, ಫ.
7 ತಾಪಟ್ಕಾರಂ—ಫ.
8 ಜ್ಞೇಯಂ—ಕ, ತ, ಥ, ಫ.
9 ಕವಚಂ ಭವೇತ್—ಝ.
ಕವಚಂ ಸ್ಮೃತಂ—ಧ
ಕವಚಾಯ ತು—ಫ.

[1]ವೌಷಡನ್ತಂ ತು ನೇತ್ರಂ ಸ್ಯಾತ್[2]
ಫಟ್ಕಾರಶ್ಚಾಸ್ತ್ರಮಂತ್ರತಃ[3] ।
ಏವಂ ಶಿವಾಂಗ ಮುದ್ದಿಷ್ಟಂ[4]
ಭೂತಾಂಗಂ ಚ ತತಃ ಶೃಣು[5] ॥ ॥ ೨೦ ॥

ಪಾರ್ಥಿವಂ[6] ಜೀವಸಂಯುಕ್ತಂ[7]
ದ್ವಿತೀಯಸ್ವರಭೂಷಿತವಮ್[8] ।

ಸ್ವಾಹಾಂತವನ್ನಾಗಿಯೂ, ಶಿಖಾಮಂತ್ರವನ್ನು ವಷಡನ್ತವನ್ನಾಗಿಯೂ ಕವಚ ಮಂತ್ರವನ್ನು 'ಹುಂ'ಕಾರಾನ್ತವನ್ನಾಗಿಯೂ ತಿಳಿಯಬೇಕು. ॥ ೧೯ ॥

ನೇತ್ರಮಂತ್ರವು ವೌಷಂಡತವಾಗಿಯೂ ಅಸ್ತ್ರಮಂತ್ರವು ಫಟ್‌ಕಾರಾನ್ತ ವಾಗಿಯೂ ಇರುತ್ತವೆ. ಹೀಗೆ ಶಿವಾಂಗವನ್ನು ನಿರೂಪಿಸಿದ್ದಾಯಿತು. ಇನ್ನು ಭೂತಾಂಗ ವನ್ನು ನಿರೂಪಿಸುತ್ತೇನೆ. ॥ ೨೦ ॥

ಪೃಥಿವೀಬೀಜವಾದ ಲಕಾರದಿಂದ ಕೂಡಿದ ಜೀವವೆಂಬ ಹಕಾರವನ್ನು ದ್ವಿತೀಯ

---

[1] ಇಲ್ಲಿಂದ 'ಬೀಜಮುಚ್ಯತೇ' ವರೆಗೆ—ಪ. ಪುಸ್ತಕದಲ್ಲಿಲ್ಲ.
[2] ವೌಷಣ್ಣೇತ್ರತ್ರಯಂ ವಿದ್ಯಾತ್—ಖ, ಝ.
ವೌಷಣ್ಣೇತ್ರತ್ರ್ಯಯಸ್ಯಾಂತಂ—ಥ.
ವೌಷಣ್ಣೇತ್ರತ್ರಯಂ ಸ್ಯಾತ್ತು—ಧ.
ವೌಷಣ್ಣೇತ್ರತ್ರಯಂ ಸ್ಯಾಚ್ಚ—ಘ, ಠ, ಢ, ಪ
ವೌಷಟ್ ನೇತ್ರತ್ರಯಾಂತಂ ಸ್ಯಾತ್—ಕ, ಗ, ಚ, ಛ, ಜ, ಟ, ಡ, ತ, ಥ, ದ, ಪ, ಬ, ಭ.
[3] ಷಟ್‌ಕಾರಃ ಶಸ್ತ್ರಮಂತ್ರತಃ—ಫ.
[4] ಮಿತ್ಯುಕ್ತಂ—ಗ, ಚ
[5] ಭೂತಾಂಗಾನಿ ತಥೋಚ್ಯತೇ—ಗ, ಚ
ಭೂತಾಂಗಾನಿ ತು ಚೋಚ್ಯತೇ—ಫ.
[6] ವಾಗ್ಭವಂ—ಥ
[7] ಪಾರ್ಥಿವಾಗ್ನೀವ ಸಂಯುಕ್ತಂ—ಥ
ಪಾರ್ಥಿವಂ ಬೀಜಮಿತ್ಯುಕ್ತಂ—ಜ
ಪಾರ್ಥಿವಂ ಬೀಜಸಂಯುಕ್ತ—ಥ
[8] ದ್ವಿತೀಯಂ ಸ್ವರ ಸಂಯುತಂ—ಗ, ಚ
ದ್ವಿತೀಯಃ ಸ್ವರಭೂಷಿತಂ—ಖ (ಪಾ)

ಬಿನ್ದುನಾದ ಸಮಾಯುಕ್ತಂ
ಪ್ರಥಮಂ ಬೀಜಮುಚ್ಯತೇ[1] ॥ ॥ ೨೧ ॥

[2]ಶಿವಾರ್ಣಂ[3] ಜೀವನೋಪೇತಂ
ಚತುರ್ಥ[4]ಸ್ವರಭೂಷಿತಮ್ ।
ಶಿವಶಕ್ತಿಸಮಾಯುಕ್ತಂ
ದ್ವಿತೀಯಂ[5] ಬೀಜಮುಚ್ಯತೇ[6] ॥ ॥ ೨೨ ॥

ಪಂಚಮಂ ಷಷ್ಠಸಂಯುಕ್ತಂ[7]
ಪಂಚಮಾನ್ತ[8]ಕಲಾಯುತಮ್[9] ।
ಆಧಾರಾಧೇಯ ಸಂಯುಕ್ತಂ
ತೃತೀಯಂ[10] ಬೀಜಮುಚ್ಯತೇ ॥ ॥ ೨೩ ॥

ಸ್ವರವಾದ ಆಕಾರ ಮತ್ತು ಅನುಸ್ವಾರಗಳೊಡನೆ ಉದ್ಧರಿಸಿದರೆ 'ಹ್ಲಾಂ' ಎಂಬ ಪ್ರಥಮ ಭೂತಾಂಗಬೀಜವಾಗುತ್ತದೆ. ॥ ೨೧ ॥

ಶಿವಬೀಜವಾದ ಹಕಾರವು, ವರುಣಬೀಜವಾದ ವಕಾರ, ಚತುರ್ಥಸ್ವರವಾದ ಈಕಾರ ಮತ್ತು ಅನುಸ್ವಾರಗಳೊಡನೆ ಸೇರಿ 'ಹ್ವೀಂ' ಎಂಬ ದ್ವಿತೀಯ ಭೂತಾಂಗ ಬೀಜವಾಗುತ್ತದೆ. ॥ ೨೨ ॥

ಪಂಚಮಬೀಜವಾದ ಹಕಾರವು, ಷಷ್ಠಬೀಜವಾದ ರೇಫ, ಷಷ್ಠಸ್ವರವಾದ ಊಕಾರ ಮತ್ತು ಅನುಸ್ವಾರಗಳೊಡನೆ ಸೇರಿ 'ಹ್ರೂಂ' ಎಂಬ ತೃತೀಯಭೂತಾಂಗ ಬೀಜವಾಗುತ್ತದೆ. ॥ ೨೩ ॥

---

1 ಮೀರಿತಂ—ಝ.
2 ಈ ಪದ್ಯ—ಫ. ಪುಸ್ತಕದಲ್ಲಿಲ್ಲ
3 ಶಿವಾಂಗಂ—ತ.
4 ಚತುರ್ಥಂ—ಘ, ದ
5 ದ್ವಿತೀಯಾಂ—ಘ.
6 ಜೀವ ಉಚ್ಯತೇ—ಥ, ದ
ಬೀಜಮೀರಿತಂ—ಝ.
7 ಮಂತ್ರಸಂಯುಕ್ತಂ—ಫ.
8 ಪಂಚಮಾಂತಂ—ಠ.
ಪಂಚಮಾತ್ರ—ಫ.
9 ಕಲಾನ್ವಿತಂ—ಪಿ, ಠ
10 ದ್ವಿತೀಯಂ—ಫ.

ಭೂತಾಂತಮನಿಲೋಪೇತಂ[1]
ಪಂಚಸಪ್ತಕಲಾನ್ವಿತಮ್ ।
ಪರಾಪರಸಮಾಯುಕ್ತಂ
ಚತುರ್ಥಂ ಬೀಜಮುಚ್ಯತೇ ॥ ॥ ೨೪ ॥

ತತ್ತ್ವಾಂತಂ[2] ತತ್ತ್ವಸಂಯುಕ್ತಂ
ಕಲಾನ್ತೇನ[3] ಸಮನ್ವಿತಮ್[4] ।
ಕಾರ್ಯಕಾರಣಸಂಯುಕ್ತಂ
ಪಂಚಮಂ ಬೀಜಮುಚ್ಯತೇ[5] ॥ ॥ ೨೫ ॥

ಶಕ್ತ್ಯಂತಂ ಶಿವಸಂಯುಕ್ತಂ
ಆದಿಬೀಜಂ[6] ಕಲಾನ್ವಿತಮ್[7] ।

ಭೂತಾಂತಬೀಜವಾದ ಹಕಾರವು, ಅನಿಲಬೀಜವಾದ ಯಕಾರ. ಹನ್ನೆರಡನೆಯ ಸ್ವರವಾದ ಐಕಾರ ಮತ್ತು ಅನುಸ್ವಾರಗಳೊಡನೆ ಸೇರಿ ಹ್ಯೈಂ ಎಂಬ ಚತುರ್ಥ ಭೂತಾಂಗಬೀಜವಾಗುತ್ತದೆ. ॥ ೨೪ ॥

ತತ್ತ್ವಾಂತವಾದ ಹಕಾರವು, ತತ್ತ್ವವಾದ ಹಕಾರ ಅಂತ್ಯಸ್ವರವಾದ ಔಕಾರ ಮತ್ತು ಅನುಸ್ವಾರಗಳೊಡನೆ ಸೇರಿ 'ಹೌಂ' ಎಂಬ ಪಂಚಮಭೂತಾಂಗಬೀಜವಾಗುತ್ತದೆ. ॥ ೨೫ ॥

ಎರಡು ಹಕಾರಗಳನ್ನು ಉದ್ಧರಿಸಿ ಪ್ರಥಮಹಕಾರಕ್ಕೆ ಅಕಾರವನ್ನೂ ಅನುಸ್ವಾರವನ್ನೂ ಸೇರಿಸಿದರೆ ಹಂಹ್ ಎಂಬ ಷಷ್ಠಭೂತಾಂಗಬೀಜವಾಗುತ್ತದೆ. ॥ ೨೬ ॥

---

1 ಥೇಜನಾನ್ತಮನಿಲೋಪೇತಂ—ಪ
ಭೂತಾಂತಮನಲೋಪೇತಂ—ಫ.
2 ತತ್ತ್ವಾನಾಂ—ಫ.
3 ಚತುರ್ದಶ—ಖ, ಝ.
4 ಕಲಾನ್ವಿತಂ—ಖ, ಝ. ಸಮನ್ವಿತಂ—ಫ.
5 ಬೀಜಮೀರಿತಂ—ಝ.
6 ಬೀಜ—ಧ. ಶಕ್ತಿ—ಫ.
7 ಕಲಾಯುತಂ—ಫ.

ತಯೋರ್ಮಧ್ಯಗತೋ[1]ಬಿನ್ದುಃ[2]
ಷಷ್ಠಂ[3] ಬೀಜಮುದಾಹೃತಮ್[4] ॥ ॥ ೨೬ ॥

ಪಂಚಭಿರ್ಗ್ರನ್ಥಿಭಿರ್ಯುಕ್ತಂ[5]
ಭೇದ್ಯಮಂತ್ರೇಣ[6] ಚಾತ್ಮನಿ ।
ಏವಂ ಭೂತಾಂಗಮಾಖ್ಯಾತಂ
ಕೂಟಾಂಗಾನಿ ತತಃ ಶೃಣು ॥ ॥ ೨೭ ॥

ಪ್ರಥಮಸ್ಯ[7] ದ್ವಿತೀಯಂ ತು[8]
ಚತುರ್ಥಂ ಪಂಚಮಾಂತಕಮ್[9] ।

ಅಸ್ತ್ರಮಂತ್ರ ಮತ್ತು ಪಂಚಭೂತಗ್ರಂಥಿಗಳಿಂದ ಕೂಡಿದ ಈ ಭೂತಾಂಗ ಬೀಜವು ಆತ್ಮನಲ್ಲಿರುತ್ತದೆ. ಭೂತಾಂಗವನ್ನು ಹೇಳಿದ್ದಾಯಿತು. ಇನ್ನು ಕೂಟಾಂಗವನ್ನು ಕೇಳು. ॥ ೨೭ ॥

ಸ್ವರವರ್ಗದ ದ್ವಿತೀಯಾಕ್ಷರವಾದ ಆಕಾರ, ಚತುರ್ಥಾಕ್ಷರವಾದ ಈಕಾರ, ಷಷ್ಠಾಕ್ಷರವಾದ ಊಕಾರ, ದ್ವಾದಶಾಕ್ಷರವಾದ ಐಕಾರ ಚತುರ್ದಶಾಕ್ಷರವಾದ

---

1 ಮಧ್ಯೇಗತಂ—ಕ.
ಮಧ್ಯಗತಂ—ಘ, ಛ, ಜ, ಝ, ಟ, ಠ, ಢ, ತ, ಥ, ದ
2 ಬಿಂದು—ಕ, ಘ, ಛ, ಟ, ಠ, ಢ, ತ, ದ, ಪ
ಬಿಂದುಂ—ಝ, ಥ.
3 ಷಷ್ಠಮಂ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ
ಪಂಚಮಂ—ಥ
4 ಬೀಜಮುಚ್ಯತೇ—ಕ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ
5 ಪಂಚವರ್ಗಾದಿಭಿರ್ಯುಕ್ತಂ—ಪ
ಪಂಚಮಗ್ರಂಥಿ ಸಂಯುಕ್ತಂ—ಢ, ಫ.
6 ಭೇದ್ಯಮಂತ್ರೇಣ—ಚ, ಧ.
ವಿದ್ಯಮಂತ್ರೇಣ— ಪ.
ಶಿವಮಂತ್ರೇಣ—ಛ.
ಚೋಕ್ತಮಂತ್ರೇಣ—ಫ.
7 ಪ್ರಥಮಂ ಸ್ಯಾತ್—ಗ, ಚ, ಛ, ಜ, ಝ
8 ಸ್ಯಾತ್—ಧ, ಚ—ಫ.
9 ಪಂಚಮಾತ್ರಕಂ—ಝ.

ರುದ್ರಾಂತಂ[1] ರುದ್ರತುರ್ಯಾರ್ಣಂ[2]
ಅನ್ತ್ಯಂ ಕೂಟಾಕ್ಷರೇಣ ಯುಕ್[3] ॥ ॥ ೨೮ ॥

ಬಿನ್ದುನಾದಸಮಾಯುಕ್ತಂ
ಕೂಟಾಂಗಮಿದಮೀರಿತಮ್[4] ।
[5]ಏವಂ ಕೂಟಾಂಗಮಿತ್ಯುಕ್ತಂ
ವಿದ್ಯಾಂಗಾನಿ ತತಃ ಶೃಣು ॥ ॥ ೨೯ ॥

[6]ಪ್ರಕಾರಂ ತು ಸಮುದ್ಧೃತ್ಯ
ತಕಾರಂ ತು ಸಮುದ್ಧರೇತ್[6] ।

ಔಕಾರ ಮತ್ತು ಅಂತ್ಯದ ವಿಸರ್ಗವನ್ನು ಕೂಟಾಕ್ಷರವಾದ ಕ್ಷಕಾರದೊಡನೆ ಉದ್ಧರಿಸಿ— ॥ ೨೮ ॥

ಅನುಸ್ವಾರವನ್ನು ಸೇರಿಸಿದರೆ ಕ್ಷಾಂ ಕ್ಷೀಂ ಕ್ಷೂಂ ಕ್ಷೈಂ ಕ್ಷೌಂ ಕ್ಷಃ ಎಂದು ಕೂಟಾಂಗಬೀಜಗಳಾಗುತ್ತವೆ. ಇನ್ನು ವಿದ್ಯಾಂಗವನ್ನು ಕೇಳು. ॥ ೨೯ ॥

---

1 ರುದ್ರಾಂಗಂ—ಫ.
2 ರುದ್ರತುರ್ಯಂ ಚ—ಗ, ಛ, ಜ.
ರುದ್ರಮಧ್ಯಂ ಚ—ಧ.
ರುದ್ರ ತುರ್ಯಂ ತು—ಫ.
3 ಮಂತ್ರಕೂಟಾಕ್ಷರೇಣ ಯತ್—ಜ, ಘ
ಮಂತ್ರಕೂಟಾಕ್ಷರೇಣ ಯುತ್—ಕ
4 ಕೂಟಾಂಗಾನಿ ಸ್ಫುಟಾನಿ ವೈ—ಫ.
5 ಈ ಅರ್ಧಪದ್ಯ—ಫ. ಪುಸ್ತಕದಲ್ಲಿಲ್ಲ.
6 ಪ್ರಾಕಾರಂ—ಕ, ಖ, ದ, ಪ
ಇಲ್ಲಿಂದ 'ಸ್ವಾಹಾಕಾರ ಸಮಾಯುತಂ'ವರೆಗಿನ ಭಾಗವು—ಧ. ಪುಸ್ತಕದಲ್ಲಿಲ್ಲ.
ಗ, ಚ ಪುಸ್ತಕಗಳಲ್ಲಿ—ಇದಾದ ನಂತರ
'ನಕಾರಪೂರ್ವಕಂ ಶಸ್ತಂ ಹಕಾರಂತು ಸಮುದ್ಧರೇತ್' ಎಂಬ ಅಧಿಕ ಅರ್ಧಪದ್ಯ ಇದೆ.

ದಕಾರೋಪೇತರಾಕಾರಂ[1]
ಯಕಾರಂ ಚ ನಮೋಽಂತಕಮ್[2] ॥ ॥ ೩೦ ॥

ಏವಂ ವಿದ್ಯಾಂಗಮಾಖ್ಯಾತಂ[3]
ಪ್ರಾಕಾರಂ ಚ[4] ಸಮುದ್ಧರೇತ್ ।
ನಕಾರಂ ಚೈವ ವಾಕಾರಂ[5]
ತಕಾರೇಣ ಮಕಾರಯುಕ್[6] ॥ ॥ ೩೧ ॥

[7]ನಮೋಽಂತಂ ತು[8] ಸಮುದ್ಧೃತ್ಯ
ಸ್ವಾಹಾಂತಂ ಶಿರಸಾ[9] ವಿದುಃ[10] ।

---

[1] ದಕಾರೋಪೇತ ರಂ ಕಾರಂ—ಜ
ದಕಾರೋಪೇತ ರಕಾರಂ—ಘ
ದಕಾರೋಪೇತ ವಾಕಾರಂ—ಛ
ತಕಾರೋಪೇತ ಏಕಾರಂ—ಝ.

[2] ಈ ಶ್ಲೋಕದ ಸ್ಥಾನದಲ್ಲಿ—ಫ. ಪುಸ್ತಕದಲ್ಲಿ
'ಪ್ರಕಾರಂ ಚ ಸಮುದ್ಧೃತ್ಯ
ತಕಾರಂ ಚ ದಕಾರಕಂ ।
ತಕಾರಂ ಚ ಯಕಾರಂ ಚ
ನಮೋಽಂತಂ ಪ್ರತಿಕಲ್ಪ್ಯತಾಂ ॥" ಎಂದಿದೆ

[3] ಏವಂ ವಿದ್ಯಾ ಸಮಾಖ್ಯಾತಂ—ಫ.

[4] ಪ್ರಕಾರಂ—ಗ, ಚ, ಜ, ಝ
ಪಕಾರಂ—ಫ.

[5] ನಕಾರಂ ಚ ಯವಾಕಾರಂ—ಫ.
ನಕಾರಂ ಚೈವ ಮಾಕಾರಂ—ಜ

[6] ಯಕಾರಂ ಚ ನಮೋಽಂತಕಂ—ಗ, ಚ, ಝ.
ತಕಾರೇಣ ಮಕಾರಕಃ—ಫ.

[7] ಇದಕ್ಕಿಂತ ಹಿಂದೆ—ಗ, ಚ, ಜ, ಝ ಪುಸ್ತಕಗಳಲ್ಲಿ
"ಏವಂ ವಿದ್ಯಾಂಗಮಾಖ್ಯಾತಂ
ತಕಾರೇಣ ಮಕಾರಯುಕ್" ಎಂಬ ಅರ್ಧವಿದೆ.

[8] ನಮೋಂತೇನ—ಫ.

[9] ಶಿರಸೋ—ಝ, ತ.
ಶಿರಸೇ—ಫ.

[10] ಭವೇತ್—ತ

ಶಕಾರಂ[1] ಚೈವ ವಾಕಾರಂ
ಫಟ್ ಚ ಹುಂಕಾರಮೇವ ಚ[2] ॥ ॥ ೩೨ ॥

ವಷಟ್ಕಾರಸಮಾಯುಕ್ತಂ
ಶಿಖಾಬೀಜಮುದಾಹೃತಮ್ ।
ಶಿಕಾರಂ ಚೈವ ವಾಕಾರಂ
ತಕಾರೇಣ[3] ಮಕಾರಯುಕ್ ॥ ॥ ೩೩ ॥

[4]ತಕಾರಂ ಚ ಮಕಾರಂ ಚ
ಹಕಾರಂ ಚ[5] ಸಮುದ್ಧರೇತ್ ।
ತಕಾರಂ[6] ಚ ಜಕಾರಂ[7] ಚ
ಅನುಸ್ವಾರಂ ಚ ಸರ್ವತಃ ॥ ॥ ೩೪ ॥

ಜಕಾರೇ[8] ತು ಸಮಾಯುಕ್ತಂ
ಮಕಾರಂ ಚ ಪಕಾರಕಮ್[9] ।

---

[1] ವಕಾರಂ—ತ

[2] ಫಟ್ಕಾರಂ ಹುಂಕಾರಮೇವ ಚ—ಕ, ಘ, ಛ, ಜ, ಟ, ಠ, ಡ, ಢ, ತ, ಥ, ದ
ವಷಡ್ಢುಂಕಾರಮೇವ ಚ—ಖ.
ಷಟ್ ಚ ಹುಂಕಾರಮೇವ ಚ – ಝ.
ಫಟ್ಕಾರಂ ಹುಂ ತಥೈವ ಚ—ಫ.

[3] ರಕಾರೇಣ—ಪ.

[4] ಇದಕ್ಕೆ ಹಿಂದೆ— ಛ. ಪುಸ್ತಕದಲ್ಲಿ
'ದೇಕಾರಂಚ ಜಕಾರಂಚ ನಕಾರಂಚ ಮಕಾರಯುಕ್' ಎಂಬ ಅಧಿಕ ಅರ್ಧವಿದೆ.

[5] ಹಕಾರೇಣ—ಪ

[6] ತೇಕಾರಂ—ಘ, ಛ, ತ, ಥ, ಫ.

[7] ಮಕಾರಂ—ಛ, ಜ, ಗ, ಚ.
ದಕಾರಂ—ಥ.
ರಕಾರಂ—ಫ.

[8] ಝಕಾರೇ—ಗ, ಚ
ತುಕಾರೇ—ಝ

[9] ಫಕಾರಕಂ—ಖ, ಗ, ಚ, ಟ, ಠ, ಢ, ತ, ಥ, ದ,
ಜಂ ಚ ಮಂ ಚ ಪಕಾರಂ ಚ
ರೇಫಂ ಚಾಥ ಶಿಕಾರಕಂ—ಫ.

ತಕಾರಂ ಚ[1] ಶಿಕಾರಂ ಚ
ಮಕಾರಂ ಚ ಸಮುದ್ಧರೇತ್[2] ॥ ॥ ೩೫ ॥

ಆಕಾರಂ[3] ಚ ವಕಾರಂ ಚ[4]
ನಕಾರಂ ಚ ವಕಾರಯುಕ್[5] ।
ವಹ್ನಿಶಿಖಾರ[6]ಸಂಯುಕ್ತಂ
ಯಕಾರಂ ತು[7] ಮಕಾರಯುಕ್ ॥ ॥ ೩೬ ॥

ಯ ಹಕಾರಂ ಪ್ರಕಾರಂ ಚ[8]
ಅನುಸ್ವಾರ ಸಮಾಯುತಮ್[9] ।

---

[1] ರಕಾರಂ ಚ—ಖ, ಘ, ಛ, ಟ, ಠ, ಢ, ತ, ಥ, ದ
ನಕಾರಂ ಚ—ಗ, ಚ
[2] ಈ ಅರ್ಧಪದ್ಯ ಫ. ಪುಸ್ತಕವಲ್ಲಿಲ್ಲ.
[3] ಅಕಾರಂ—ಖ, ಗ, ಘ, ಛ, ಢ, ತ, ಥ.
[4] ಯಕಾರಂ ಚ—ಗ, ಚ.
[5] ತಕಾರಂ ಚ ಮಕಾರಯುಕ್—ಗ, ಚ:
ರಕಾರಂ ಚ ಮಕಾರಯುಕ್—ಪ.
ನಕಾರೇಣ ತಕಾರಕಃ—ಫ.
ಆಕಾರಂ ಚ ಯಕಾರಂ ಚ
ರಕಾರಂ ಚ ಮಕಾರಯುಕ್—ಜ, ಝ.
ರಕಾರಂ ಚ ಮಕಾರಯುತ್—ಕ.
ರಕಾರಂ ಚ ಮಕಾರಕಂ—ಥ.
[6] ಶೇಖರ—ಝ, ಚ.
[7] ಯಕಾರಂ ಚ—ಫ, ಐಕಾರಂ ಚ—ಝ.
[8] ಯೌಕಾರಂ ಕಕಾರಂ ಚ—ಘ, ಟ, ಠ, ಢ, ಥ, ದ
ಯಕಾರಂ ಕಕಾರಂ ಚ—ಪ.
ಯೋಕಾರಂ ಕಕಾರಂ ಚ—ಛ, ತ.
ಐಕಾರಂ ಸಕಾರಂ ಚ—ಗ
ಐಕಾರಂ ಕಕಾರಂ ಚ—ಚ
ಯ ಹಕಾರಂ ಕ್ರಕಾರಂ ಚ—ತ
[9] ಯೌಕಾರಂ ಚ ಸಕಾರಂ ಚ ರಕಾರಂ ಚ ಮಕಾರಯುಕ್—ಝ.
ಯೋಗಂ ಚ ಮನುತಃ ಸ್ವಾರಃ ಕಶ್ಚ ಪಶ್ಚ ವಕಾರಕಃ—ಫ.

[1]ಕಕಾರಂ[2] ಚ ಮಕಾರಂ ಚ
ಪಕಾರಂ ಚ[3] ಶಿಕಾರಕಮ್[4] ॥ ॥ ೩೭ ॥

ಅನುಸ್ವಾರಸಮಾಯುಕ್ತಂ
ಗ್ರಕಾರಂ[5] ಚ ಲಕಾರಕಮ್[6] ।

---

1 ಇಲ್ಲಿಂದ—'ಶಕ್ತ್ಯಂಗಾನಿ ತತಃ ಶೃಣು' (ಶ್ಲೋ-೬೪)ವರೆಗಿನ ಸ್ಥಾನದಲ್ಲಿ—ಘ. ಪುಸ್ತಕದಲ್ಲಿ ಈ ರೀತಿ ಪಾಠವಿದೆ—
ಶಿಶ್ಚ ನ್ಯಸ್ವಾರಸಂಯುಕ್ತೇಃ ಗಶ್ಚ ಲಶ್ಚ ಪುಕಾರಕಃ ।
ಮಶ್ಚ ಅಶ್ಥಾಥ ವಾಕಾರಃ ಹಿಶ್ಚ ಪಿಶ್ಚ ಶಿಕಾರಕಃ ॥
ಲಶ್ಚ ಮಶ್ಚ ತಥಾ ಭಶ್ಚ ಕ್ಷಶ್ಚ ಕ್ಷಪ್ರಶ್ಚ ಕಾರಕಃ ॥
ಪಶ್ಚ ನಶ್ಚ ಕತಾಬನ್ಯಯಶ್ಚ ಪೂರ್ಣಯಸಂಯುತಂ !
ಕಹ ಕಹ ಕಿರಿ ಸಮಾಯುಕ್ತಂ ಸೂಕ್ಷ್ಮ ಸೂಕ್ಷ್ಮ ಸಮಾಯುತಂ ॥
ಊಚ ದಶ್ಚ ನಿಕಾರಶ್ಚ —ಮಶ್ಚ ಉಕಾರಕಃ ।
ಪ್ರಶ್ಚ ವಿಶ್ಚ ನ್ಯಕಾರಶ್ಚ ವ ಚ ಥೈವ ಇಕಾರಕಃ ।
ಫಟ್ಕಾರಸ್ತಂ ಭಯೇತ್ಯೇವ ಸ್ತಂಭಶಬ್ದಸ್ತಥಾಪುನಃ ॥
ಯಶ್ಚ ಉಕಾರ ಫಟ್ಕಾರೋ ವ ಚ ಮ ಸರ್ವರಕ್ಷಣಃ ।
ಪ್ರಶ್ಚ ಸ್ಪೃಶ್ಚ ತಥಾ ರಶ್ಚ ಸ್ಫುಶ್ಚ ರಶ್ಚಾಥಸೋ ರಚ ।
ಸೋರಶ್ಚ ತರತಶ್ಚಾಪಿ ತತಶ್ಚ ಶ್ಚಾಪಿ ಸೂಪ ಚ ॥
ಚಶ್ಚ ದಶ್ಚ ಚ ಕಂಚೈವ ಪ ಚಂಟಪ್ರಚಟಃಪುನಃ ।
ಕಹಶ್ಚಾಪಿ ಕಹಶ್ಚಾಪಿ ವಮುಶ್ಚಾಪಿ ಪುನರ್ವಮಃ ॥
ಸಾತಯಶ್ಚ ಸಾತಯಶ್ಚಾಥ ಹುಂ ಫಟ್ ವಾರಸಮಾಯುತಂ ॥
ಸ್ವರಂ ಚೈವ ಸಮಾಯುಕ್ತಂ ಅಸ್ತ್ರಂ ವ್ಯಾಪ್ಯಾನಿವಾರಕಂ ।
ಓಂಕಾರಶ್ಚೈವ ಹುಂಕಾರಂ ನ್ಯಕಾರಂ ಸವಿಸರ್ಗಕಂ ।
ಲೇಪನಂ ಚೇತಿ ವಿಖ್ಯಾತಂ ವಿದ್ಯಾಂಗಂ....ವಸ್ಥಿತವ್ ॥
2 ಅಕಾರಂ—ಝ
ಮಕಾರಂ—ಕ, ಗ, ಘ, ಚ, ಛ, ಝ, ಟ, ಠ, ಢ, ತ, ಥ, ದ, ಪ.
3 ಫಟ್ಕಾರಂ—ಗ, ಚ, ಝ.
ಥಕಾರಂ—ಖ.
ಸಕಾರಂ—ಢ, ದ
4 ನಿಕಾರಕಂ—ಖ.
5 ಖುಕಾರಂ—ಜ, ಗಕಾರಂ—ಖ, ಝ.
ಲೃಕಾರಂ—ಗ, ಗ್ರಾಕಾರಂ—ಢ, ದ.
6 ಈ ಅರ್ಧಪದ್ಯ—ಪ. ಪುಸ್ತಕದಲ್ಲಿಲ್ಲ.

ರುಕಾರಂ[1] ಚ ಭಕಾರಂಚ[2]
ಮಕಾರೇಣ ಸಮುಚ್ಚಯಮ್ ॥ ॥ ೩೮ ॥

ಅಕಾರಂ[3] ಚೈವ ವಾಕಾರಂ
ಹಕಾರಂ ಚ[4] ಏಕಾರಕಮ್[5] ।
ಶಿಕಾರಂ ಚ ಲಕಾರಂ ಚ[6]
ಮಕಾರಂ ಹಾರಮೇವ ಚ[7] ॥ ॥ ೩೯ ॥

ಕ್ಷಕಾರಂ[8] ಚ ವಕಾರಂ[9] ಚ
ಕಕಾರಂ ಚ ವಿಕಾರಕಮ್[10] ।

---

[1] ಮಕಾರಂ—ಗ, ಚ, ಜ, ಝ.
ಖುಕಾರಂ—ಚ, ಛ.
ರಕಾರಂ—ಥ
[2] ಹಕಾರಂ ಚ—ಚ, ಜ, ಝ
[3] ಕಕಾರಂ—ಥ
[4] ಧಕಾರಂ—ಚ, ಛ.
[5] ಮಕಾರಕಂ—ಜ, ಝ
ಯಕಾರಕಂ—ಛ, ಠ, ಢ. ತ, ದ.
ಯೇಕಾರಕಂ—ಟ
[6] ಅಕಾರಂ ಚ—ಛ.
[7] ಮಕಾರಂ ಚ ಹಕಾರಕಂ—ಝ.
ಹಕಾರಂ ಹಾರಮೇವ ಚ—ಪ.
ಫಕಾರಂ ಹಾರಮೇವ ಚ—ಛ.
[8] ದಕಾರಂ—ಥ
[9] ಜಕಾರಂ—ಗ, ಚ, ಝ.
ಉಕಾರಂ—ಖ.
ವೃಕಾರಂ—ಧ, ಛ, ಟ, ಠ, ಢ, ತ, ದ.
[10] ಅಕಾರಂ ಚ ವಕಾರಕಂ—ಗ
ರಕಾರಂ ಚ ವಿಕಾರಕಂ—ಛ.
ತಕಾರಂ ಚ ವಿಕಾರಕಂ—ಢ, ದ.
ಕಕಾರಂಚ ಏಕಾರಕಂ—ಖ
ಕಕಾರಂ ಚ ವಕಾರಕಂ—ಝ.

ನಕಾರೇಣ ಸಮಾಯುಕ್ತಂ[1]
ಬನ್ಧಶಬ್ದಮುದಾಹೃತಮ್[2] ॥ ॥ ೪೦ ॥

ಪೂರ್ಣಂ ಚೈವ ತು ಪೂರ್ಣಂ ಚ
ಕಹತ್ಕಹ[3] ಸಮಾಯುತಮ್[4] ।
ಕಿರಿ[5] ದ್ವಂದ್ವ[6] ಸಮಾಯುಕ್ತಂ
ಸೂಕ್ಷ್ಮಸೂಕ್ಷ್ಮ ಸಮಾಯುತಮ್ ॥ ॥ ೪೧ ॥

ಈಕಾರಂ[7] ಚ ಏಕಾರಂ[8] ಚ
ರಿಕಾರಿ ಹಾರಮೇವ ಚ[9] ।

---

1 ಸಮಾಯುಕ್ತೋ—ಖ.
2 ಮುದಾಹೃತಃ—ಖ.
3 ಕಹಾಕಹ—ಜ, ಝ.
4 ಕಹಕಹ—ಖ, ಜ, ಫ
ಕಹ ಚೈವ—ಪ.
5 ಪೂರ್ವಂ ಚೈವ ತು ಪೂರ್ವಂ ಚ ಕಹಾಕಹಸಮಾಯುತಂ—ಗ, ಚ.
6 ಕರಿ—ಜ, ಝ
ಗಿರಿ—ಗ, ಚ
7 ದ್ವಂದ್ವಂ—ಫ, ದ.
8 ರಂ ಕಾರಂ—ಪ
ರ್ ಕಾರಂ—ಫ
9 ದಕಾರಂ—ಖ, ಝ. ಉಕಾರಂ—ಘ, ಛ, ಫ, ದ, ಪ.
ಟಿಕಾರಂ—ಟ, ಥ ಮುಕಾರಂ—ತ
10 ರಿಕಾರೋ ಹಾರಮೇವ ಚ—ಖ.
ವಿಕಾರಿ ಹಾರಮೇವ ಚ—ಟ
ಶಿಕಾರೇ ಕಾರಮೇವ ಚ—ಥ
ರಿಕಾರಿ ಹಾರಮೇವ ಚ—ಥ
ರಕಾರಂಚ ದಕಾರಂಚ ನಿಕಾರೇಹಾರಮೇವಚ— ಜ, ಝ.
ರಕಾರಂಚ ಚಕಾರಂಚ ಶಿಕಾರೇಕಾರಮೇವ ಚ—ತ.

ಚಕಾರಂ[1] ಚ ಮಕಾರಂ ಚ
ಏಕಾರಂ ಚ ಪ್ರಕಾರಕಮ್[2] ॥ ॥ ೪೨ ॥

ಷಿಕಾರಂ[3] ಚ ಶ್ಯಕಾರಂ ಚ[4]
ಸ ಷ ಚ್ಚೈವ ಮಕಾರಕಮ್[5] ।
ಷಟ್ಕಾರಂ ಸ್ತಂಭಯಶ್ಚೇತಿ
ಸ್ತಂಭಶಬ್ದಂ ತಥೈವ ಚ[6] ॥ ॥ ೪೩ ॥

---

1 ಫಕಾರಂ—ಗ, ಚ.
ರಿ ಕಾರಂ—ಪ
ಛ ಕಾರಂ—ಝ
2 ಇಕಾರಂ ಚ ಪಕಾರಕಂ—ಗ, ಚ.
ಟಕಾರಂ ಚ ಪಕಾರಕಂ—ಪ, ಫ.
ರಾಕಾರಂ ಚ ಪಕಾರಕಂ—ಟ, ಠ.
3 ವಿಕಾರಂ—ಖ, ಝ.
ಪಿ ಕಾರಂ—ಕ, ಘ, ಛ, ಟ, ಠ, ಢ, ತ, ದ, ಪ
4 ಶಕಾರಂ—ಖ.
ಸ್ಯ ಕಾರಂ—ಥ
ಶಕಾರಂ ಚ ಶಫಟ್ ಚ್ಚೈವ—ಗ, ಚ
5 ಶಕಾಂ ಚ್ಚೈವ ಮಕಾರಂ - ಛ.
ಸಷ ಚ್ಚೈವ ಟುಕಾರಕಂ—ಗ, ಚ
ಸಷ ಚ್ಚೈವ ಡು ಕಾರಕಂ—ಖ, ಘ. ಟ, ಠ, ಢ, ತ, ದ.
ಸಷ ಚ್ಚೈವ ಯುಕಾರಕಂ—ಝ.
ಸಷ ಚ್ಚೈವ ಮುಕಾರಕಂ—ಪ
6 ಫಟ್ಕಾರಃ ಸ್ತಂಭಕಚ್ಚೈವ ಸ್ತಂಭಶಬ್ದಸ್ತಥೈವ ಚ—ಗ, ಚ, ಖ, ಜ,
ಫಟ್ಕಾರಃ ಸ್ತಂಭತಶ್ಚೈವ ಸ್ತಂಭಶಬ್ದಸ್ತಥೈವದ್ಧಂ—ಝ.
ಫಟ್ಕಾರ ಸ್ತಂಭಯೊಶ್ಚೈವ—ಪ.
ಫಟ್ಕಾರ ಸ್ತಂಭಯಶ್ಚೇತಿ—ಟ, ತ, ಪ
ಫಟ್ಕಾರಂ ಸ್ತಂಭಯಶ್ಚೈವ—ಢ, ದ.

ಯಕಾರಂ[1] ಚೈವ ಹುಂಕಾರಂ[2]
ಫಟ್ಕಾರೇಣ[3] ಸಮಾಯುತಮ್ ।
ಏವಂ ಕವಚಮಾಖ್ಯಾತಂ
ಸರ್ವರಕ್ಷಾಕರಂ ಭವೇತ್ ॥ ॥ ೪೪ ॥

[4]ಶಿವಾಸ್ತ್ರಂ ಪಶುಪತ್ಯಸ್ತ್ರಂ[5]
ಬ್ರಹ್ಮಾಸ್ತ್ರಂ ಕ್ಷುರಿಕಾಸ್ತ್ರಕಮ್ ।
ವ್ಯೋಮಾಸ್ತ್ರಮಿತ್ಯ ಘೋರಾಸ್ತ್ರಂ
ಏತದ್ವಿದ್ಯಾಂಗಮೀರಿತಮ್ ॥ ॥ ೪೫ ॥

[6]ಶಿವಾಸ್ತ್ರಮಂತ್ರೋದ್ಧಾರಂ ಚ
ಪ್ರವಕ್ಷ್ಯೇ ಶೃಣು ಷಣ್ಮುಖ ।

ವಿದ್ಯಾಂಗವಾದ ಅಸ್ತ್ರವು ಶಿವಾಸ್ತ್ರ, ಪಾಶುಪತಾಸ್ತ್ರ, ಬ್ರಹ್ಮಾಸ್ತ್ರ, ಕ್ಷುರಿಕಾಸ್ತ್ರ, ವ್ಯೋಮಾಸ್ತ್ರ, ಮತ್ತು ಅಘೋರಾಸ್ತ್ರವೆಂದು ಆರುವಿಧ. ॥ ೪೫ ॥

ಇನ್ನು ಶಿವಾಸ್ತ್ರಮಂತ್ರದ ಉದ್ಧಾರವನ್ನು ಹೇಳುತ್ತೇನೆ. ಶಿವಾಸ್ತ್ರಮಂತ್ರಕ್ಕೆ ಓಂಕಾರವು ಪ್ರಥಮಬೀಜ, ಶಿಕಾರವು ದ್ವಿತೀಯಬೀಜ. ॥ ೪೬ ॥

---

1 ಯಂಕಾರಂ—ಗ, ಚ
2 ಹಂಕಾರಂ—ಕ
ಊ(ಹಂ)ಕಾರಂ—ಗ
ಹೂಂಕಾರಂ—ಘ, ಥ.
ಊಕಾರಂ—ಝ.
3 ಫಟ್‌ಕಾರೇಣ—ಕ, ಟ, ಥ.
4 ಇಲ್ಲಿಂದ 'ಅಘೋರಾಸ್ತ್ರಮಥ ಶೃಣು' (ಶ್ಲೋ. ೫೪)ವರೆಗೆ ಕ, ಖ, ಜ. ಪುಸ್ತಕಗಳಲ್ಲಿಲ್ಲ.
5 ಪಾಶುಪತಾಸ್ತ್ರಂ—ಝ, ಥ.
6 ಶೈವಾಗಮಸಾರದಲ್ಲಿ (1893 Ed. ಆಗಮಿಕ ನಂಜುಂಡದೀಕ್ಷಿತರು) 'ಓಂ ಹ್ರಃ ಶಿವಾಸ್ತ್ರಾಯ ಫಟ್' ಎಂದು ಶಿವಾಸ್ತ್ರಮಂತ್ರವನ್ನು ಬರೆದು, ಟಿಪ್ಪಣಿಯಲ್ಲಿ—'ಓಂ ಹ್ರೌಂ ಅನನ್ತಶಕ್ತಿಧಾಮ್ನೇ ಜ್ಯೋತೀರೂಪಾಯ ಶಿವಾಸ್ತ್ರಾಯ ಫಟ್' ಎಂದು ಪಾಠಾಂತರವನ್ನೂ ನಿರ್ದೇಶಿಸಿದೆ.

ಓಂಕಾರಂ[ರಃ][1]ಪ್ರಥಮಂ ಬೀಜಂ
ಶಿಕಾರಂ [ರಃ] ಚ ದ್ವಿತೀಯಕಮ್ ॥ ॥ ೪೬ ॥

ತೃತೀಯ ಬೀಜಂ ವಾಕಾರಂ [ರಃ]
ಸ್ತ್ರಾಕಾರಂ [ರಃ] ಚ ಚತುರ್ಥಕಮ್ ।
ಪಂಚಮಂ ತು ಯಕಾರಂ [ರಃ] ಸ್ಯಾತ್
ಷಷ್ಠಂ ಫಟ್ಕಾರಮೇ[ಏ]ವ ಚ ॥ ॥ ೪೭ ॥

ಶಿವಾಸ್ತ್ರಮಂತ್ರಃ ಷಡ್ವರ್ಣಃ[2]
ಸರ್ವಸಿದ್ಧಿಪ್ರದಾಯಕಃ ।
ಶಿವಾಸ್ತ್ರಮಂತ್ರಃ ಸಂಪ್ರೋಕ್ತಃ
ಶೃಣು ಪಾಶುಪತಂ ಮನುಮ್[3] ॥ ॥ ೪೮ ॥

ಓಂಕಾರಂ[ಃ] ಪ್ರಥಮಂ ಬೀಜಂ
ಶ್ಲೀಂಕಾರಂ[4][ಃ] ಚ ದ್ವಿತೀಯಕಮ್ ।
ಪಕಾರಂ[ಃ] ಸ್ಯಾತ್ ತೃತೀಯಂ ತು
ಶುಕಾರಂ[ಃ] ಚ[5] ಚತುರ್ಥಕಮ್ ॥ ॥ ೪೯ ॥

ವಾಕಾರವು ತೃತೀಯಬೀಜ, ಸ್ತ್ರಾಕಾರವು ಚತುರ್ಥಬೀಜ, ಯಕಾರವು ಪಂಚಮಬೀಜ, ಫಟ್ಕಾರವು ಷಷ್ಠಬೀಜ. ॥ ೪೭ ॥

ಹೀಗೆ 'ಓಂ ಶಿವಾಸ್ತ್ರಾಯ ಫಟ್' ಎಂಬ ಶಿವಾಸ್ತ್ರಮಂತ್ರದಲ್ಲಿ ಆರುವರ್ಣಗಳಿವೆ. ಈ ಮಂತ್ರವು ಸರ್ವಸಿದ್ಧಿಪ್ರದಾಯಕವಾದುದು. ಶಿವಾಸ್ತ್ರಮಂತ್ರವನ್ನು ನಿರೂಪಿಸಿದ್ದಾಯಿತು. ಇನ್ನು ಪಾಶುಪತಾಸ್ತ್ರವನ್ನು ಕೇಳು. ॥ ೪೮ ॥

ಪಾಶುಪತಾಸ್ತ್ರಕ್ಕೆ ಓಂಕಾರವು ಪ್ರಥಮಬೀಜ, ಶ್ಲೀಂಕಾರವು ದ್ವಿತೀಯಬೀಜ, ಪಕಾರವು ತೃತೀಯಬೀಜ. ಶುಕಾರವು ಚತುರ್ಥಬೀಜ. ॥ ೪೯ ॥

---

1 ಹೌಂಕಾರಂ—ಥ.

2 ಷಟ್ಪ್ರೋಕ್ತಃ—ಥ.

3 ಮನು—ಥ.

4 ಶ್ಲಂಕಾರಂ—ಥ.

5 ಮಕಾರಂ ಚ—ಥ.

ಹುಂಕಾರಂ[ಃ] ಪಂಚಮಂ ಬೀಜಂ
ಫಟ್ಕಾರಂ[ಃ] ಷಷ್ಠಬೀಜಕಮ್ ।
ಏಷ ಪಾಶುಪತಾಸ್ತ್ರಾಖ್ಯಃ
ಮನ್ತ್ರಃ[1] ಷಡ್ವರ್ಣಕೋ ಭವೇತ್ ॥ ॥ ೫೦ ॥

ಪ್ರೋಕ್ತಂ ಪಾಶುಪತಾಸ್ತ್ರಂ ಹಿ[2]
ಬ್ರಹ್ಮಾಸ್ತ್ರಂ ಚ ತತಃ ಶೃಣು ।
ಓಂಕಾರಂ[ಃ] ಪ್ರಥಮಂ ಬೀಜಂ
ಬ್ರಕಾರಸ್ತು[3]ದ್ವಿತೀಯಕಮ್ ॥ ॥ ೫೧ ॥

ಹ್ಮಾಕಾರಂ[ರಃ] ಸ್ಯಾತ್ ತೃತೀಯಂ ತು
ಸ್ತ್ರಾಕಾರಸ್ತು[4] ಚತುರ್ಥಕಮ್ ।
ಯಕಾರಂ[ರಃ] ಪಂಚಮಂ ಬೀಜಂ
ಷಷ್ಠಂ ಫಟ್ಕಾರಕೋ ಭವೇತ್ ॥ ॥ ೫೨ ॥

ಹುಂಕಾರವು ಪಂಚಮಬೀಜ. ಫಟ್ಕಾರವು ಷಷ್ಠಬೀಜ. ಹೀಗೆ 'ಓಂ ಶ್ಲೀಂ ಪಶು ಹುಂ ಫಟ್' ಎಂಬ ಪಾಶುಪತಾಸ್ತ್ರಮಂತ್ರದಲ್ಲಿ ಆರು ವರ್ಣಗಳಿವೆ. ॥ ೫೦ ॥

ಪಾಶುಪತಾಸ್ತ್ರವನ್ನು ಹೇಳಿದ್ದಾಯಿತು. ಇನ್ನು ಬ್ರಹ್ಮಾಸ್ತ್ರವನ್ನು ಕೇಳು. ಬ್ರಹ್ಮಾಸ್ತ್ರಕ್ಕೆ ಓಂಕಾರವು ಪ್ರಥಮಬೀಜ. ಬ್ರಕಾರವು ದ್ವಿತೀಯಬೀಜ. ॥ ೫೧ ॥

ಹ್ಮಾಕಾರವು ತೃತೀಯಬೀಜ. ಸ್ತ್ರಾಕಾರವು ಚತುರ್ಥಬೀಜ. ಯಕಾರವು ಪಂಚಮಬೀಜ. ಫಟ್ಕಾರವು ಷಷ್ಠಬೀಜ. ॥ ೫೨ ॥

---

[1] ಶೈವಾಗಮಸಾರದಲ್ಲಿ (1893 Ed. ಆಗಮಿಕ ನಂಜುಂಡದೀಕ್ಷಿತರು) 'ಓಂ ಶ್ಲಿಂ ಪಶುಂ ಹುಂ ಫಟ್' ಎಂದು ಪಾಶುಪತಾಸ್ತ್ರಮಂತ್ರವನ್ನು ಬರೆದು, ಟಿಪ್ಪಣಿಯಲ್ಲಿ 'ಓಂ ಶ್ಲಿಂ ಪಶು ಹುಂ ಫಟ್' ಎಂದು ಪಾಠಾಂತರವನ್ನು ನಿರ್ದೇಶಿಸಿದೆ.

[2] ಪ್ರೋಕ್ತಃ ಪಾಶುಪತಾಸ್ತ್ರಾಖ್ಯಃ—ಧ.

[3] ಬ್ರಕಾರಂ ತು—ಗ, ಝ, ಧ.

[4] ಸ್ತ್ರಾಕಾರಂ ತು—ಕ, ಖ, ಗ, ಘ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ.

ಅಯಂ ಬ್ರಹ್ಮಾಸ್ತ್ರಮಂತ್ರಶ್ಚ
ಷಡ್ವರ್ಣಃ ಶುಭದೋ ಭವೇತ್ ।
ಬ್ರಹ್ಮಾಸ್ತ್ರಮಂತ್ರಃ ಸಂಪ್ರೋಕ್ತಃ
ಕ್ಷುರಿಕಾಸ್ತ್ರಮಥ ಶೃಣು ॥ ॥ ೫೩ ॥

[1]ಶಿಕಾರಂ[ಃ][2] ಪ್ರಥಮಂ ಬೀಜಂ
ಛಿಕಾರಂ[ಃ] ತು ದ್ವಿತೀಯಕಮ್ ।
ಕ್ಷುಕಾರಃ ಸ್ಯಾತ್ ತೃತೀಯಂ ಚ
ರಿಕಾರಂ[ಃ] ಚ ಚತುರ್ಥಕಮ್ ॥ ॥ ೫೪ ॥

ಕಾಕಾರಂ[ಃ] ಪಂಚಮಂ ಬೀಜಂ
ಸ್ತ್ರಾಕಾರಂ[ಃ] ಷಷ್ಠವರ್ಣಕಮ್ ।
ಯಕಾರಂ[ಃ] ಸಪ್ತಮಂ ಬೀಜಂ
ಫಟ್ಕಾರಂ[ಃ] ಚಾಷ್ಟಮಂ ಭವೇತ್ ॥ ॥ ೫೫ ॥

ಕ್ಷುರಿಕಾಸ್ತ್ರಮನುಶ್ಚಾಷ್ಟ-
ವರ್ಣೋಽಯಂ ಸ್ಯಾದ್ರಸಪ್ರದಃ ।
ಕ್ಷುರಿಕಾಸ್ತ್ರಮನುಃ ಪ್ರೋಕ್ತಃ
ವ್ಯೋಮಾಸ್ತ್ರಂ ಚ ತತಃ ಶೃಣು ॥ ॥ ೫೬ ॥

'ಓಂ ಬ್ರಹ್ಮಾಸ್ತ್ರಾಯಫಟ್' ಎಂಬ ಈ ಬ್ರಹ್ಮಾಸ್ತ್ರಮಂತ್ರದಲ್ಲಿ ಆರುವರ್ಣಗಳಿವೆ. ಇದು ಮಂಗಳಪ್ರದಾಯಕವಾದ ಮಂತ್ರ. ಬ್ರಹ್ಮಾಸ್ತ್ರಮಂತ್ರವನ್ನು ಹೇಳಿದ್ದಾಯಿತು. ಇನ್ನು ಕ್ಷುರಿಕಾಸ್ತ್ರಮಂತ್ರವನ್ನು ಕೇಳು. ॥ ೫೩ ॥

ಕ್ಷುರಿಕಾಸ್ತ್ರಮಂತ್ರಕ್ಕೆ ಶಿಕಾರವು ಪ್ರಥಮಬೀಜ. ಛಿಕಾರವು ದ್ವಿತೀಯಬೀಜ. ಕ್ಷುಕಾರವು ತೃತೀಯಬೀಜ. ರಿಕಾರವು ಚತುರ್ಥಬೀಜ. ॥ ೫೪ ॥

ಕಾಕಾರವು ಪಂಚಮಬೀಜ. ಸ್ತ್ರಾಕಾರವು ಷಷ್ಠಬೀಜ. ಯಕಾರವು ಸಪ್ತಮಬೀಜ. ಫಟ್ಕಾರವು ಅಷ್ಟಮಬೀಜ. ॥ ೫೫ ॥

ಹೀಗೆ 'ಶಿ ಛಿ ಕ್ಷುರಿಕಾಸ್ತ್ರಾಯ ಫಟ್' ಎಂಬ ಕ್ಷುರಿಕಾಸ್ತ್ರಮಂತ್ರದಲ್ಲಿ ಎಂಟು

---

[1] ಇಲ್ಲಿಂದ 'ಅಥಶೃಣು' (ಶ್ಲೋ. ೬೦)ವರೆಗೆ ಥ. ಪುಸ್ತಕದಲ್ಲಿಲ್ಲ.

[2] ಛಿಕಾರಂ—ಗ, ಜ, ಝ.

ಓಂಕಾರಂ[ಃ] ಪ್ರಥಮಂ ಬೀಜಂ
ಮಾಂಕಾರಂ[ಃ] ಚ ದ್ವಿತೀಯಕಮ್ ।
ತೃತೀಯಬೀಜಂ ವಿೀಂಕಾರಂ[ಃ]
ಸರ್ವಕಾರಣಕಾರಣಮ್ ॥ ॥ ೫೭ ॥

ಚತುರ್ಥಬೀಜಂ ಮೂಂಕಾರಂ[ಃ]
ವ್ಯೋಕಾರಂ[ಃ] ಪಂಚಮಂ ಭವೇತ್ ।
ಷಷ್ಠವರ್ಣಂ ಮಕಾರಂ[ಃ] ಚ
ವ್ಯಾಕಾರಂ[ಃ] ಸಪ್ತಮಂ ಭವೇತ್ ॥ ॥ ೫೮ ॥

ಪಿಕಾರಮ[ಶ್ಚಾ]ಷ್ಟಮಂ ಬೀಜಂ
ನೇಕಾರಂ[ಃ] ನವಮಂ ಸ್ಮೃತಂ[ಃ] ।
ಓಂಕಾರಂ[ಃ] ದಶಮಂ ಬೀಜಂ
ವ್ಯೋಮಾಸ್ತ್ರಂ ತು ದಶಾರ್ಣಕಮ್ ॥ ॥ ೫೯ ॥

ವ್ಯೋಮಾಸ್ತ್ರಮಂತ್ರಃ ಸಂಪ್ರೋಕ್ತ
ಶ್ಚಾಘೋರಾಸ್ತ್ರಮಥ ಶೃಣು ।

ವರ್ಣಗಳಿವೆ. ಇದು ರಸಪ್ರದವಾದ ಮಂತ್ರ. ಕ್ಷುರಿಕಾಸ್ತ್ರಮಂತ್ರವನ್ನು ಹೇಳಿದ್ದಾಯಿತು. ಇನ್ನು ವ್ಯೋಮಾಸ್ತ್ರಮಂತ್ರವನ್ನು ಕೇಳು. ॥ ೫೬ ॥

ವ್ಯೋಮಾಸ್ತ್ರಕ್ಕೆ ಓಂಕಾರವು ಪ್ರಥಮಬೀಜ. ಮಾಕಾರವು ದ್ವಿತೀಯಬೀಜ. ವಿೀಂಕಾರವು ತೃತೀಯಬೀಜ. ॥ ೫೭ ॥

ಮೂಂಕಾರವು ಚತುರ್ಥಬೀಜ. ವ್ಯೋಕಾರವು ಪಂಚಮಬೀಜ. ಮಕಾರವು ಷಷ್ಠಬೀಜ. ವ್ಯಾಕಾರವು ಸಪ್ತಮಬೀಜ. ॥ ೫೮ ॥

ಪಿಕಾರವು ಅಷ್ಟಮಬೀಜ. ನೇಕಾರವು ನವಮಬೀಜ. ಓಂಕಾರವು ದಶಮಬೀಜ. 'ಓಂ ಮಾಂ ವಿೀಂ ಮೂಂ ವ್ಯೋಮವ್ಯಾಪಿನೇ ಓಮ್' ಎಂಬ ವ್ಯೋಮಾಸ್ತ್ರಮಂತ್ರದಲ್ಲಿ ಹತ್ತು ವರ್ಣಗಳಿವೆ. ॥ ೫೯ ॥

ವ್ಯೋಮಾಸ್ತ್ರಮಂತ್ರೋದ್ಧಾರವನ್ನು ನಿರೂಪಿಸಿದ್ದಾಯಿತು. ಇನ್ನು ಅಘೋರಾಸ್ತ್ರಮಂತ್ರೋದ್ಧಾರವನ್ನು ನಿರೂಪಿಸುವೆನು. ಸ್ಫುಕಾರ, ರಕಾರ, ಸ್ಫುಕಾರ, ॥ ೬೦ ॥

[1]ಪ್ರಕಾರಂ ಚ ಸ್ಫುಕಾರಂ ಚ
ರಕಾರಂ ಚ ಸ್ಫುಕಾರಕಮ್ ॥ ॥ ೬೦ ॥

ರಕಾರಂ ಚೈವ ವಿನ್ಯಸ್ಯ
ಘೋೀರಂ ಚೈವ ತು ಘೋೀರಕಮ್[2] ।
ತಕಾರಂ ಚೈವ ವಿನ್ಯಸ್ಯ
ರಕಾರಂ ಚೈವ ವಿನ್ಯಸೇತ್[3] ॥ ॥ ೬೧ ॥

ತಕಾರಂ ಚ ನುಕಾರಂ ಚ[4]
ರೂಕಾರಂ ಚ ಪಕಾರಕಮ್ ।

ರಕಾರ, ಘೋೀರ, ಘೋೀರ, ತಕಾರ, ರಕಾರ— ॥ ೬೧ ॥

ತಕಾರ ನುಕಾರ ರೂಕಾರ, ಪಕಾರ, ಚಟಚಟ ಪ್ರಚಟ ಪ್ರಚಟ, ॥ ೬೨ ॥

---

[1] ಇಲ್ಲಿಂದ—'ಹೇತಿರುದಾಹೃತಃ' (ಶ್ಲೋ. ೬೪) ವರೆಗಿನ ಭಾಗದ ಸ್ಥಾನದಲ್ಲಿ—
"ಪ್ರಕಾರಂ ಚ ಸ್ಫುಕಾರಂ ಚ ರಕಾರಂ ಪ್ರಸ್ಫುಕಾರಕಂ ।
ರಕಾರಂಚೈವ ವಿನ್ಯಸ್ಯ ಘೋೀರಂ ಚೈವ ತು ಘೋೀರಕಂ ।
ತಕಾರಂ ಚ ನುಕಾರಂ ಚ ರೂಕಾರಂ ಚ ಪಕಾರಕಂ ।
ಚಟಶ್ಚೈವ ಚಟಶ್ಚೈವ ಪ್ರಚಟಃ ಪ್ರಚಟಸ್ತಥಾ ।
ಕಹಶ್ಚೈವ ಕಹಶ್ಚೈವ ವಮುಶ್ಚೈವ ವಮುಸ್ತಥಾ ॥
ಪೂತಯುಶ್ಚೈವ ಹುಂಫಟ್ ಚ ಸ್ವಾಹಾಕಾರಸಮಾಯುತಂ"—ಗ.
"ಪ್ರಕಾರಂ ಚ ಸ್ಫುಕಾರಂ ಚ ರಕಾರಂ ಚ ಸ್ಫುಕಾರಕಂ ।
ಪ್ರಕಾರಂ ಚೈವ ವಿನ್ಯಸ್ಯ ಘೋೀರಂ ಚೈವ ತು ಘೋೀರಕಂ ।
ತಕಾರಂ ಚೈವ ವಿನ್ಯಸ್ಯ ಮಕಾರಂ ಚೈವ ವಿನ್ಯಸೇತ್ ।
ತಕಾರಂ ಚ ನುಕಾರಂ ಚ ರಕಾರಂ ಚ ಪಕಾರಕಂ
ಪೂತಶ್ಚೈವ ಚ ಹುಂಫಟ್ ಚ ಸ್ವಾಹಾಕಾರಸಮಾಯುತಂ ।
ಸ್ವರೇಣೈವ ತು ಸಂಯುಕ್ತಂ ಮಂತ್ರಭೇದಮುದಾಹೃತಂ ॥"—ಚ. ಎಂದಿದೆ.
[2] ಸ್ಫುಕಾರಂ ಚ ರಕಾರಂ ಚ ಘೋೀರಂಚೈವ ತು ಘೋೀರಕಂ—ಥ.
[3] ಅತಃ ಪರಂ ತಕಾರಂ ಚ ರಕಕಾರಂ ಚ ತಾರಕಂ—ಕ, ಖ, ಘ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಫ.
ಅತಃ ಪರಂ ತಕಾರಂ ಚ ಮಕಾರಂ ಚ ತಕಾರಕಂ—ಧ
[4] ಮಕಾರಂ ಚ—ಧ.

ಚಟಶ್ಚೈವ ಚಟಶ್ಚೈವ
ಪ್ರಚಟಃ[1] ಪ್ರಚಟಸ್ತಥಾ ॥ ॥ ೬೨ ॥

ಕಹಶ್ಚೈವ ಕಹಶ್ಚೈವ
ವಮಶ್ಚೈವ ವಮಸ್ತಥಾ ।
ಘಾತಯ ಘಾತಯ ಬ್ರೂಯಾತ್
ತತೋ ಹುಂ ಫಟ್ ಸಮಾಯುತಮ್ ॥ ॥ ೬೩ ॥

ಸ್ವಾಹಾಶ್ಚೈವ [ಚೈವ] ಸಮಾಯುಕ್ತಂ[2]
ಮಂತ್ರೋ[3] ಹೇತಿರುದಾಹೃತಃ[4] ।
ಏವಂ ವಿದ್ಯಾಂಗಮಾಖ್ಯಾತಂ
ಶಕ್ತ್ಯಂಗಾನಿ ತತಃ ಶೃಣು ॥ ॥ ೬೪ ॥

ಆಧಾರ[5]ಶಕ್ತಿಬೀಜಂ ಚ
ಬಿಂದುನಾದಸಮನ್ವಿತಮ್ ।

ಕಹಕಹ, ವಮವಮ, ಘಾತಯಘಾತಯ, ಹುಂ ಮತ್ತು ಫಟ್‌ಕಾರಗಳನ್ನು ಕ್ರಮವಾಗಿ ಉದ್ಧರಿಸಿ, ॥ ೬೩ ॥

ಸ್ವಾಹಾಕಾರವನ್ನು ಸೇರಿಸಿದರೆ 'ಪ್ರಸ್ಫುರ ಸ್ಫುರ ಘೋರ ಘೋರತರ ತನುರೂಪ ಚಟಚಟ ಪ್ರಚಟಪ್ರಚಟ ಕಹಕಹ ವಮವಮ ಘಾತಯಘಾತಯ ಹುಂ ಫಟ್ ಸ್ವಾಹಾ' ಎಂದು ಅಘೋರಾಸ್ತ್ರಮಂತ್ರವಾಗುತ್ತದೆ. ವಿದ್ಯಾಂಗವನ್ನು ಹೇಳಿದ್ದಾಯಿತು. ಇನ್ನು ಶಕ್ತ್ಯಂಗಗಳನ್ನು ನಿರೂಪಿಸುವೆನು. ॥ ೬೪ ॥

ಆಧಾರಬೀಜವಾದ ಸಕಾರವನ್ನೂ ಶಕ್ತಿಬೀಜವಾದ ಆಕಾರವನ್ನೂ ಉದ್ಧರಿಸಿ

---

1 ಪ್ರಚತಃ—ಥ.
2 ಸ್ವಾಹಾಶ್ಚೈವ ಸಮಾಯುಕ್ತಂ—ಥ
ಸ್ವರೇಣೈವ ಸುಸಂಯುಕ್ತಃ—ಖ. (ಪಾ)
ಸ್ವರೇಣೈವ ತು ಸಂಯುಕ್ತಂ—ಥ
3 ಮಂತ್ರಂ—ಥ.
4 ಹೇತಿರುದಾಹೃತಂ—ಖ. (ಪಾ)
ಏತದುದಾಹೃತಂ—ಥ.
5 ಆಧಾರಂ—ಕ, ಘ, ಟ, ಠ, ಢ, ತ, ಥ, ದ, ಧ.

[1]ಪ್ರಥಮಂ ಶಕ್ತಿಬೀಜಂ ಸ್ಯಾತ್
ಸಾಮಿತೀಬೀಜಮಿತ್ಯಪಿ ॥ ॥ ೬೫ ॥

ಪ್ರಥಮಂ ಬೀಜಮಿತ್ಯುಕ್ತಂ
ದ್ವಿತೀಯಂ ಬೀಜಮುಚ್ಯತೇ[2] ।
ಸೀತಾಭಯುಕ್ ಶಕ್ತಿಬೀಜಂ
ಬಿಂದುನಾದಸಮಾಯುತಮ್[3] ॥ ॥ ೬೬ ॥

[4]ದ್ವಿತೀಯಂ ಬೀಜಮಿತ್ಯುಕ್ತಂ
ತೃತೀಯಂ ಬೀಜಮುಚ್ಯತೇ ।

ಅನುಸ್ವಾರವನ್ನು ಸೇರಿಸಿದರೆ 'ಸಾಂ' ಎಂದು ಪ್ರಥಮಶಕ್ತಿಬೀಜವಾಗುತ್ತದೆ. 'ಈ' ಎಂಬ ಬೀಜವೂ ಶಕ್ತಿಬೀಜ. ॥ ೬೫ ॥

ಇದು ಪ್ರಥಮಶಕ್ತಿಬೀಜ. ಇನ್ನು ದ್ವಿತೀಯ ಶಕ್ತಿಬೀಜವನ್ನು ಹೇಳುತ್ತೇನೆ. ಸಕಾರ ಈಕಾರಗಳನ್ನು ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ ಸೀಂ ಎಂದು ದ್ವಿತೀಯ ಶಕ್ತಿಬೀಜವಾಗುತ್ತದೆ. ॥ ೬೬ ॥

---

1 ಈ ಅರ್ಧಪದ್ಯ—ಕ, ಖ, ಘ, ಛ, ಟ, ಠ. ಢ, ತ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.

2 ಪ್ರಥಮಂ ಬೀಜಮಿತ್ಯುಕ್ತಂ ಪೀತಾಭಂ ಶಕ್ತಿಬೀಜಕಂ—ಖ.
ಪ್ರಥಮಂ ಚೈವ ಮಿತ್ಯುಕ್ತಂ ಪೀತಾಭಂ ಶಕ್ತಿಬೀಜಕಂ—ಠ, ಢ, ದ, ಧ. ಪ.
ಪ್ರಥಮಂ ಚೈವ ಮಿತ್ಯುಕ್ತಂ ರತಾಭಂ ಶಕ್ತಿಬೀಜಕಂ—ಕ, ಘ, ಛ, ಟ.
ಪ್ರಥಮಂ ಚೈವ ಆಧಾರಂ ಶಕ್ತಿಸಂಯುತಂ—ಥ.

3 ಈ ಅರ್ಧಪದ್ಯದ ಸ್ಥಾನದಲ್ಲಿ—ಥ. ಪುಸ್ತಕದಲ್ಲಿ
"ಶಕ್ತಿಂ ಚತುರ್ದಶೋಪೇತಂ ಬಿನ್ದುನಾದಸಮನ್ವಿತಂ ।
ದ್ವಿತೀಯಮಿತಿ ನಿರ್ದಿಷ್ಟಂ ತೃತೀಯಮಧುನೋಚ್ಯತೇ ।
ಶಿವಾದ್ಯಂ ಷಷ್ಠಮೋಪೇತಂ ಬಿನ್ದುನಾಪಸಮನ್ವಿತಂ ।
ತೃತೀಯ ಬೀಜಮಿತ್ಯುಕ್ತಂ ಐಕಾರಂ ಶಕ್ತಿಸಂಯುತಂ ।
ಕಾರ್ಯಕಾರಣ ಸಂಯುಕ್ತಂ ಚತುರ್ಥಂ ಬೀಜಮುಚ್ಯತೇ ।"
ಎಂದಿದೆ.
ಬಿನ್ದುನಾದ ಸಮಾಯುಕ್ತಂ ದ್ವಿತೀಯಂ ಬೀಜಮುಚ್ಯತೇ—ಕ, ಖ, ಘ, ಛ, ಜ, ಟ, ಠ, ಢ, ತ, ಥ, ದ, ಧ, ಪ.
ಪ್ರಥಮಂ ಶಕ್ತಿಬೀಜಂ ಸ್ಯಾತ್ ಪೀತಾಭಂ ಶಕ್ತಿಬೀಜಕಂ—ಜ.

4 ಈ ಅರ್ಧಪದ್ಯ—ಕ, ಖ, ಘ, ಛ, ಟ, ಠ, ಢ, ತ, ದ, ಧ, ಪ. ಪುಸ್ತಕಗಳಲ್ಲಿಲ್ಲ.

[1]ಊಕಾರಯುಕ್ ಶಕ್ತಿಬೀಜಂ[2]
ಬಿಂದುನಾದಸಮನ್ವಿತಂ ॥ ॥ ೬೭ ॥

ತೃತೀಯಂ ಬೀಜಮಿತ್ಯುಕ್ತಂ[3]
ಚತುರ್ಥಂ ಬೀಜಮುಚ್ಯತೇ[4] ।
[5]ಶಕ್ತ್ಯರ್ಣಂ ವಾಗ್ಭವೋಪೇತಂ
ಕಾರ್ಯಕಾರಣಸಂಯುತಮ್[6] ॥ ॥ ೬೮ ॥

[7]ಚತುರ್ಥಂ ಬೀಜಮಿತ್ಯುಕ್ತಂ
ಪಂಚಮಂ ಬೀಜಮುಚ್ಯತೇ ।

ಇದು ದ್ವಿತೀಯಶಕ್ತಿಬೀಜ. ಈಗ ತೃತೀಯ ಶಕ್ತಿಬೀಜವನ್ನು ನಿರೂಪಿಸುತ್ತೇನೆ. ಸಕಾರ ಊಕಾರಗಳನ್ನು ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ ಸೂಂ ಎಂದು ತೃತೀಯಶಕ್ತಿಬೀಜವಾಗುತ್ತದೆ. ॥ ೬೭ ॥

ತೃತೀಯಶಕ್ತಿ ಬೀಜವನ್ನು ವಿವರಿಸಿದ್ದಾಯಿತು, ಈಗ ಚತುರ್ಥಶಕ್ತಿ ಬೀಜವನ್ನು ಹೇಳುತ್ತೇನೆ, ಸಕಾರ ಐಕಾರಗಳನ್ನು ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ 'ಸೈಂ' ಎಂದು ಚತುರ್ಥಶಕ್ತಿ ಬೀಜವಾಗುತ್ತದೆ. ॥ ೬೮ ॥

ಇದು ಚತುರ್ಥಶಕ್ತಿಬೀಜದ ಉದ್ಧಾರ, ಇನ್ನು ಪಂಚಮಶಕ್ತಿಬೀಜದ

---

1 ಈ ಅರ್ಧಪದ್ಯ—ಜ. ಪುಸ್ತಕದಲ್ಲಿಲ್ಲ.
2 ಊಕಾರಂ ಶಕ್ತಿಬೀಜಂ ಚ—ಖ, ಘ, ಛ, ಟ, ಥ.
ಊಕಾರಂ ಶಕ್ತಿಬೀಜಂ ಚ—ಕ, ಠ, ಢ, ತ, ಥ, ದ, ಧ.
ಷಕಾರಂ ಶಕ್ತಿಬೀಜಂ ಚ—ಪ.
3 ಬೀಜಂ ಸ್ಯಾತ್—ಬ
4 ಐಕಾರಂ ಶಕ್ತಿಸಂಯುತಂ—ಗ, ಚ.
5 ಈ ಅರ್ಧಪದ್ಯ—ಥ, ಪುಸ್ತಕದಲ್ಲಿಲ್ಲ
6 ಕಾರ್ಯಕಾರಣಸಂಯುಕ್ತಂ ಚತುರ್ಥಂ ಬೀಜಮುಚ್ಯತೇ—ಕ, ಘ, ಛ, ಟ, ಠ, ಢ, ತ, ಥ, ದ.
ಐಕಾರಂ ಶಕ್ತಿ ಸಂಯುಕ್ತಂ ಕಾರ್ಯಕಾರಣ ಸಂಯುತಂ—ಪ.
7 ಈ ಅರ್ಧಪದ್ಯ—ಕ, ಘ, ಛ, ಚ, ಟ, ಠ, ಢ, ತ, ಥ, ದ. ಪುಸ್ತಕಗಳಲ್ಲಿಲ್ಲ.

ಶಕ್ತಿಶ್ಚತುರ್ದಶೋಪೇತಾ[1]
ಶಿವಶಕ್ತಿಸಮಾಯುತಾ[2] ॥ ॥ ೯ ॥

ಪಂಚಮಂ[3] ಬೀಜಮಿತ್ಯುಕ್ತಂ[4]
ಷಷ್ಠಂ ಬೀಜಮಥೋಚ್ಯತೇ[5]
ಸ್ವರಾಂತಂ ಶಕ್ತಿಸಂಯುಕ್ತಂ
ವರ್ಣಂ ಚೈವ [ವರ್ಣೇನೈವ] ತು ಸಂಯುತಮ್[6] ॥ ೨೦ ॥

ಏವಂ[7] ಶಕ್ತ್ಯಂಗಮಾಖ್ಯಾತಂ
ಸಾಮಾನ್ಯಾಂಗಮಥೋಚ್ಯತೇ ।

ಉದ್ಧಾರವನ್ನು ಹೇಳುತ್ತೇನೆ. ಸಕಾರವನ್ನು ಔಕಾರ ಮತ್ತು ಅನುಸ್ವಾರಗಳೊಡನೆ ಉದ್ಧರಿಸಿದರೆ ಸೌಂ ಎಂದು ಪಂಚಮ ಶಕ್ತಿ ಬೀಜವಾಗುತ್ತದೆ. ॥ ೯ ॥

ಇದು ಪಂಚಮ ಶಕ್ತಿ ಬೀಜದ ನಿರೂಪಣೆ, ಇನ್ನು ಷಷ್ಠ ಶಕ್ತಿ ಬೀಜವನ್ನು ಹೇಳುತ್ತೇನೆ. ಸಕಾರವನ್ನು ಅಕಾರ ಮತ್ತು ವಿಸರ್ಗಗಳೊಡನೆ ಉದ್ಧರಿಸಿದರೆ ಸಃ ಎಂದು ಷಷ್ಠಶಕ್ತಿ ಬೀಜವಾಗುತ್ತದೆ. ರೇಫರಹಿತವಾದ ಸಾಂ ಸೀಂ ಸೂಂ ಸೈಂ ಸೌಂ ಸಃ ಎಂಬ ಬೀಜಗಳು ತಾಂತ್ರಿಕ ಶಕ್ತಿ ಬೀಜಗಳು, ಇವು ರೇಫ ಸಹಿತವಾದ ವೈದಿಕ ಶಕ್ತಿ ಬೀಜಗಳಾಗುತ್ತವೆ. ॥ ೨೦ ॥

ಇಲ್ಲಿಗೆ ಶಕ್ತ್ಯಂಗ ಬೀಜಗಳ ಉದ್ಧಾರವು ಮುಗಿಯಿತು. ಇನ್ನು ಸಾಮಾನ್ಯಾಂಗ

---

[1] ಪೇತಂ—ಕ, ಗ, ಘ, ಜ, ಛ, ಜ, ಝ, ಟ, ಠ, ಢ, ತ, ಥ, ದ, ಧ, ಪ.
[2] ಸಮಾಯುತಂ—ಕ, ಗ, ಘ, ಛ, ಛ, ಜ, ಝ, ಟ, ಠ, ಢ, ತ, ಥ, ದ, ಧ, ಪ.
[3] ಪಂಚ—ಛ, ತ.
[4] ಶಕ್ತಿರಿತ್ಯುಕ್ತಂ—ಪ.
ಬೀಜಮಾಖ್ಯಾತಂ—ಕ, ಖ, ಘ, ಟ, ಠ, ಡ, ಢ, ದ, ಧ.
ಬೀಜ ಸಮಾಖ್ಯಾತಂ—ಛ, ತ.
[5] ಸ್ವರಾಂತರ ಶಕ್ತಿ ಸಂಯುತಂ—ಕ, ಖ, ಘ, ಫ, ಟ, ಠ, ಢ. ತ, ಥ, ದ, ಧ. ತ, ಥ,
ಷಷ್ಠಮಂ ಬೀಜಮುಚ್ಯತೇ—ಪ.
[6] ವರ್ಣಂಚೈವ ತು ಸಂಯುಕ್ತಂ ಷಷ್ಠಕಂ ಬೀಜಮುಚ್ಯತೇ—ಖ.
ವರ್ಣಂ ಚೈವ ತು ಸಂಯುಕ್ತಂ ಷಷ್ಠಮಂ ಬೀಜಮುಚ್ಯತೇ—ಘ, ಛ, ಟ, ಠ, ಢ, ದ, ಧ.
[7] ಏತೇ—ಕ, ಘ, ಛ, ಟ, ಠ, ಢ, ಥ, ದ.

[1]ಆದಿವರ್ಗೇಽಶ್ವಿನೌ ವೇದಾಃ
ರಸೋ ಭಾನುರ್ಮನುಸ್ತಥಾ[2] ॥ ॥ ೭೧ ॥

ಷೋಡಶಾರ್ಣಂ ಷಡೇತೇ ಚ[3]
ಸಾಮಾನ್ಯಾಂಗಮಿತೀರ್ಯತೇ[4] ।
ಬ್ರಹ್ಮವಿಷ್ಣು[5]ಸುರೇಂದ್ರಾಶ್ಚ[6]
ಆ[ಹ್ಯಾ]ದಿತ್ಯೇಂದು ಗುಹಾಸ್ತಥಾ ॥ ॥ ೭೨ ॥

ಮದನಕ್ಷೇತ್ರ[7]ವಿಘ್ನೇಶಾ-
ಶ್ಚಾಷ್ಟ[8]ಮೂರ್ತಿರ್ವಸು[9]ಸ್ತಥಾ ।

ಗಳನ್ನು ನಿರೂಪಿಸುತ್ತೇನೆ. ಸ್ವರವರ್ಗದ ಆಕಾರ, ಈಕಾರ, ಊಕಾರ, ಐಕಾರ, ಔಕಾರ, ॥ ೭೧ ॥

ಮತ್ತು ವಿಸರ್ಗವೆಂಬ ಆರು ವಿಕೃತಿವರ್ಣಗಳು ಸರ್ವದೇವತಾಮಂತ್ರಗಳಿಗೂ ಸಾಧಾರಣವಾದುದರಿಂದ ಸಾಮಾನ್ಯಾಂಗಗಳೆನಿಸುತ್ತವೆ, ಬ್ರಹ್ಮಾ ವಿಷ್ಣು ಇಂದ್ರ ಸೂರ್ಯ, ಚಂದ್ರ, ಷಣ್ಮುಖ— ॥ ೭೨ ॥

ಮನ್ಮಥ ಕ್ಷೇತ್ರಪಾಲ ವಿಘ್ನೇಶ ಭವಾದ್ಯಷ್ಟಮೂರ್ತಿಗಳು ಧರಾದ್ಯಷ್ಟವಸುಗಳು

---

[1] ಈ ಅರ್ಧಪದ್ಯದ ಸ್ಥಾನದಲ್ಲಿ ಝ. ಪುಸ್ತಕದಲ್ಲಿ—
"ಆದಿವರ್ಗೇ ದ್ವಿತೀಯಾರ್ಣಂ ಚತುರರ್ಣಮನಂತರಂ ।
ಷಷ್ಠವರ್ಣಂ ದ್ವಾದಶಾರ್ಣಂ ತಚ್ಚತುರ್ದಶವರ್ಣಕಂ ।
ಷೋಡಶಾರ್ಣಂ ಷಡೇತೇ ಚ ಸಾಮಾನ್ಯಂಗಮಿತೀರ್ಯತೇ''
ಎಂದಿದೆ.

[2] ವೇದರಸೌ ಭಾನುಮನುಸ್ತಥಾ— ಗ, ಚ.

[3] ಷೋಡಶಶ್ಚೇತಿ ಷಡ್ವರ್ಣಾ :— ಟ. ಥ.
ಷೋಡಶಂ ಚೈವ ಷಡ್ವರ್ಣಾ ;— ಢ. ತ. ದ. ಧ.
ಷೋಡಶಂ ಚೇತಿ ಷಡ್ವರ್ಣ— ಕ. ಖ. ಘ. ಛ. ಟ.

[4] ಮಥೋಚ್ಯತೇ—ಧ.
ಮಿತೀರಿತಂ — ಥ.

[5] ಬ್ರಹ್ಮವಿಷ್ಣೂ— ಪ.

[6] ಸುರೇಂದ್ರಶ್ಚ— ಕ. ಘ, ಪ.

[7] ಮದನೋ ಕ್ಷೇತ್ರ — ಕ, ಘ, ಛ, ಛ, ಟ, ಠ, ಢ, ತ, ಥ, ದ.

[8] ವಿಘ್ನಾಶ್ಚಾಷ್ಟ -- ಥ, ವಿಘ್ನಾಶ್ಚ ಚಾಷ್ಟ – ಕ, ಘ, ಛ, ಛ.

[9] ಮೂರ್ತಿವಸು — ಘ, ಛ, ಟ, ಠ, ಢ, ದ.

ವಿದ್ಯೇಶಾಶ್ಚ ಗಣೇಶಾಶ್ಚ
ಲೋಕಪಾಲಾಯುಧಾನಿ ಚ [1]॥ ॥ ೭೩ ॥

ಸಿದ್ಧವಿದ್ಯಾಧರಾಶ್ಚೈವ
ಗನ್ಧರ್ವಾಪ್ಸರಸಸ್ತಥಾ[2] ।
ಯಕ್ಷಕಿನ್ನರಭೂತಾಶ್ಚ
ಋಷಯ : ಖೇಚರಾಸ್ತಥಾ ॥ ॥ ೭೪ ॥

[3]ಅನ್ಯೇಷಾಂ ಸರ್ವದೇವಾನಾಂ
ಸ್ವನಾಮಾದ್ಯಕ್ಷರಂ ತಥಾ ।
[4]ಸಾಮಾನ್ಯೇಷು[5] ಸಮಾಯೋಗಾತ್[6]
ಬಿನ್ದುನಾದಸಮನ್ವಿತಮ್ ॥ ॥ ೭೫ ॥

ತೇಷಾಮ್ನನಿ ಚೋಕ್ತಾಙ್ಗಾನಿ
ಮೂಲಂ ತದ್ಬೀಜಮುಚ್ಯತೇ[7] ।

ಶ್ರೀಕಣ್ಠಾದ್ಯಷ್ಟ ವಿದ್ಯೇಶ್ವರರು ಉಮಾದಿಗಣೇಶರು ಇಂದ್ರಾದಿ ಲೋಕಪಾಲರು ವಜ್ರಾದ್ಯಾಯುಧಗಳು ॥ ೭೩ ॥

ಸಿದ್ಧರು ವಿದ್ಯಾಧರರು ಗಂಧರ್ವರು ಅಪ್ಸರೆಯರು ಯಕ್ಷರು ಕಿನ್ನರರು ಭೂತಗಳು ಋಷಿಗಳು ಗಗನಗಾಮಿಗಳಾದ ದೇವತೆಗಳು— ॥ ೭೪ ॥

ಮತ್ತು ಉಳಿದ ಎಲ್ಲ ದೇವತೆಗಳ ಹೆಸರಿನ ಆದ್ಯಕ್ಷರವನ್ನು ಆಕಾರಾದಿ ಸಾಮಾನ್ಯಾಂಗ ಮತ್ತು ಅನುಸ್ವಾರಗಳೊಡನೆ ಸೇರಿಸಿದರೆ ಆಯಾ ದೇವತಾ ಬೀಜ ಮಂತ್ರವಾಗುತ್ತದೆ ॥ ೭೫ ॥

ಆಕಾರಾದಿಗಳು ಸಾಮಾನ್ಯಾಂಗಗಳು. ಆಯಾಯ ದೇವತಾಮೂಲಬೀಜವು

---

1 ಲೋಕಪಾಲಾಯುಧಾಸ್ತಥಾ — ಗ. ಚ.
ಲೋಕಪಾಲಾಯುಧ ಸ್ತಥಾ — ಕ, ಘ, ಟ, ಠ, ಥ, ಪ.
2 ಗಂಧರ್ವಾಶ್ಚಾ ಪ್ಸರಾ ಸ್ತಥಾ — ಖ.
3 ಈ ಅರ್ಧಪದ್ಯ — ಪ, ಪುಸ್ತಕದಲ್ಲಿಲ್ಲ.
4 ಈ ಅರ್ಧಪದ್ಯ — ಚ ಪುಸ್ತಕದಲ್ಲಿಲ್ಲ.
5 ಸಾಮಾನ್ಯಂಗೇಷು — ಠ.
ಸಾಮಾತ್ಮೇತು — ಪ.
6 ಸಂಯೋಗಾತ್ — ಠ.
7 ತ ದ್ವೀಭಂ ಮೂಲಮುಚ್ಯತೇ — ಭ

ಸಾಮಾನ್ಯಾಂಗಮಿದಂ ಪ್ರೋಕ್ತಂ
　　ತೇಷಾಂ ವರ್ಣಮ [ಸ್ತು] ಥೋಚ್ಯತೇ ॥ ॥ ೭೬ ॥

ಹೃದಯಂ ಶುಕ್ಲವರ್ಣಂ ಸ್ಯಾತ್
　　ಪೀತವರ್ಣಂ ಶಿರಸ್ತಥಾ[1] ।
ಶಿಖಾಂ [2]ರಕ್ತಸಮಾಂ ವಿದ್ಯಾತ್[3]
　　ಕವಚಂ ಸ್ಫಟಿಕಪ್ರಭಮ್ ॥ ॥ ೭೭ ॥

ನೇತ್ರಂ ಶ್ಯಾಮನಿಭಂ ವಿದ್ಯಾತ್[4]
　　ಕೃಷ್ಣಾಭಂ ಚಾಸ್ತ್ರಮುಚ್ಯತೇ[5] ।
[6]ಏವಂ ಶಿವಾಂಗ ಮಾಖ್ಯಾತಂ
　　ಭೂತಾಂಗಂ ಚ ತಥೋಚ್ಯತೇ[7] ॥ ॥ ೭೮ ॥

ವರ್ಣಭೇದ ಪಟಲದಲ್ಲಿ ಉಕ್ತವಾಗಿದೆ, ಈ ಸಾಮಾನ್ಯಾಂಗ ಮತ್ತು ಮೂಲಬೀಜಗಳ ಸಮಾಯೋಗದಿಂದ ಆಯಾಯ ದೇವತಾ ಬೀಜ ಮಂತ್ರವಾಗುತ್ತದೆ. ಹೇಗೆಂದರೆ– ಕಕಾರವು ಬ್ರಹ್ಮಬೀಜ. ಇದಕ್ಕೆ ಸಾಮಾನ್ಯಾಂಗವನ್ನು ಸೇರಿಸಿದರೆ– ಕಾಂ ಕೀಂ ಕೂಂ ಕೈಂ ಕಾಂ ಕಃ ಎಂದು ಆರು ಬ್ರಹ್ಮಾಂಗ ಬೀಜ ಮಂತ್ರಗಳಾಗುತ್ತವೆ. ಜಕಾರವು ಇಂದ್ರಬೀಜ. ಇದಕ್ಕೆ ಸಾಮಾನ್ಯಾಂಗವನ್ನು ಸೇರಿಸಿದರೆ–ಜಾಂಜೀಂ ಜೂಂ ಜೈಂ ಜೌಂ ಜಃ ಎಂದು ಆರು ಇಂದ್ರಾಂಗ ಬೀಜಮಂತ್ರಗಳಾಗುತ್ತವೆ. ಠಕಾರವು ಚಂದ್ರ ಬೀಜ. ಮಕಾರವು ಮದನಬೀಜ, ಗಕಾರವು ವಿಘ್ನೇಶ್ವರ ಬೀಜ ಇತ್ಯಾದಿ ದೇವತಾ ಬೀಜಗಳಿಂದಲೂ ಆಯಾಯ ದೇವತಾ ಬೀಜ ಮಂತ್ರಗಳನ್ನು ಉದ್ಧರಿಸಿಕೊಳ್ಳಬಹುದು ದೇವತಾ ಬೀಜ ಮಂತ್ರಗಳನ್ನು ಜಪಿಸುವಾಗ ಮೊದಲು ದೇಹನ್ಯಾಸ ಕರನ್ಯಾಸ ಮತ್ತು ಅಂಗನ್ಯಾಸಗಳನ್ನು ಮಾಡಬೇಕು. ಇನ್ನು ಶಿವಾಂಗಾದಿ ಷಡಂಗಗಳ ಸಂಬಂಧವಾದ ಹೃದಯಾದಿ ಮೂವತ್ತಾರು ಅಂಗಗಳ ವರ್ಣಗಳನ್ನು ನಿರೂಪಿಸುತ್ತೇನೆ. ॥ ೭೬ ॥

ಶಿವಾಂಗದ ಹೃದಯದ ವರ್ಣ ಶುಕ್ಲ, ಶಿರಸ್ಸಿನ ವರ್ಣ ಪೀತ, ಶಿಖೆಯ ವರ್ಣ ರಕ್ತ, ಕವಚದ ವರ್ಣ ಸ್ಫಟಿಕ ವರ್ಣ, ॥ ೭೭ ॥

ನೇತ್ರದ ವರ್ಣ ಶ್ಯಾಮ, ಅಸ್ತ್ರದ ವರ್ಣ ಕೃಷ್ಣ, ಇವು ಶಿವಾಂಗಗಳ ವರ್ಣಗಳು ಇನ್ನು ಭೂತಾಂಗಗಳ ವರ್ಣಗಳನ್ನು ಹೇಳುತ್ತೇನೆ. ॥ ೭೮ ॥

---

[1] ಶಿರಸಾ ಪೀತವರ್ಣಕಂ — ಧ.

[2] ಶಿಖಾದಿ — ಚು.

[3–4] ವಿಂದ್ಯಾತ್ — ಕ, ಘ, ಟ, ಠ, ಥ, ತ, ಫ, ದ, ಧ.

[5] ಅಸ್ತ್ರಂ ಕೃಷ್ಣಾಭಮುಚ್ಯತೇ — ಧ.

[6] ಈ ಅರ್ಧಪದ್ಯ – ಥ ಪುಸ್ತಕದಲ್ಲಿಲ್ಲ.

[7] ಭೂತಾಂಗಾನಿ ತಥೋಚ್ಯುತೇ — ಕ, ಗ, ಚ, ಭ.

ಪೀತಂ[1] ಶುಕ್ಲನಿಭಂ[2] ರಕ್ತಂ[3]
ಕೃಷ್ಣಂ ಧೂಮ್ರಂ[4] ಚ ಪಾವಕಮ್ ।
ಭೂತಾಂಗಾನಾಂ ವರ್ಣಭೇದಾಃ[5]
ಸಮಾಸಾತ್ ಕೀರ್ತಿತಾ ಇಮೇ[6] ॥ ॥ ೭೯ ॥

ಶ್ವೇತಂ ರಕ್ತಂ ತಥಾ[7] ನೀಲಂ
ಕುಂಕುಮಂ ಪೀತಮಂಜನಮ್ ।
ಕೂಟಾಂಗಾನಾಂ ತು[8] ವರ್ಣಾಶ್ಚ[9]
ಸಮಾಸಾತ್ ಪರಿಕೀರ್ತಿತಾಃ[10] ॥ ॥ ೮೦ ॥

ಭೂತಾಂಗದ ಹೃದಯದ ವರ್ಣ ಪೀತ, ಶಿರಸ್ಸಿನ ವರ್ಣ ಶುಕ್ಲ, ಶಿಖೆಯ ವರ್ಣ ಅರುಣ, ಕವಚದ ವರ್ಣ ಕೃಷ್ಣ, ನೇತ್ರದ ವರ್ಣ ಧೂಮ, ಮತ್ತು ಅಸ್ತ್ರದ ವರ್ಣ ಅಗ್ನಿವರ್ಣ, ಇವು ಆರು ಭೂತಾಂಗಗಳ ವರ್ಣಗಳು, ॥ ೭೯ ॥

ಕೂಟಾಂಗದ ಹೃದಯದ ವರ್ಣ ಶುಕ್ಲ, ಶಿರಸ್ಸಿನ ವರ್ಣ ರಕ್ತ, ಶಿಖೆಯ ವರ್ಣ ನೀಲ, ಕವಚದವರ್ಣ ಕುಂಕುಮ ವರ್ಣ, ನೇತ್ರದ ವರ್ಣ ಪೀತ ಮತ್ತು ಅಸ್ತ್ರದ ವರ್ಣ ಅಂಜನ ವರ್ಣ, ಇವು ಆರು ಕೂಟಾಂಗಗಳ ವರ್ಣಗಳು. ॥ ೮೦ ॥

---

1 ಶುಕ್ಲಂ — ಕ.
2 ಶುಕ್ಲಾರುಣಂ — ಖ, ಘ, ಛ, ಭ, ಟ, ಠ, ಢ, ತ, ಥ, ದ, ಧ, ಪ.
ಪೀತಾರುಣಂ — ಕ.
3 ಚೈವ — ಕ, ಖ, ಘ, ಛ, ಭ. ಟ, ಠ, ಢ, ತ, ಥ, ದ, ಧ, ಪ.
4 ತಾಮ್ರಂ — ಪ
5 ಚುವರ್ಣಾನಿ — ಗ
ತುವರ್ಣಾನಿ — ಕ, ಖ, ಘ, ಛ, ಭ, ಝ, ಟ, ಠ, ಢ, ಠ. ತ, ಥ, ದ, ಧ, ಪ.
6 ಕೀರ್ತಿತಾನಿ ತು — ಕ, ಖ, ಗ, ತ, ಛ, ಭ, ಝ, ಟ, ಠ, ಡ, ಢ.
ತ, ಥ, ದ, ಪ.
7 ರಕ್ತನಿಭಂ — ಖ. (ಪಾ)
8 ಚು — ಭ
9 ವರ್ಣಾನಿ — ಕ, ಖ, ಗ, ಘ, ಛ ಭ, ಝ, ಟ, ಠ, ಢ, ತ, ಥ, ದ, ಧ, ಪ.
10 ಸಮಾಸಾತ್ ಉದಿತಾನಿ ತು — ಖ.
ಸಮಾಸಾತ್ ಪರಿಕೀರ್ತಿತಂ — ಕ, ಗ, ತ, ಛ, ಝ, ಟ, ಠ, ಢ, ತ, ಥ, ದ.

ಜಪಾ[1]ಕುಸುಮಕುಂದಾಭಂ
ಪಾವಕಂ ಚೇಂದ್ರ[2]ನೀಲಕಮ್ ।
ಸಿಂದೂರಂ[3] ಹರಿತಾಲಂ ಚ[4]
ವಿದ್ಯಾಂಗಾನಾಂ[5] ನಭಸ್ತಥಾ[6] ॥ ॥ ೮೧ ॥

ಪೀತಂ ಶ್ಯಾಮಂ ಥಾ ತಥಾ ರಕ್ತಂ
ಕೃಷ್ಣಂ ಮರಕತಂ ತಥಾ ।
ಏತೈರೇವ ಸವರ್ಣಾನಿ
ಶಕ್ತ್ಯಂಗಾನಾಂ ಕ್ರಮೇಣ ತು[7] ॥ ॥ ೮೨ ॥

ವಿದ್ಯಾಂಗದ ಹೃದಯದ ವರ್ಣ ದಾಸವಾಳಹೂವಿನ ಬಣ್ಣ, ಶಿರಸ್ಸಿನ ವರ್ಣ ಕುಂದಕುಸುಮವರ್ಣ, ಶಿಖೆಯ ವರ್ಣ ಅಗ್ನಿಯ ವರ್ಣ, ಕವಚದ ವರ್ಣ ಇಂದ್ರನೀಲ ಮಣಿಯ ವರ್ಣ, ನೇತ್ರದ ವರ್ಣ ಸಿಂದೂರವರ್ಣ ಮತ್ತು ಅಸ್ತ್ರದ ವರ್ಣ ಹರಿತಾಲದ ವರ್ಣ, ಇವು ಆರು ವಿದ್ಯಾಂಗಗಳ ವರ್ಣಗಳು. ಶಕ್ತ್ಯಂಗದ ಹೃದಯದ ವರ್ಣ ಆಕಾಶದ ವರ್ಣ, ಶಿರಸ್ಸಿನ ವರ್ಣ ಪೀತ ವರ್ಣ, ಶಿಖೆಯ ವರ್ಣ ಶ್ಯಾಮವರ್ಣ ಕವಚದ ವರ್ಣ ರಕ್ತವರ್ಣ, ನೇತ್ರದ ವರ್ಣ ಕೃಷ್ಣವರ್ಣ ಮತ್ತು ಅಸ್ತ್ರದ ವರ್ಣ ಮರಕತ ಮಣಿಯವರ್ಣ ಇವು ಆರು ಶಕ್ತ್ಯಂಗಗಳ ವರ್ಣಗಳು, ॥ ೮೨ ॥

ಸಾಮಾನ್ಯಾಂಗದ ಹೃದಯದ ವರ್ಣ ಸ್ಫಟಿಕ ವರ್ಣ, ಶಿರಸ್ಸಿನ ವರ್ಣ ರಕ್ತವರ್ಣ ಶಿಖೆಯ ವರ್ಣ ಪೀತವರ್ಣ, ಕವಚದ ವರ್ಣ ಶ್ಯಾಮವರ್ಣ, ನೇತ್ರದ ವರ್ಣ

---

[1] ಜಟಾ — ಕ. ಖ.
[2] ಚಂದ್ರ — ಥ.
[3] ಸಿಂಧೂರಂ — ಕ, ಘ, ಠ, ಥ.
[4] ಹರಿತಾ ಭಂ ಚ — ಪ.
[5] ವಿದ್ಯಾಂಗಾನಿ — ಖ.
[6] ನಭಸ್ತಥಾ — ಗ. ಚ. ಭ. ದ.
ಅನುಕ್ರಮಾತ್ — ಥ
[7] ಕ್ರಮಾಣಿ ತು — ಗ, ಚ, ಭ.
ಪ್ರಕೀರ್ತಿತಾ :– ಝ.

ಸ್ಫಟಿಕಂ[1] ರಕ್ತಪೀತಂ ಚ[2]
ಶ್ಯಾಮಂ ಸ್ಯಾತ್[3] ಕಾಂಚನಾರುಣೇ[4] ।
ಏತಾನ್ಯುಕ್ತಾನಿ ವರ್ಣಾನಿ[5]
ಸಾಮಾನ್ಯಾಂಗಮುದೀರಿತಮ್[6] ॥ ॥ ೮೩ ॥

[7]ಚತುರ್ಭುಜಂ [8]ತ್ರಿಣೇತ್ರಂ ಚ
ಜಟಾಮಕುಟಮಣ್ಡಿತಮ್ ।
ಸರ್ವಲಕ್ಷಣಸಂಯುಕ್ತಂ
ಸರ್ವಾಭರಣಭೂಷಿತಮ್ ॥ ॥ ೮೪ ॥

ತ್ರಿಶೂಲಮಭಯಂ ಸವ್ಯೇ
ಕಪಾಲಂ ವರಮನ್ಯಕೇ[9]

ಕಾಂಚನವರ್ಣ, ಮತ್ತು ಆಸ್ರ್ರದ ವರ್ಣ ಅರುಣವರ್ಣ, ಇವು ಆರು ಸಾಮಾನ್ಯಾಂಗಗಳ ವರ್ಣಗಳು, ಸಾಮಾನ್ಯಾಂಗವು ನಿರೂಪಿತವಾಯಿತು, ॥ ೮೩ ॥

ಇನ್ನು ಧ್ಯಾನಾರ್ಹಸ್ವರೂಪದ ನಿರೂಪಣೆ— ಈ ಸ್ವರೂಪವು ನಾಲ್ಕು ಹಸ್ತಗಳನ್ನು ಮೂರು ನೇತ್ರಗಳನ್ನೂ ಹೊಂದಿ ಸರ್ವಲಕ್ಷಣಗಳಿಂದ ಕೂಡಿ ಸಮಸ್ತ ಆಭರಣಗಳಿಂದ ಅಲಂಕೃತವಾಗಿ, ॥ ೮೪ ॥

ದಕ್ಷಿಣ ಹಸ್ತದಲ್ಲಿ ತ್ರಿಶೂಲ ಅಭಯ ಮುದ್ರೆಗಳನ್ನು ವಾಮಹಸ್ತಗಳಲ್ಲಿ ಕಪಾಲ

---

1 ಸ್ಫಾಟಿಕಂ — ಖ, ಗ, ಜ, ಝ.
2 ರಕ್ತಂ ಪೀತಂ ಚ — ಕ, ಘ, ಛ. ಟ, ಠ, ಡ, ಢ.
ತ, ಥ, ದ, ಧ, ಪ, ಫ, ಬ. ಭ.
3 ಶ್ಯಾಮಾಂಗಂ — ಖ, ಗ, ಚ, ಭ, ಝ.
4 ಕಾಂಚನಾ ರುಣಂ — ಕ, ಖ, ಗ ಘ, ಚ, ಛ ಭ, ಝ.
ಟ, ಠ, ಡ, ಢ, ತ, ಥ, ದ, ಪ.
5 ಏತಾನಿ ವರ್ಣಾನ್ಯುಕಾನಿ — ಟ, ಥ.
6 ಜ್ಞಂ ಪ್ರಕೀರ್ತಿತಂ — ಕ, ಖ, ಘ, ಟ, ಠ, ಢ, ತ, ಥ, ದ, ಧ, ಪ.
ಜ್ಞಂ ಪ್ರಕೀರ್ತಿತಾ :— ಛ.
7 ಇಲ್ಲಿಂದ – 'ಭೂತ ಶೋಧನಂ' – (ಶ್ಲೋ, ೮೨) ವರೆಗೆ
ಢ, ದ. ಪುಸ್ತಕಗಳಲ್ಲಿಲ್ಲ.
8 ಚುತುರ್ಭುಜ — ಠ.
9 ವರದವಾಮಕೇ — ಕ, ಘ, ಟ, ಠ, ತ, ಥ, ಪ.
ವರವಾಮಕೇ — ಛ, ಥ.

ಹಾರಕೇಯೂರಸಂಯುಕ್ತಂ
ಕಟಕೈ : ಕುಣ್ಡಲೈರ್ಯುತಮ್ ॥ ॥ ೮೫ ॥

ಹೃದಾದಿವರ್ಣಾ[1] ಪರ್ಯನ್ತಂ
ಸ್ವರೂಪಂ ಸೌಮ್ಯ[2]ಮುಚ್ಯತೇ ।
ಶೇಷಾ :[3] ತಾದ್ರಾ[4] ಕೃತಿರ್ಜ್ಞೇಯಾ :[5]
ಸರ್ವೇಷಾಂ ರೂಪಮೀರಿತಮ್[6] ॥ ॥ ೮೬ ॥

ಶಿವಾಂಗೈಸ್ತು ಯಜೇದ್ದೇವಂ
ಸ್ಥಾಪನಾದೀನಿ ಸರ್ವಶ :[7] ।

ಮತ್ತು ವರದ ಮುದ್ರೆಗಳನ್ನೂ ಧರಿಸಿ ಹಾರ ತೋಳ್ಬಳೆ ಕಡಗ ಕುಂಡಲಗಳಿಂದ ಅಲಂಕೃತವಾಗಿರುತ್ತದೆ. ॥೮೫ ॥

ಹೃದಯಾದಿ ವರ್ಣ ಪರ್ಯಂತವಾದ ಈ ಸ್ವರೂಪವು ಸೌಮ್ಯವಾದುದು. ಉಳಿದವು ರೌದ್ರಸ್ವರೂಪಗಳು, ಹೀಗೆ ಎಲ್ಲ ರೂಪಗಳನ್ನೂ ನಿರೂಪಿಸಿದ್ದಾಯಿತು. ॥ ೮೬ ॥

ಶಿವಾಂಗ ಮಂತ್ರಗಳಿಂದ ಪರಶಿವನನ್ನು ಪೂಜಿಸಬೇಕು ; ಮತ್ತು ಪ್ರತಿಷ್ಠಾದಿ

---

1 ಹೃದಾದಿವರ್ಣ — ಗ, ಚ.
ಹೃದಾದಿ ವಾನು — ಖ (ಪಾ), ಭ.
ಹೃದಯಾಪ್ಯಸ್ಯ — ಧ.
ಹೃದಯಾದಿ — ಘ, ಛ, ಟ, ತ, ಪ.
ಹೃದಯಾದಿಂ — ಥ.
ಹೃದಯಾದಿಷು — ಕ.

2 ಸಾಮ್ಯ — ಠ, ತ.

3 ಶೇಷಂ, ತ, ಥ, ಪ.

4 ರೌದಂ — ತ, ಥ, ಪ.

5 ಜ್ಞೇಯಂ — ತ, ಥ, ಪ. ಜ್ಞೇಯ :- ಕ.

6 ರೂಪಮುಚ್ಯತೇ — ಕ, ಖ, ಗ, ಘ, ಚ, ಛ, ಭ, ಟ, ಠ, ಡ, ಢ, ತ, ಥ, ದ, ಧ, ಪ.

7 ಶಿವಾಂಗೈಸ್ತು ಯಜೇ ದ್ದೇವಂ ಸ್ಥಾಪನಾದೌ ಚ ಸರ್ವಶ :- ಚು.
ಶಿವಾಂಗೈರ್ಯಃ ಪೂಜಯೇದ್ದೇವಂ ಸ್ಥಾಪನಾದಿಷು ಸರ್ವಶಃ- ಪ.

ಭೂತಾಂಗೈಶ್ಚೈವ[1] ಷಡ್ವಕ್ತ್ರ[2]
ಪಾದಾದೇ : ಭೂತ[3]ಶೋಧನಮ್ ॥ ॥ ೮೭ ॥

ಅಣೌ[4] ನಾಮಾನಿ ಸಂಯೋಜ್ಯ[5]
ಭೂತಾಂಗೇಷು ಸಮಾಚರೇತ್ ।
ಕೂಟಾಂಗೈಶ್ಚೈವ[6] ವಿದ್ಯಾಂಗೈ :[7]
ಪ್ರಾಯಶ್ಚಿತ್ತಂ ತು ಕಾರಯೇತ್ ॥ ॥ ೮೮ ॥

ಶಕ್ತೀನಾಂ ಸ್ಥಾಪನಾಕಾಲೇ[8]
ಶಕ್ತ್ಯಂಗೈಸ್ತು[9] ಸಮಾಚರೇತ್ ।

ಕ್ರಿಯೆಗಳನ್ನೂ ಆಚರಿಸಬೇಕು. ಭೂತಾಂಗ ಮಂತ್ರಗಳಿಂದ ಪಾದಾದಿ ಮಸ್ತಕ ಪರ್ಯನ್ತವಾಗಿ ಪಂಚ ಭೂತ ಶುದ್ಧಿಯನ್ನು ಮಾಡಬೇಕು. ॥ ೮೭ ॥

ಹೀಗೆ ಭೂತಶುದ್ಧಿಯನ್ನು ಮಾಡುವಾಗ ಭೂತಾಂಗ ಮಂತ್ರಗಳಲ್ಲಿ ಆಯಾಯ ಭೂತನಾಮವನ್ನು ಸೇರಿಸಿ ಮಂತ್ರವನ್ನು ಉಚ್ಚರಿಸಬೇಕು, ಶೈವಾಚಾರ್ಯರ ಮತ್ತು ಶಿಷ್ಯರ ಸಮಯಾಚಾರಕ್ಕೆ ಚ್ಯುತಿ ಬಂದಾಗ ವಿಧ್ಯುಕ್ತ ಪ್ರಕಾರವಾಗಿ ಕೂಟಾಂಗ ಮತ್ತು ವಿದ್ಯಾಂಗ ಮಂತ್ರಗಳಿಂದ ಪ್ರಾಯಶ್ಚಿತ್ತವನ್ನು ಮಾಡಬೇಕು. ॥ ೮೮ ॥

ಉಮಾದಿ ಶಕ್ತಿದೇವತೆಗಳನ್ನು ಸ್ಥಾಪಿಸುವಾಗ ಶಕ್ತ್ಯಂಗ ಮಂತ್ರಗಳಿಂದ

---

1 ಭೂತಾಂಗೇಷು ಚ — ಕ, ಖ, ಗ, ಘ, ಙ, ಛ, ಜ, ಝ, ಟ, ಠ, ಢ, ತ, ಥ, ದ, ಪ.
2 ವೈ ವತ್ಸ ! — ಕ, ಖ, ಘ, ಛ, ಜ, ಝ, ಟ, ಠ, ಢ, ತ, ಥ, ದ, ಪ.
3 ಪಾದಾದಿಭೂತ — ಕ, ಖ, ಘ ಛ, ಜ, ಟ, ಠ, ತ, ಪ.
4 ಅರ್ಣ — ಧ, ಅಣು — ಛ.
5 ಸಂಯುಜ್ಯ — ಘ.
6 ಕೂಟಾಂಗಂ ಚೈವ — ಜ. ಟ.
7 ವಿದ್ಯಾಂಗಂ — ಜ.
8 ಸ್ಥಾಪನೇ ಕಾಲೇ — ಖ, ಗ, ಙ, ಜ, ಝ.
9 ಶಕ್ತ್ಯಂಗೇಷು — ಥ. ಧ.

ಅನ್ಯೇಷಾಂ ಸರ್ವದೇವಾನಾಂ
ಸಾಮಾನ್ಯಾಂಗೈಸ್ತು ಯೋಜಯೇತ್ । ॥ ೮೯ ॥

ಏವಂ ಷಡಂಗಮಾಖ್ಯಾತಂ
ವಿಶೇಷಸ್ತ್ವಧುನೋಚ್ಯತೇ[1] ।
ಕೇವಲಂ ಜ್ಞಾನಜಂ ಚೈವ
ಯೋಗಜಂ ಭೂತಜಂ ತಥಾ ॥ ॥ ೯೦ ॥

ಕಾಮದಂ ಚ [2]ಕ್ರಮೇಣೈವ
ಹೃದಯಂ ಪಂಚಧಾ ಭವೇತ್ ।
ಶಿವಾಂಗಂ[3] ಹೃದಯಂ ಯತ್ತು[4]
ಕೇವಲಂ ಸಮುದಾಹೃತಮ್ ॥ ॥ ೯೧ ॥

ಸಾಂತಂ[5] ಯಾಂತ[6]ಸಮಾಯುಕ್ತಂ
ಆದಿವರ್ಗಾಂತ[7]ಸಂಯುತಮ್ ।

ಸಮಸ್ತಕ್ರಿಯೆಗಳನ್ನು ಆಚರಿಸಬೇಕು. ಉಳಿದ ದೇವತೆಗಳ ಸ್ಥಾಪನಾದಿ ಕಾರ್ಯಗಳನ್ನುಸಾಮಾನ್ಯಾಂಗ ಮಂತ್ರಗಳಿಂದ ಆಚರಿಸಬೇಕು. ॥೮೯॥

ಇನ್ನು ಷಡಂಗಗಳಲ್ಲಿ ವಿಶೇಷವನ್ನು ಹೇಳುತ್ತೇನೆ, ಕೇವಲಹೃದಯ ಜ್ಞಾನಜಹೃದಯ ಯೋಗಜಹೃದಯ ಭೂತಜಹೃದಯ— ॥ ೯೦ ॥

ಕಾಮದಹೃದಯವೆಂದು ಹೃದಯವು ಐದುವಿಧ. ಹ್ರಾಂ ಎಂಬ ಶಿವಾಂಗ ಹೃದಯಬೀಜವು ಕೇವಲಹೃದಯ. ॥ ೯೧ ॥

ಸಾಂತವಾದ ಹಕಾರವನ್ನು ಯಾಂತವಾದ ರೇಫ ಔಕಾರ ಮತ್ತು ಅನುಸ್ವಾರಗ

---

1 ವಿಶೇಷಮಧುನೋಚ್ಯತೇ —
ಕ, ಖ, ಗ, ಘ, ಛ, ಭ, ಝ, ಟ, ಠ, ಢ, ತ, ಥ, ದ, ಧ, ಪ.

2 ಕಾಮದಶ್ಚ — ಥ.

3 ಶಿವಾಂಗ — ಕ, ಘ, ಟ, ಥ.

4 ಯತ್ತ್ರ್ — ಢ.

5 ಸಾಂತ — ಕ, ಛ.

6 ಯಾನ — ಖ
ಯಾಂತಂ — ಘ, ಛ, ಠ, ತ.

7 ವರ್ಗಾಂಗ — ದ.

ಜ್ಞಾನಾತ್ಮಹೃದಯಂ ಬಿನ್ದು:[1]
ಸಮಾಸಾತ್ ಪರಿಕೀರ್ತಿತಮ್ ॥ ॥ ೬೨ ॥

ಭೂತಾಂತಮನಿಲೋಪೇತಂ
ತತ್ತ್ವಾಂತಂ ಸ್ವರಸಂಯುತಮ್ ।
ಶಿವಶಕ್ತಿಸಮೋಪೇತಂ[2]
ಯೋಗಜಂ[3] ಹೃದಯಂ ವಿದು: ॥ ॥ ೬೩ ॥

[4]ಪಂಚಮಂ ಪಾರ್ಥಿವೋಪೇತಂ
ದ್ವಿತೀಯ[5]ಸ್ವರ ಸಂಯುತಮ್ ।
ಬಿನ್ದುನಾದಸಮಾಯುಕ್ತಂ
ಭೂತಜಂ ಹೃದಯಂ ವಿದು: ॥ ॥ ೬೪ ॥

ಳೊಡನೆ ಉದ್ಧರಿಸಿದರೆ ಹ್ರಾಂ ಎಂಬ ಜ್ಞಾನಾತ್ಮಹೃದಯವಾಗುತ್ತದೆ. ॥ ೬೨ ॥

ಅನಿಲಬೀಜವಾದ ಯಕಾರದಿಂದ ಕೂಡಿದ ಭೂತಾಂತವಾದ ಹಕಾರವನ್ನು, ತತ್ತ್ವಾಂತವಾದ ಮತ್ತೊಂದು ಹಕಾರವನ್ನೂ ಉದ್ಧರಿಸಿ ಎರಡಕ್ಕೂ ಅಕಾರ ಮತ್ತು ಅನುಸ್ವಾರಗಳನ್ನು ಸೇರಿಸಿದರೆ 'ಹ್ಯಂ ಹಂ' ಎಂದು ಯೋಗಜಹೃದಯಬೀಜ ವಾಗುತ್ತದೆ. ॥ ೬೩ ॥

ಪಾರ್ಥಿವ ಬೀಜವಾದ ಲಕಾರದಿಂದ ಕೂಡಿದ ಪಂಚಮವೆಂಬ ಹಕಾರವನ್ನು ಆಕಾರ ಮತ್ತು ಅನುಸ್ವಾರಗಳೊಡನೆ ಉದ್ಧರಿಸಿದರೆ ಹ್ಲಾಂ ಎಂದು ಭೂತಜಹೃದಯ ಬೀಜವಾಗುತ್ತದೆ. ॥ ೬೪ ॥

---

[1] ಬಿಂದು — ಗಾ, ಜ.
[2] ಸಮಾಯುಕ್ತಂ — ಕ, ಖ, ಘ, ಛ, ಟ, ತ, ದ, ಧ, ಪ.
ಸಮಾಯುಕ್ತ — ಥ.
[3] ಯೋಗಜ — ಛ.
[4] ಈ ಪದ್ಯ — ಕ, ಘ, ಛ, ಭ, ಟ, ಠ, ಥ
ತ, ಥ, ದ, ಧ, ಪ. ಪುಸ್ತಕಗಳಲ್ಲಿಲ್ಲ.
[5] ದ್ವಿತೀಯಂ — ಕ, ಗ, ಘ, ಜ, ಛ, ಭ, ಝ,
ಟ, ಠ, ಡ, ತ, ಥ, ದ, ಧ, ಪ.

ತತ್ತ್ವಾನ್ತಮನಿಲಾಂತಂ ಚ
ದಶಾನ್ತಾನ್ತ[1]ಕಲಾನ್ವಿತಮ್ ।
ಬಿನ್ದುನಾದಸಮಾಯುಕ್ತಂ
ಹೃದಯಂ ಸರ್ವಕಾಮದಮ್ ॥ ॥ ೯೫ ॥

ಹೃದಯಾದಿ ನಮೋಽನ್ತಂ ತು[2]
ಸರ್ವೇಷಾಂ ಸಹ[3] ಯೋಜಯೇತ್ ।
ಈಶಾನಂ ಪ್ರಥಮಂ ವಿದ್ಯಾತ್[4]
ಶುಕ್ಲವರ್ಣಮುದಾಹೃತಮ್[5] ॥ ॥ ೯೬ ॥

ಈಶ್ವರಂ ಜ್ಞಾನಹೃದಯಂ
ತಪ್ತಕಾಂಚನಸಂನಿಭಮ್ ।

ತತ್ತ್ವಾಂತವಾದ ಹಕಾರ ಮತ್ತು ಅನಿಲಾಂತವಾದ ರೇಫಗಳನ್ನು ಐಕಾರದೊಡನೆ ಉದ್ಧರಿಸಿ ಅನುಸ್ವಾರವನ್ನು ಸೇರಿಸಿದರೆ ಹ್ರೈಂ ಎಂದು ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಕಾಮದ ಹೃದಯ ಬೀಜವಾಗುತ್ತದೆ. ॥ ೯೫ ॥

ಪೂರ್ವೋಕ್ತ ಪಂಚಹೃದಯಗಳನ್ನು ಆಯಾಯ ಹೃದಯಾದಿಯಾಗಿಯೂ ನಮೋಂತವಾಗಿಯೂ ಪ್ರಯೋಗಿಸಬೇಕು. ಹೇಗೆಂದರೆ— ಹ್ರಾಂ ಕೇವಲಹೃದಯಾಯನಮಃ, ಹ್ರೌಂ ಜ್ಞಾನಜಹೃದಯಾಯ ನಮಃ, ಹ್ಯಂ ಹಂ ಯೋಗಜ ಹೃದಯಾಯ ನಮಃ, ಹ್ಲಾಂ ಭೂತಜಹೃದಯಾಯನಮಃ, ಹ್ರೈಂ ಕಾಮದ ಹೃದಯಾಯ ನಮಃ. ಕೇವಲ ಹೃದಯವು ಈಶಾನ ಸ್ವರೂಪ, ಇದರ ವರ್ಣ ಶುಕ್ಲ. ॥ ೯೬ ॥

ಜ್ಞಾನಜಹೃದಯವು ಈಶ್ವರಸ್ವರೂಪ, ಇದು ಪುಟವಿಟ್ಟ ಸುವರ್ಣದ ವರ್ಣವನ್ನು

---

[1] ದಶಾಂತಂ ಚ — ಭ, ಫ.
ದಶಾಂತಾಂತಂ — ಕ.
[2] ಚ — ಧ.
[3] ಸಮ — ಥ.
[4] ವಿಂದ್ಯಾತ್ — ಕ, ಘ, ಟ, ಠ, ಢ, ತ, ದ, ಧ
[5] ಸಮನ್ವಿತಂ— ಚ.

ಯೋಗಜಂ ಬ್ರಹ್ಮರೂಪಂ ಸ್ಯಾತ್
ಪೀತವರ್ಣಂ ತು ನಿರ್ದಿಶೇತ್ । ॥ ೯೭ ॥

ಭೂತಜಂ ಚೇಶರೂಪಂ ತು[1]
ರಕ್ತ[2]ವರ್ಣಮುದಾಹೃತಮ್ ।
ಸಾದಾಖ್ಯಂ ಕಾಮದಂ ವಿದ್ಯಾತ್[3]
ಶುದ್ಧಸ್ಫಟಿಕಸನ್ನಿಭಮ್ ॥ ॥ ೯೮ ॥

ಯಜನಂ ಕೇವಲೇನೈವ
ಸ್ಥಾಪನಂ ಜ್ಞಾನಜೇನ ತು ।
ಪ್ರೋಕ್ಷಣಂ[4] ಯೋಗಜೇನೈವ
ದೀಕ್ಷಾಕರ್ಮ ತು ಭೂತಜಮ್[5] ॥ ॥ ೯೯ ॥

ಹೊಂದಿರುತ್ತದೆ. ಯೋಗಜಹೃದಯವು ಬ್ರಹ್ಮಸ್ವರೂಪ, ಇದರ ಬಣ್ಣ ಹಳದಿ. ॥ ೯೭ ॥

ಭೂತಜ ಹೃದಯವು ಈಶಸ್ವರೂಪ, ಇದರ ಬಣ್ಣ ಕೆಂಪು, ಕಾಮದ ಹೃದಯವು ಸಾದಾಖ್ಯತತ್ತ್ವ ಸ್ವರೂಪ, ಇದು ಶುದ್ಧಸ್ಫಟಿಕವರ್ಣವನ್ನು ಹೊಂದಿರುತ್ತದೆ. ॥ ೯೮॥

ಕೇವಲ ಹೃದಯಾಂಗಮಂತ್ರದಿಂದ ಪೂಜೆಯನ್ನು ಜ್ಞಾನಜಹೃದಯಾಂಗ ಮಂತ್ರದಿಂದ ಸ್ಥಾಪನೆಯನ್ನು ಯೋಗಜಹೃದಯಾಂಗ ಮಂತ್ರದಿಂದ ಪ್ರೋಕ್ಷಣೆಯನ್ನು ಭೂತಜ ಹೃದಯಾಂಗ ಮಂತ್ರದಿಂದ ದೀಕ್ಷಾಕಾರ್ಯವನ್ನು ಆಚರಿಸಬೇಕು. ॥ ೯೯॥

---

1 ಚೇಶ್ವರಂ ರೂಪಂ — ಗ, ಚು, ಟ,
ಚೈಶ್ವರಂ ರೂಪಂ — ಖ
ಭೂತಮೀಶ್ವರ ರೂಪಂ ತು — ಥ.
2 ರತ್ನ — ಕ, ಘ, ಟ, ಠ, ಢ, ತ, ಥ, ದ, ಧ.
3 ವಿಂದ್ಯಾತ್ ಕ, ಘ, ಟ, ಠ, ಢ, ತ, ಥ, ದ, ಧ.
4 ಪ್ರೋಕ್ಷ್ತ್ರಣೀ — ಪ.
5 ದೀಕ್ಷಾ ವೈ ಭೂತಜೇನ ತು — ಖ, ಪಾ
ದೀಕ್ಷಾಕರ್ಮಣಿ ಭೂತಜಂ — ಥ.

ಸರ್ವಕರ್ಮ ವಿಶೇಷೇಣ
ಕಾಮದೇನೈವ ಕಾರಯೇತ್ ।
ಏವಂ ಹೃದಯ ಮಾಖ್ಯಾತಂ
ಅಸ್ತ್ರಭೇದ ಮಥ ಶೃಣು[1] ॥ ॥ ೧೦೦ ॥

ಶಿವಾಸ್ತ್ರಂ ಕ್ಷುರಿಕಾಸ್ತ್ರಂ ಚ
ತಥಾ ಪಾಶುಪತಾಸ್ತ್ರಕಮ್ ।
ವ್ಯೋಮಾಸ್ತ್ರಂ ಚೈವಾಘೋರಾಸ್ತ್ರಂ
ಅಸ್ತ್ರಂ ಪಂಚವಿಧಂ ಭವೇತ್[2] ॥ ॥ ೧೦೧ ॥

ಷಡಕ್ಷರಂ ಶಿವಾಸ್ತ್ರಂ ಸ್ಯಾತ್
ಕ್ಷುರಿಕಾ ತ್ವಷ್ಟ[3] ವರ್ಣಕಮ್ । [ಕಾ]

ಕಾಮದ ಹೃದಯಾಂಗ ಮಂತ್ರದಿಂದ ಪೂಜಾದಿ ಸಮಸ್ತ ಕಾರ್ಯಗಳನ್ನು ಆಚರಿಸಬೇಕು. ಕೇವಲ ಹೃದಯಾದಿ ಮಂತ್ರಗಳ ಉದ್ಧಾರ ಮತ್ತು ವಿನಿಯೋಗ ಗಳನ್ನು ನಿರೂಪಿಸಿದ್ದಾಯಿತು. ಇನ್ನು ಅಸ್ತ್ರಭೇದವನ್ನು ನಿರೂಪಿಸುವೆನು. ॥೧೦೦॥

ಶಿವಾಸ್ತ್ರ ಕ್ಷುರಿಕಾಸ್ತ್ರ ಪಾಶುಪತಾಸ್ತ್ರ ವ್ಯೋಮಾಸ್ತ್ರ ಮತ್ತು ಅಘೋರಾಸ್ತ್ರ ವೆಂದು ಅಸ್ತ್ರ ಮಂತ್ರವು ಐದುವಿಧ. ॥ ೧೦೧ ॥

ಶಿವಾಸ್ತ್ರ ಮಂತ್ರದಲ್ಲಿ ಆರಕ್ಷರಗಳೂ, ಕ್ಷುರಿಕಾಸ್ತ್ರ ಮಂತ್ರದಲ್ಲಿ ಎಂಟಕ್ಷರಗಳೂ

---

[1] ಅಂಗಭೇದ ಮಥ ಶೃಣು — ಪ.
ಮಂತ್ರಭೇದ ಮಥ ಶೃಣು — ಕ, ಟ, ಠ, ಢ, ತ, ಥ, ದ, ಧ.
ಅಥ ಮಂತ್ರಭೇದಮುಚ್ಯತೇ — ಛ.

[2] ಪಂಚಾಸ್ತ್ರಂ ಚೇತಿ ಕೀರ್ತಿತಂ — ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.

[3] ಕ್ಷುರಿಕಂ ತ್ವಷ್ಟ — ಪ.
ಕ್ಷುರಿಕಾ ಚಾಷ್ಟ — ಧ.
ಕ್ಷುರಿಕಾಸ್ತ್ರಂಚ — ಚ.
ಕ್ಷುರಿಕಾದ್ಯಷ್ಟ — ತ.

ಪಾಶುಪತಂ ತು ಪಂಚಾರ್ಣಂ[1]
ವ್ಯೋಮಾಸ್ತ್ರಂ ತು ದಶಾರ್ಣಕಮ್[2] ॥ ॥ ೧೦೨ ॥

ಚತ್ವಾರಿಂಶದಘೋರಾಸ್ತ್ರಂ
ಏವಂ[3] ಪಂಚಾಸ್ತ್ರಮುಚ್ಯತೇ ।
ಸರ್ವಕರ್ಮಾರ್ಹಕಂ[4] ವಿದ್ಯಾತ್[5]
ಪೂಜಕ[6] : ಸರ್ವಕರ್ಮಸು ॥ ॥ ೧೦೩ ॥

ಶಿವಾಂಗಾದಿ[7] ಷಡಂಗಾನಿ
ಕೀರ್ತಿತಾನಿ ಷಡಾನನ ।
ಅಂಗಭೇದೋ[8] ಮಯಾ ऽऽ ಖ್ಯಾತ :
ಮಂತ್ರಜಾತ[9]ಮಥ[10] ಶೃಣು ॥ ॥ ೧೦೪ ॥

ಪಾಶುಪತಾಸ್ತ್ರ ಮಂತ್ರದಲ್ಲಿ ಐದಕ್ಷರಗಳೂ, ವ್ಯೋಮಾಸ್ತ್ರ ಮಂತ್ರದಲ್ಲಿ ಹತ್ತಕ್ಷರಗಳೂ ಇವೆ. ॥ ೧೦೨ ॥

ಅಘೋರಾಸ್ತ್ರ ಮಂತ್ರದಲ್ಲಿ ನಲವತ್ತು ವರ್ಣಗಳಿವೆ. ಸಮಸ್ತತತ್ವಗಳಿಗೂ ಜನ್ಮ ಸ್ಥಲವಾದ ಮಹಾಲಿಂಗವನ್ನು ಪೀಠದಲ್ಲಿ ಆರಾಧಿಸುವ ಬಾಹ್ಯಪೂಜಕನಾದ ಶುದ್ಧಶೈವನು ಈ ಐದೂ ಅಸ್ತ್ರಮಂತ್ರಗಳ್ನು ಶಿವಪೂಜಾದಿ ಸಮಸ್ತಕ್ರಿಯೆಗಳಿಗೂ ಅರ್ಹವೆಂದು ಭಾವಿಸಬೇಕು. ॥ ೧೦೩ ॥

ಷಣ್ಮುಖನೇ ಶಿವಾಂಗಾದಿ ಷಡಂಗಗಳನ್ನು ವಿವರಿಸಿದ್ದಾಯಿತು. ॥ ೧೦೪ ॥

ಇನ್ನು ಮಂತ್ರಜಾತವನ್ನು ನಿರೂಪಿಸುವೆನು. ॥ ೧೦೫ ॥

---

1 ಪಂಚಾಸ್ತ್ರಂ — ಛ.
2 ದಶಾಕ್ಷರಂ — ಥ.
3 ಏವ — ಛ,
4 ಕರ್ಮಾರ್ಣಕಂ — ಚ.
5 ವಿಂದ್ಯಾತ್ — ಕ, ಘ, ಟ, ಠ, ಢ, ತ, ಥ, ದ, ಧ.
6 ಪೂಜಕಂ — ಢ, ದ, ಪ.
7 ಶಿವಾಂಗಾನಿ — ಗ, ಚು.
8 ಅಂಗಭೇದೋ ಮಯಾऽऽಖ್ಯಾತ :— ಚು
ಅಂಗಭೇದಮಿದಂ ಖ್ಯಾತಂ — ಥ.
ಅಂಗಭೇದಮಿದಂ ಪ್ರೋಕ್ತಂ —ಪ.
9 ಮಂತ್ರಭೇದ — ಛ.
10 ಮತ :— ಥ, ಧ.

ಇತಿ ಶ್ರಿ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರ ಗ್ರಂಥ
ಸಂಹಿತಾಯಾಂ ಅಂಗಭೇದೋ ನಾಮ
ಅಷ್ಟಮು : ಪಟಲ :

ಇತಿ ಶ್ರೀ ವಾತುಲತಂತ್ರೇ ಶುದ್ಧಾಖ್ಯೇ ಸಹಸ್ರಗ್ರಂಥ
ಸಂಹಿತಾಯಾಂ ಅಂಗಭೇದೋ ನಾಮ
ಅಷ್ಟಮಃ ಪಟಲ :

ಅಥ ಮಂತ್ರಜಾತಪಟಲ :

ನವಮ :

[1]ವಿಷ್ಣು ಬ್ರಹ್ಮ[2] ಸುರೇಂದ್ರ ಚಂದ್ರ[3]ರವಿಭಿ : ಸದ್ಭೂತಿಮದ್ಭಿ : ಪರ್ವೈ[4] :
ದೇವಾದ್ಯೈ : ಪರಮಂತ್ರವಿದ್ಭಿರಖಿಲೈ :[5] ಸದ್ಭಕ್ತಿಮದ್ಭಿ : ನೃಭಿ : ।
ಸದ್ಭಿ : ಸತ್ಪಥ[6]ವರ್ತಿಭಿ :[7] ಮನುಮುನಿವ್ರಾತೈ :[8] ಉಪಾಸ್ಯಂ ಮಹತ್
ಶ್ರೀಲಿಂಗಂ ಶಿವತತ್ತ್ವ ಮುಖ್ಯ ನಿಲಯಂ ಹೃದ್ಯಂ ಪ್ರಪದ್ಯೇ ನಿಶಮ್[9] ॥ ॥ ೧ ॥

ವಿಷ್ಣು ಬ್ರಹ್ಮ ದೇವೇಂದ್ರ ಚಂದ್ರ ಸೂರ್ಯರು, ಮಹಾವಿಭೂತಿ ಶಾಲಿಗಳು, ದೇವಾದಿಗಳು, ಪ್ರಾಸಾದಾದಿ ಮಂತ್ರಜ್ಞರು, ಶ್ರೇಷ್ಠ ಭಕ್ತಿಯುಳ್ಳ ಮಾನವರು, ಸತ್ಪುರುಷರು, ಸನ್ಮಾರ್ಗಗಾಮಿಗಳು, ಮನುಗಣ, ಮುನಿಗಣ ಈ ಎಲ್ಲರೂ ಸೇವಿಸುವ ಪನಮಪೂಜ್ಯವಾದ ಶಿವತತ್ತ್ವಕ್ಕೆ ಮುಖ್ಯಸ್ಥಾನವಾದ ಮನೋಹರವಾದ ಶ್ರೀ ಶಿವ ಲಿಂಗವನ್ನು ನಾನು ಸದಾ ಭಜಿಸುತ್ತೇನೆ. ॥ ೧ ॥

---

1 ಈ ಪದ್ಯ—ಖ, ಝ, ಫ, ಪುಸ್ತಕಗಳಲ್ಲಿಲ್ಲ.
2 ಬ್ರಹ್ಮ ವಿಷ್ಣು—ಗ, ಚ.
3 ಇಂದ್ರ—ಭ.
4 ಪದ್ಯೈ:—ಥ.
5 ರ ಪರ್ವೈ:—ಗ, ಚ.
6 ಸತ್ಪದ—ಕ
ತತ್ಪಥ—ಪ
7 ವರ್ತ್ಮಭಿ:—ಗ, ಚ.
8 ಮುನಿಮುನೀಂದ್ರಾದ್ಯೈ:—ಥ
9 ಪ್ರಪದ್ಯೇ ಧಿಯಾ—ಗ, ಚ, ಜ.

ಅಥಾತ : ಸಂಪ್ರವಕ್ಷ್ಯಾಮಿ
ಮಂತ್ರಜಾತವಿಧಿಂ ಶೃಣು[1] |
ಯಸ್ಮಾನ್ಮಂತ್ರಾಶ್ಚ ಜಾಯನ್ತೇ[2]
ಮಂತ್ರಜಾತಮಿತಿ ಸ್ಮೃತಮ್[3] || || ೧ ||

ತಸ್ಮಾನ್ಮನ್ತ್ರ ಮಯಂ ಲಿಂಗಂ
ವಕ್ಷ್ಯೇ ಸಂಕ್ಷೇಪತ : ಶೃಣು |
ಸರ್ವಲೋಕ ಹಿತಾರ್ಥಾಯ
ಸರ್ವಪ್ರಾಣಿ ಹಿತಾಯ ಚ || || ೨ ||

ಸರ್ವಮನ್ತ್ರ[4]ಪ್ರಸಿದ್ಧ್ಯರ್ಥಂ
ಭುಕ್ತಿ ಮುಕ್ತ್ಯರ್ಥ ಮುಚ್ಯತೇ |

ಎಲೈ ಷಣ್ಮುಖನೇ ! ಅಂಗಭೇದನಿರೂಪಣದ ತರುವಾಯ ಮಂತ್ರಜಾತವಿಧಿಯನ್ನು ನಿರೂಪಿಸುವೆನು. ಸೃಷ್ಟಿಸ್ಥಿತಿ ಸಂಹಾರಸ್ಥಾನವಾದ ಯಾವಲಿಂಗದಿಂದ ಸಮಸ್ತ ದೇವತಾರೂಪವಾದ ಮಂತ್ರಗಳು ಮೂಡುತ್ತವೆಯೋ ಆ ಲಿಂಗವು ಮಂತ್ರಜಾತವೆನಿಸುತ್ತದೆ. || ೧ ||

ಆದ್ದರಿಂದ ಜಗಜ್ಜನ್ಮಾದಿ ಸ್ಥಲವೆನಿಸಿದ ಶಿವಲಿಂಗವು ಮಂತ್ರಮಯವಾದುದು. ಸರ್ವಲೋಕಹಿತ, ಸರ್ವಾತ್ಮಹಿತ, || ೨ ||

ಸರ್ವಮಂತ್ರ ಸಿದ್ಧಿ, ಭುಕ್ತಿ ಮತ್ತು ಮುಕ್ತಿಗಳಿಗಾಗಿ ಆ ಮಂತ್ರಮಯವಾದ ಲಿಂಗದ ಉದ್ಧಾರವನ್ನು ಸಂಕ್ಷೇಪವಾಗಿ ನಿರೂಪಿಸುವೆನು. ಗೋಮಯಲಿಪ್ತವಾದ

---

1 ಮಂತ್ರಜಾತಂ ತತಃ ಶೃಣು—ಕ, ಘ, ಛ, ಟ, ಠ, ಢ, ತ, ಥ, ದ, ಧ, ಪ.
ಮಂತ್ರಜಾತಮಥ ಶೃಣು—ಗ, ಜ.
ಮಂತ್ರಜಾತಂ ಷಡಾನನ—ಫ.

2 ಮಂತ್ರಾಣಿ ಜಾಯ ತೇ ಯಸ್ಮಾತ್—ಕ, ಗ, ಜ.
ಮಂತ್ರಶ್ಚ ಜಾಯ ತೇ ಯಸ್ಮಾತ್—ಖ, (ಪಾ)
ಯಸ್ಮಾತ್ಮಂತ್ರಾಣಿ ಜಾಯಂತೇ—ಥ, ಪ.
ಯತೋ ಮಂತ್ರಾಣಿ ಜಾಯಂತೇ—ಚ.

3 ಮತಃ ಸ್ಮೃತಂ—ಚ.
ಇಲ್ಲಿಂದ 'ಇದಂಮತಂ' (ಶ್ಲೋ 22) ವರೆಗೆ ಫ, ಪುಸ್ತಕದಲ್ಲಿಲ್ಲ.

4 ತಂತ್ರಮಂತ್ರ—ಧ.

ಶಾಲಿಪಿಷ್ಟಾಕ್ತ ಸೂತ್ರೇಣ
ಸೂತ್ರಪಾತಮಥಾಚರೇತ್[1] ॥ ॥ ೪ ॥

ಗೋಮಯಾಲೇಪಿತೇ[2] ಕ್ಷೇತ್ರೇ
ನಿಮ್ನೋನ್ನತ ವಿವರ್ಜಿತೇ ।
ಪ್ರಾಕ್ ಸೂತ್ರಾಣಿ ಸಪ್ತದಶ
ತಥೈವೋದಗ್ಗತಾನಿ ಚ[3] ॥ ॥ ೫ ॥

ಪಂಕ್ತಯ : ಷೋಡಶ ಸ್ಯುಸ್ತಾ :
ಪ್ರಾಗುತ್ತರ ಮುಖಾಸ್ತಥಾ[4] ।
ಷಟ್ಪಂಚಾ ಶತ್ಸಮಾಧಿಕ್ಯ
ಕೋಷ್ಠಾನಿ ದ್ವಿಶತಾನಿ ಚ ॥ ॥ ೬ ॥

ಪಶ್ಚಿಮಾದಿಂದ್ರ ಪರ್ಯನ್ತಂ[5]
ಲಿಂಗಾರ್ಥಂ ವೀಥಿಕಾಸ್ತ್ಯಜೇತ್[6] ।

ತಗ್ಗು ದಿಣ್ಣೆಗಳಿಲ್ಲದ ಸ್ಥಣ್ಡಿಲಪ್ರದೇಶದಲ್ಲಿ ಪಟ್ಟಸೂತ್ರ (ರೇಷ್ಮೆದಾರ)ವನ್ನು ಅಕ್ಕಿಹಿಟ್ಟಿನಲ್ಲಿ ಅದ್ದಿ ಎಳೆಗಳು ಬೀಳುವಂತೆ ಮಿಡಿಯುವುದು. ಪೂರ್ವಪಶ್ಚಿಮವಾಗಿ ಹದಿನೇಳು ಸೂತ್ರಗಳನ್ನೂ ಮಿಡಿಯುವುದು. ॥ ೪–೫ ॥

ಹೀಗೆ ಮಿಡಿದರೆ ಪೂರ್ವಪಶ್ಚಿಮ ಮುಖವಾಗಿಯೂ, ಮತ್ತು ದಕ್ಷಿಣೋತ್ತರ ಮುಖವಾಗಿಯೂ, ಹದಿನಾರು ಹದಿನಾರು ಪಂಕ್ತಿಗಳಾಗುತ್ತವೆ, ಈ ಹದಿನಾರು ಪಂಕ್ತಿಗಳಲ್ಲಿ ಒಟ್ಟು ಇನ್ನೂರ ಐವತ್ತಾರು ಕೋಷ್ಠಕ (ಚತುರಸ್ರ) ಗಳಾಗುತ್ತವೆ. ॥ ೬ ॥

ಪಶ್ಚಿಮದಿಂದ ಪೂರ್ವದವರೆಗೆ ಲಿಂಗನಿರ್ಮಾಣಕ್ಕಾಗಿ ವೀಥಿ (ಬೀದಿ) ಗಳನ್ನು

---

[1] ಸೂತ್ರಪಾತ ಮುದಾಚರೇತ್—ಟ.
[2] ಗೋಮಯಾಲೇಪನೇ—ಥ.
[3] ಪ್ರಾಕ್ ಪಶ್ಚಿಮಾಃ ಷೋಡಶಸ್ಯುಃ ಪ್ರಾಗುತ್ತರಮುಖಾಸ್ತಥಾ—ಗ, ಚ, ಜ.
ಪ್ರಾಚೀಸ್ತಂತರ್ಘಾ ಯಥಾಸಪ್ತದಶೋತ್ತರಗತಾಂಸ್ತಥಾ—ಝ.
[4] ಪ್ರಾಙ್ಮುಖಾಶ್ಚೋತ್ತರಾಮುಖಾಃ—ಖ, ಗ, ಘ.
ಪ್ರಾಗುದಙ್ಮುಖಾಸ್ತಥಾ—ಕ, ಘ, ಛ, ಟ, ಠ, ಢ, ತ, ದ, ಧ, ಪ.
[5] ಪಶ್ಚಿಮಾದೀಂದ್ರಪರ್ಯಾಂತಂ—ಗ, ಝ.
ಪಶ್ಚಿಮಾದ್ರಿಪರ್ಯಂತಂ—ಘ, ಟ.
[6] ವೀಥಿಕಾಂ ತ್ಯಜೇತ್—ಗ, ಚ, ಝ.
ವೀಥಿಕಾಃ ಸೃಜೇತ್—ಢ.

ಪಶ್ಚಾಚ್ಚತ್ವಾರಿ ಚತ್ವಾರಿ
ವೀಥ್ಯೋ :[1] ಕೋಷ್ಠಾನಿ ಮಧ್ಯಮೇ ॥ ॥ ೭ ॥

ಸಂರಕ್ಷ್ಯ ಪಾರ್ಶ್ವದ್ವಿತಯೇ[2]
ಷಟ್ ಷಟ್ ಕೋಷ್ಠಾನಿ ಲೋಪಯೇತ್ ।
ತದೂರ್ಧ್ವ[3] ಪಂಕ್ತಿಂ ಸಂರಕ್ಷ್ಯ
ತದೂರ್ಧ್ವಂ[4] ದ್ವಾದಶ[5]ಕ್ಷಿಪೇತ್ ॥ ॥ ೮ ॥

ಪಾರ್ಶ್ವಯೋರುಭಯೋ ಸ್ತತ್ರ[6]
ದ್ವೆದ್ವೇ ಕೋಷ್ಠೇ ಚ[7] ಲೋಪಯೇತ್ ।

ಬಿಡಬೇಕು. ಮಧ್ಯದಲ್ಲಿ ಎರಡೆರಡು ವೀಧಿಗಳ ನಾಲ್ಕು ನಾಲ್ಕು ಕೋಷ್ಠಗಳನ್ನು ಉಳಿಸಿಕೊಂಡು, ॥ ೭ ॥

ಅವುಗಳ ಎರಡೂ ಪಾರ್ಶ್ವಗಳಲ್ಲಿ ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಲೋಪಗೊಳಿಸಿದ ಪಂಕ್ತಿಗಳ ಮುಂದಣ ಪಂಕ್ತಿಯನ್ನುಳಿಸಿಕೊಂಡು ಅದರಲ್ಲಿ ಹನ್ನೆರಡು ಕೋಷ್ಠಕಗಳನ್ನು ರಕ್ಷಿಸಿಕೊಂಡು ॥ ೮ ॥

ಅದರ ಎರಡೂ ಪಾರ್ಶ್ಯಗಳಲ್ಲಿ ಎರಡೆರಡು ಕೋಷ್ಠಗಳನ್ನು ಲೋಪಗೊಳಿಸಬೇಕು.

---

[1] ವಿಥ್ಯೋಃ—ಘ, ಟ, ಛ, ದ,ಧ.
ವಿಥ್ಯಃ—ಡ, ಪ.
ವೀಥ್ಯಾಃ—ಢ.
ವೀಥ್ಯಃ—ಗ, ಚ, ಜ, ಝ.

[2] ಪಾರ್ಶ್ವದ್ವಿತಯೋಗಃ—ಗ, ಚ.
ಪಾರ್ಶ್ವದ್ವಿತೀಯೋಃ—ಕ.
ಪಾರ್ಶ್ವದ್ವಿತಯ ಯೋಃ—ಥ.

[3] ತದೂರ್ಧ್ವಂ—ಥ.
ತದೂರ್ಧ್ವೇ—ಟ.

[4] ತದೂರ್ಧ್ವೇ—ಗ, ಚ, ಝ.

[5] ದ್ವಾದಶಂ—ಕ, ಘ, ಛ, ಟ, ಠ, ಡ, ಢ, ತ, ಥ, ದ, ಧ, ಪ.

[6] ತಸ್ಯಾಃ ಪಾರ್ಶ್ವಯೋರುಭಯೋಃ—ಠ, ಢ, ಥ.
ಪಾರ್ಶ್ವಯೋರುಭಯೋ ಸ್ತಸ್ಯಾಃ—ಕ, ಖ, ದ, ಪ.
ಪಾರ್ಶ್ವಯೋರುಭಯೋಸ್ತಸ್ಯಾ—ಘ, ಛ, ಟ, ತ, ದ.
ಕೋಷ್ಠಾನಿ—ಗ, ಚ, ಝ.

[1]ತದೂರ್ಧ್ವೇ ದಶಕೋಷ್ಠಾನಿ
ರಕ್ಷೇತ್[2] ಪಾರ್ಶ್ವತ್ರಯಂ[3] ತ್ಯಜೇತ್ ॥ ॥ ೯ ॥

[4]ತತ : ಷಟ್ ಕೋಷ್ಠಕಂ ರಕ್ಷೇತ್[5]
ಪಾರ್ಶ್ವಯೋ : ಪಞ್ಚಪಞ್ಚ ಚ[6] ।
[7]ಲೋಪಯೇ ಚ್ಚ ತದೂರ್ಧ್ವೇ ತು
ರಕ್ಷೇತ್[8] ಚತ್ವಾರಿ ಪಾರ್ಶ್ವಯೊ : ॥ ॥ ೧೦ ॥

ಷಟ್ ಷಟ್ ಕೋಷ್ಠಾನಿ[9] ಸಂತ್ಯಾಜ್ಯ[10]
ತದೂರ್ಧ್ವೇ ತದ್ವದಾಚರೇತ್[11]

ಅದರ ಮುಂದಿನ ಪಂಕ್ತಿಯಲ್ಲಿ ಹತ್ತು ಕೋಷ್ಠಗಳನ್ನುಳಿಸಿಕೊಂಡು ಅದರ ಎರಡೂ ಪಾರ್ಶ್ವದಲ್ಲಿ ಮೂರು ಮೂರು ಕೋಷ್ಠಗಳನ್ನು ಲೋಪಗೊಳಿಸಬೇಕು. ॥ ೯ ॥

ಅದರ ಮುಂದಿನ ಪಂಕ್ತಿಯಲ್ಲಿ ಆರು ಕೋಷ್ಠಗಳನ್ನುಳಿಸಿಕೊಂಡು, ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ಐದೈದು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಿನ ಪಂಕ್ತಿಯಲ್ಲಿ ನಾಲ್ಕು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ॥ ೧೦ ॥

ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಣ ಪಂಕ್ತಿಯಲ್ಲಿಯೂ ಹಿಂದಿನಂತೆ ನಾಲ್ಕು ಕೋಷ್ಠಗಳನ್ನುಳಿಸಿಕೊಂಡು, ಆ ಪಂಕ್ತಿಯ ಎರಡು

---

1 ಈ ಅರ್ಧಪದ್ಯ—ತ, ಪುಸ್ತಕದಲ್ಲಿಲ್ಲ.
2 ರಕ್ಷಯೇತ್—ಛ.
3 ಪಾರ್ಶ್ವದ್ವಯಂ—ಥ.
4 ಇಲ್ಲಿಂದ ತದವ್ದಾಚರೇತ್ (ಶ್ಲೋ ೧೧) ವರೆಗೆ ತ. ಪುಸ್ತಕದಲ್ಲಿಲ್ಲ.
5 ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಧ, ಪ, ಫ.
6 ಪಂಚ ಲೋಪಯೇತ್—ಕ.
7 ಇಲ್ಲಿಂದ 'ಲೋಪಯೇತ್' (ಶ್ಲೋ-೧೧) ವರೆಗೆ ಕ, ಚ. ಪುಸ್ತಕಗಳಲ್ಲಿಲ್ಲ.
8 ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಠ, ಡ, ಢ, ತ, ಥ, ದ, ಫ.
ರಕ್ಷಯೇತ್—ದ, ರಕ್ಷ್ಯಃ—ಟ.
9 ಷಟ್‌ಕೋಷ್ಠಾಽಚ—ಗ, ಚ, ಝ.
10 ಸಂತ್ಯಕ್ತ್ವಾ—ಘ, ಛ, ಠ, ಢ, ಥ, ದ, ಧ.
11 ಊರ್ಧ್ವೇ ತು—ಪ.

ತತಃ ಷಟ್ ಕೋಷ್ಠಕಂ ರಕ್ಷೇತ್[1]
ಪಾರ್ಶ್ವಯೋಃ ಪಞ್ಚ ಲೋಪಯೇತ್[2] ॥ ॥ ೧೧ ॥

[3]ತದೂರ್ಧ್ವೇ ದಶ ಸಂರಕ್ಷ್ಯ[4]
ಪಾರ್ಶ್ವಯೋಃ ತ್ರಿ [ತ್ರೀಣಿ] ಲೋಪಯೇತ್
ತದೂರ್ಧ್ವೇ[5] ದ್ವಾದಶಂ [ಶಾ] ರಕ್ಷೇತ್[6]
ದ್ವೇದ್ವೇ ಪಾರ್ಶ್ವೇ ಚ ಲೋಪಯೇತ್ ॥ ॥ ೧೨ ॥

ತದೂರ್ಧ್ವ[7] ಪಂಕ್ತಿಂ ಸಂರಕ್ಷ್ಯ
ತತೋ ಲಿಂಗಂ ದ್ವಿಪಂಕ್ತಿತಃ ।

ಪಾರ್ಶ್ವಗಳಲ್ಲಿಯೂ ಆರಾರು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಿನ ಪಂಕ್ತಿಯಲ್ಲಿ ಆರು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡು ಪಾರ್ಶ್ವಗಳಲ್ಲಿಯೂ ಐದೈದು ಕೋಷ್ಠಗಳನ್ನು ಲೋಪಮಾಡಬೇಕು. ॥ ೧೧ ॥

ಈ ಆರು ಕೋಷ್ಠಗಳ ಪಂಕ್ತಿಯ ಮುಂದಿನ ಪಂಕ್ತಿಯಲ್ಲಿ ಹತ್ತು ಕೋಷ್ಠಗಳನ್ನು ಉಳಿಸಿಕೊಂಡು ಆ ಪಂಕ್ತಿಯ ಎರಡೂ ಪಾರ್ಶ್ವದಲ್ಲಿ ಮೂರು ಮೂರು ಕೋಷ್ಠಗಳನ್ನು ಲೋಪಗೊಳಿಸಬೇಕು. ಅದರ ಮುಂದಿನ ಪಂಕ್ತಿಯಲ್ಲಿ ಹನ್ನೆರಡು ಕೋಷ್ಠಗಳನ್ನುಳಿಸಿಕೊಂಡು ಆ ಪಂಕ್ತಿಯ ಎರಡೂ ಪಾರ್ಶ್ವಗಳಲ್ಲಿ ಎರಡೆರಡು ಕೋಷ್ಠಗಳನ್ನು ಲೋಪಗೊಳಿಸಬೇಕು. ॥ ೧೨ ॥

ಹನ್ನೆರಡು ಕೋಷ್ಠಗಳ ಪಂಕ್ತಿಯ ಮುಂದಿನ ಪಂಕ್ತಿಯನ್ನು ಉಳಿಸಿಕೊಳ್ಳಬೇಕು. ಈ ಪಂಕ್ತಿಯ ತರುವಾಯ ಎರಡು ಪಂಕ್ತಿಗಳಿಂದ ಲಿಂಗಾಕಾರವಾಗುತ್ತದೆ.

---

1 ಇದಾದನಂತರ—ಗ, ಚ, ಝ. ಪುಸ್ತಕಗಳಲ್ಲಿಲ್ಲ
"ತದೂರ್ಧ್ವ ಪಂಕ್ತಿದ್ವಿತಯೇ
ಚತುಷ್ಕೋಷ್ಠಾನಿ ರಕ್ಷಯೇತ್ ।
ಪಾರ್ಶ್ವಯೋಶ್ಚ ದ್ವಯೋಃ ಷಷ್ಠ
ಕೋಷ್ಠಾನಿ ಚ ಪರಿತ್ಯಜೇತ್ ॥"
ಎಂಬ ಶ್ಲೋಕವು ಇದೆ. ಆದರೆ ಇತರ ಯಾವ ಪುಸ್ತಕವಲ್ಲೂ ಇಲ್ಲವಾದ್ದರಿಂದ ಇದನ್ನು ಮೂಲಕ್ಕೆ ಸೇರಿಸಲಿಲ್ಲ.
ಈ ಅರ್ಧಪದ್ಯವು —ತ. ಪುಸ್ತಕದಲ್ಲಿಲ್ಲ.

2 ರಕ್ಷ್ಯ—ಕ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ.

3 ಇಲ್ಲಿಂದ 'ಪೀಠಕಂ' (೧೪) ವರೆಗೆ—ಪ. ಪುಸ್ತಕದಲ್ಲಿಲ್ಲ.

4 ಸಂರಕ್ಷೇತ್—ಖ.

5 ತದೂರ್ಧ್ವಂ—ಘ.

6 ರಕ್ಷ್ಯ—ಘ, ಛ, ಟ, ಠ, ಢ, ಥ.

7 ತದೂರ್ಧ್ವಂ—ಕ.
ತದೂರ್ಧ್ವೇ—ಢ, ದ, ಧ.

ಪಂಕ್ತ್ಯೋಃ ಚತ್ವರಿ[1] ಚತ್ವಾರಿ
ಕೋಷ್ಠಾನ್ಯೂರ್ಧ್ವೇ[2] ಚ ರಕ್ಷಯೇತ್[3] ॥ ॥ ೧೩ ॥

ಷಟ್ ಷಟ್ ಕೋಷ್ಠಾನಿ ಪಂಕ್ತ್ಯೋಶ್ಚ
ಪಾರ್ಶ್ವಯೋಃ ಶುಭಯೋಃ ಸ್ತ್ಯಜೇತ್[4] ।
ಏವಂ ಲಿಂಗಂ[5] ಸಮಾಸಾದ್ಯ
ಬ್ರಹ್ಮ ವಿಷ್ಣ್ವೀಶ ಪೀಠಕಮ್[6] । ॥ ೧೪ ॥

ಪಟ್ಟಿಕಾ ಕಂಜ[7] ಕಂಠಾಬ್ಜ
ಪಟ್ಟಿ ಕಾಜ್ಯ ಪ್ರಧಾರಿ ಕಾಃ[8]

ಈ ಎರಡು ಪಂಕ್ತಿಗಳಲ್ಲಿ ನಾಲ್ಕುನಾಲ್ಕು ಕೋಷ್ಠಗಳನ್ನುಳಿಸಿಕೊಂಡು, ॥ ೧೩ ॥

ಆ ಎರಡೂ ಪಂಕ್ತಿಗಳ ಎರಡೂ ಪಾರ್ಶ್ವಗಳಲ್ಲಿ ಆರಾರು ಕೋಷ್ಠಗಳನ್ನು ಲೋಪ ಗೊಳಿಸಬೇಕು. ಹೀಗೆ ಸೃಷ್ಟಿಸ್ಥಿತಿಲಯ ಕರ್ತೃಗಳಾದ ಬ್ರಹ್ಮ ವಿಷ್ಣು ರುದ್ರರರೂಪವಾದ ಪೀಠವನ್ನುಳ್ಳ ಲಿಂಗವನ್ನು ನಿರ್ಮಿಸಬೇಕು. ॥ ೧೪ ॥

ಎಲೈಷಣ್ಮುಖನೇ ! ಅಧಃಪಟ್ಟಿಕೆ ಅಧಃಕಂಜ ಕಣ್ಠ (ವೃತ್ತ) ಊರ್ಧ್ವಾಬ್ಜ,

---

[1] ಪಂಕ್ತ್ಯೋಶ್ಚತ್ವಾಂ—ಟ.

[2] ನ್ಯೂರ್ಧ್ವಂ—ಗ, ಚ, ಝ.

[3] ಇಲ್ಲಿಂದ ಮುಂದೆ ಪ. ಪುಸ್ತಕವನ್ನುಳಿದ ಇತರ ಪುಸ್ತಕಗಳಲ್ಲಿ ॥ಏಕಾ ಸರ್ವಾಂತರಾ ಶಕ್ತಿಃ ಕರೋತಿ ವಿವಿಧಂ ಜಗತ್। ಆಸ್ಥಾಯ ಬ್ರಹ್ಮಣೋರೂಪಂ ಮನ್ಮಯೀ ಮದ ಧಿಷ್ಠಿತಾ॥" ಎಂಬ ಶ್ಲೋಕವೂ, ಇದಾದ ನಂತರ—ಎಲ್ಲ ಮಾತೃಕೆಗಳಲ್ಲೂ ॥ ಅನ್ಯಾ ಚ ಶಕ್ತಿರ್ವಿಪುಲಾ ಸಂಸ್ಥಾಪಯತಿ ಮೇ ಜಗತ್ । ಭೂತ್ವಾ ನಾರಾಯಣೋಽನಂತಃ ಜಗನ್ನಾಥೊ ಜಗನ್ಮಯಃ । ತೃತೀಯಾ ಮಹತೀ ಶಕ್ತಿಃ ನಿಹಂತಿ ಸಕಲಂ ಜಗತ್ । ತಾಮಸೀ ಮೇ ಸಮಾ ಖ್ಯಾತಾಕಾಲಃಖ್ಯಾ ರುದ್ರರೂಪಿಣೀ॥ ಎಂಬ ಶ್ಲೋಕಗಳೂ ಹೆಚ್ಚಾಗಿವೆ.

[4] ಪಾರ್ಶ್ವಯೋಃ ರುಭಯೋಶ್ಚೈವ ಷಟ್‌ಕೋಷ್ಠಾನಿ ಪರಿತಜ್ಯೇತ್—ಗ, ಚ, ಝ. ಷಟ್‌ಷಟ್ ಕೋಷ್ಠಾಶ್ಚ ಪಂಕ್ತ್ಯೋಶ್ಚ ಪಾರ್ಶ್ವಯೋರುಭಯೋಸ್ತ್ಯಜೇತ್—ಠ, ತ, ಥ. ಷಟ್‌ಷಟ್ ಕೋಷ್ಠಾನಿ ಪಂಕ್ತ್ಯೋಶ್ಚ ಪಾರ್ಶ್ವಯೋರುಭಯೋಸ್ತ್ಯಜೇತ್—ಕ.

[5] ಅಂಗಂ—ಖ.

[6] ಪೀಠಿಕಂ—ಥ.

[7] ಕರ್ಣ—ಗ, ಚ, ಝ.

[8] ಪ್ರಧಾರಿಕಾ—ಕ, ಘ, ಛ, ಠ, ಥ, ತ, ಪ.

ಷಡಂಗಾನಿ ಚ ಪೀಠಸ್ಯ
ಕ್ರಮಾತ್ ಪ್ರೋಕ್ತಾನಿ ಷಣ್ಮುಖ ॥ ॥ ೧೫ ॥

ಮಂತ್ರನ್ಯಾಸ ಕ್ರಮಂ ಲಿಂಗೇ
ಶೃಣು ವತ್ಸ ಸಮಾಸತ[1] : ।
ಅಂಗಭೇದೇ[2] ಷಡಂಗಾನಿ
ಪ್ರೋಕ್ತಮಂತ್ರಾಣಿ ವಿನ್ಯಸೇತ್ ॥ ॥ ೧೬ ॥

ಹೃದಯಂ ಪಟ್ಟಿಕಾಯಾಂ ತು
ಶಿರ : ಕಂಜೇ ಶಿಖಾಂ ಗಲೇ
ಕವಚಂ ಕಮಲೇ ನೇತ್ರಂ
ಪಟ್ಯಾಮಸ್ತ್ರಂ ಚ ಧಾರಿಕೇ[3] ॥ ॥ ೧೭ ॥

ಪ್ರೋಕ್ತ : ಷಡಂಗವಿನ್ಯಾಸ :[4]
ವಕ್ಷ್ಯೇ ವ್ಯಾಧಾರ[5] ಷಟ್ ಕ್ರಮಾತ್ ।

ಊರ್ಧ್ವಪಟ್ಟಿಕೆ ಮತ್ತು ಆಜ್ಯಪ್ರಧಾರಿಕೆಯೆಂದು ಪೀಠಕ್ಕೆ ಕ್ರಮವಾಗಿ ಆರು ಅಂಗಗಳಿವೆ. ॥ ೧೫ ॥

ಇನ್ನು ಮುಂದೆ ಶಿವಲಿಂಗದಲ್ಲಿ ಮಂತ್ರನ್ಯಾಸ ಕ್ರಮವನ್ನು ತಿಳಿಸುವೆನು. ಅಂಗಭೇದಪಟಲದಲ್ಲಿ ಷಡಂಗಗಳೆಂದು ನಿರೂಪಿತವಾದ ಮಂತ್ರಗಳನ್ನು ಶಿವಲಿಂಗದಲ್ಲಿ ವಿನ್ಯಾಸಮಾಡಬೇಕು. ॥ ೧೬ ॥

ಅಧಃ ಪಟ್ಟಿಕೆಯಲ್ಲಿ ಹೃದಯಮಂತ್ರವನ್ನೂ, ಅಧಃ ಕಂಜದಲ್ಲಿ ಶಿರೋಮಂತ್ರವನ್ನೂ, ಕಣ್ಠದಲ್ಲಿ ಶಿಖಾಮಂತ್ರವನ್ನೂ ಊರ್ಧ್ವಕಂಜದಲ್ಲಿ ಕವಚಮಂತ್ರವನ್ನು, ಊರ್ಧ್ವಪಟ್ಟಿಕೆಯಲ್ಲಿ ನೇತ್ರಮಂತ್ರವನ್ನೂ, ಆಜ್ಯಪ್ರಧಾರಿಕೆಯಲ್ಲಿ ಅಸ್ತ್ರಮಂತ್ರವನ್ನೂ ನ್ಯಾಸಮಾಡಬೇಕು. ॥ ೧೭ ॥

ಷಡಂಗ ಮಂತ್ರವಿನ್ಯಾಸವನ್ನು ಹೇಳಿದ್ದಾಯಿತು. ಇನ್ನು ಆಧಾರಮೊದಲಾದ

---

1 ಸಮಾಹಿತಃ—ಜ (ಪಾ)
2 ಅಂಗಭೇದ—ಗ, ಚ, ಝ.
3 ಮಸ್ತ್ರಂಪ್ರಧಾರಿಕೇ—ಚ.
ಮಸ್ತ್ರಂ ಚಾಧಾರಿಕೇ—ಪ.
4 ಪ್ರೋಕ್ತಂ ಷಡಂಗವಿನ್ಯಾಸಂ—ಕ, ಗ, ಛ, ಜ.
5 ವಕ್ಷ್ಯೇ ಚಾಧಾರ—ಕ, ಖ, ಘ, ಛ, ಟ, ಠ, ಢ, ತ, ಥ, ದ, ಧ, ಪ.

ಕಂಜಸ್ಯ ಚಾಧ[1] ಆಧಾರಂ[2]
ವಾದಿಸಾನ್ತಂ[3] ಚತುರ್ದಲೇ[4] ॥ ॥ ೧೮ ॥

ಸ್ವಾಧಿಷ್ಠಾನೇ ಚ ಷಟ್ಪತ್ರೇ
ಬಾದಿಲಾನ್ತಂ[5] ಕ್ರಮಾನ್ನ್ಯಸೇತ್[6] ।
ತತೋ ಮಣೌ[7] ದಶದಲೇ
ಡಾದಿ ಫಾನ್ತಂ[8] ನ್ಯಸೇತ್ತ ತ :[9] ॥ ॥ ೧೯ ॥

ಆರು ಚಕ್ರಗಳನ್ನು ಕ್ರಮವಾಗಿ ಹೇಳುವೆನು ಅಧಃಕಂಜದ ಕೆಳಗಣ ಅಧಃ ಪಟ್ಟಿಕೆಯು ಆಧಾರಸ್ಥಾನ, ನಾಲ್ಕು ಕೋಷ್ಠಗಳೇ ನಾಲ್ಕುದಳಗಳು. ಇವುಗಳಲ್ಲಿ ವ ಶ ಷ ಸ ಗಳೆಂಬ ನಾಲ್ಕು ಅಕ್ಷರಗಳನ್ನು ನ್ಯಾಸಬೇಕು. ॥ ೧೮ ॥

ಅಧಃ ಕಂಜವು ಸ್ವಾಧಿಷ್ಠಾನ, ಅದರ ಆರು ಕೋಷ್ಠಗಳೇ ಆರು ಪತ್ರಗಳು. ಇವುಗಳಲ್ಲಿ ಬ ಭ ಮ ಯ ರ ಲ ಎಂಬ ಆರಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ಸ್ವಾಧಿಷ್ಠಾನದ ಮುಂದಿನಸ್ಥಾನವು ಮಣಿಪೂರಕ. ಇದರ ಹತ್ತು ದಳಗಳಲ್ಲಿ ಡ ಢ ಣ ತ ಥ ದ ಧ ನ ಪ ಫ, ಎಂಬ ಹತ್ತು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ॥ ೧೯ ॥

---

1 ಕಂಜಸ್ಯಾಧಶ್ಚ—ಥ.
2 ಕಂಜಸ್ಯಾಧ ಅಥಾಧಾರಂ—ಕ, ಘ, ಛ, ಟ, ಠ, ದ, ಚ.
ಕಂಜಸ್ಯ ಚಾಧಮಾಧಾರೇ—ಧ.
ಕಂಜಸ್ಯ ಚ ಮದಾಧಾರಂ—ತ.
3 ಶಾಂತಂ—ಧ.
4 ಚತುರ್ದಶೇ—ಚ.
5 ವಾದಿಲಾಂತಂ—ಗ, ಚ, ಜ, ಪ.
6 ತತೋ—ಗ, ಚ, ಜ.
7 ಇಲ್ಲಿ—ಖ, ಟಿಪ್ಪಣೀ—ಮಣಾ ಮಣಿಪೂರೇ ಹ, ಓ, ಮ, ಉ, ಅ ಎಂದಿದೆ.
8 ಕಾದಿಬಾಂತಂ—ಧ.
9 ತತೋ ನ್ಯಸೇತ್—ಗ, ಚ.
ಪ್ರವಿನ್ಯಸೇತ್—ಝ.

[1]ಹೃದಯೇ ದ್ವಾದಶದಲೇ
ಕಾದಿ ಠಾನ್ತಂ ನ್ಯಸೇತ್ತತಃ[2] ।
ಷಟ್ಯಾಂ ಕಣ್ಠೇ[3] ಷೋಡಶಕ–
ಆದಿವರ್ಗಂ[4] ನ್ಯಸೇತ್ತತಃ ॥ ॥ ೨೦ ॥

ಆಜ್ಞಾಯಾಂ ದ್ವಿದಲೇ ಚೋರ್ಧ್ವಂ[5]
ಳಕ್ಷಯುಗ್ಮಂ ನ್ಯಸೇತ್ತತಃ[6] ।
[7]ಇತ್ಯೇಕ ಪಂಚಾಶದ್ವರ್ಣಾಃ
ರುದ್ರ ಬೀಜಾನಿ ಮುಖ್ಯತಃ ॥ ॥ ೨೧ ॥

ಮಣಿಪೂರಕದ ಮುಂದಿನ ಊರ್ಧ್ವಕಂಜವೆಂಬುದು ಹೃದಯಸ್ಥಾನ. ಇದರ ಹನ್ನೆರಡು ದಳಗಳಲ್ಲಿ ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಎಂಬ ಹನ್ನೆರಡು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ಹೃದಯಸ್ಥಾನದ ಮುಂದಿನ ಊರ್ಧ್ವಷಟ್ಕೆಯೆಂಬ ಕಣ್ಠಸ್ಥಾನದ ಹದಿನಾರು ದಳಗಳಲ್ಲಿ ಅ ಆ ಇ ಈ ಉ ಊ ಋ ೠ ಇ ಇ ಏ ಐ ಓ ಔ ಅಂ ಅಃ ಎಂಬ ಹದಿನಾರು ಅಕ್ಷರಗಳನ್ನು ಕ್ರಮವಾಗಿ ವಿನ್ಯಾಸಮಾಡಬೇಕು. ॥ ೨೦ ॥

ಕಣ್ಠಸ್ಥಾನದ ಮುಂದಿನ ಆಜ್ಯಪ್ರಧಾರಿಕೆಯೆಂಬ ಆಜ್ಞಾಚಕ್ರದ ನಾಲ್ಕು ಕೋಷ್ಠಗಳ ಮಧ್ಯದ ಎರಡು ಕೋಷ್ಠಗಳಲ್ಲಿ ಳ. ಕ್ಷ ಎಂಬ ಎರಡು ವರ್ಣಗಳನ್ನೂ ಕ್ರಮವಾಗಿ ವಿನ್ಯಾಸಮಾಡಬೇಕು. ಹೀಗೆ ವಿನ್ಯಾಸಮಾಡಿದ ಐವತ್ತೊಂದು ಅಕ್ಷರಗಳು ರುದ್ರಬೀಜಗಳೆನಿಸುತ್ತವೆ. ॥ ೨೧ ॥

---

1 ಈ ಅರ್ಧಪದ್ಯ ಥ. ಪುಸ್ತಕದಲ್ಲಿಲ್ಲ.
2 ಠಾಂತಂ ಪ್ರವಿನ್ಯಸೇತ್—ಗ, ಚ, ಝ.
3 ಕರ್ಣೇ—ಗ, ಚ, ಝ.
4 ಸರ್ಗಂ—ಕ, ಘ, ಛ, ಟ, ಠ, ಥ, ತ.
5 ಚೋರ್ಧ್ವೇ—ಕ, ಖ, ಘ, ಛ, ಝ, ಠ, ತ, ಥ, ದ, ಧ.
6 ಹಕ್ಷಯುಗ್ಮಂ ನ್ಯಸೇತ್ತತಃ—ಗ, ಚ.
ಹಂಕ್ಷಂಯುಗ್ಮಂ ನ್ಯಸೇತ್ತತಃ—ಕ.
ಹಂಕ್ಷಂಯುಗ್ಮಂ ಪ್ರವಿನ್ಯಸೇತ್—ಝ.
7 ಈ ಅರ್ಧವು—ಖ. ಪುಸ್ತಕದಲ್ಲಿಲ್ಲ.

ಏತಾನಿ ಶಿವಚಕ್ರಾಣಿ
ಶಕ್ತಿಚಕ್ರಾಣ್ಯ ಥೋ ನ್ಯಸೇತ್[1] ।
ಆಧಾರಾದಿ ಗಲಾಂತಂ ಚ[2]
ವರ್ಣಾನಿ[3] ಪೂರ್ವವನ್ನ್ಯಸೇತ್[4] ॥ ॥ ೨೨ ॥

ಆಜ್ಞಾಯಾಂ ತು ವಿಶೇಸೋಸ್ತಿ[5]
ಶಕ್ತಿಪಕ್ಷೇ ಹಳೇ[6] ನ್ಯಸೇತ್ ।
ವರ್ಣಾಧಿ[7] ದೇವತಾಸ್ತತ್ರ[8]
ಪೂರ್ವವತ್ಪರಿಕಲ್ಪಯೇತ್ ॥ ॥ ೨೩ ॥

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಆಜ್ಞಾ ಎಂಬ ಈ ಆರುಚಕ್ರಗಳಲ್ಲಿ ಶಿವಬೀಜಗಳನ್ನು ವಿನ್ಯಾಸಮಾಡುವುದರಿಂದ ಇವುಗಳಿಗೆ ಶಿವಚಕ್ರಗಳೆಂದು ಹೆಸರು. ಶಿವಚಕ್ರನ್ಯಾಸದ ಅನನ್ತರ ಶಕ್ತಿಚಕ್ರನ್ಯಾಸವನ್ನು ಮಾಡಬೇಕು. ರುದ್ರಬೀಜಗಳೆಂಬ ಈ ಐವತ್ತೊಂದು ಅಕ್ಷರಗಳು ಶಿವಶಕ್ತ್ಯುಭಯರೂಪಗಳಾದುವದರಿಂದ ಶಿವಮಂತ್ರೋದ್ಧಾರಕಾಲದಲ್ಲಿ ಶಕ್ತಿ ಬೀಜಗಳೂ ಆಗುತ್ತವೆ. ಆಧಾರ ಸ್ವಾಧಿಷ್ಠಾನ ಮಣಿಪೂರಕ ಆನಾಹತ ವಿಶುದ್ಧಿ ಎಂಬ ಐದು ಚಕ್ರಗಳಲ್ಲಿ ಶಿವ ಚಕ್ರನ್ಯಾಸವನ್ನು ಮಾಡಿದಂತೆ ಶಕಾರಾದಿ ಶಕ್ತಿ ಬೀಜಗಳನ್ನೂ ನ್ಯಾಸಮಾಡಬೇಕು. ॥ ೨೨ ॥

ಆಜ್ಞಾ ಚಕ್ರದಲ್ಲಿ ಶಿವಚಕ್ರದ ದೃಷ್ಟಿಯಿಂದ ವಿಶೇಷವಿದೆ. ಶಕ್ತಿ ಚಕ್ರಗಳಲ್ಲಿ ವಿನ್ಯಾಸಮಾಡುವಾಗ ಆಜ್ಞಾ ಚಕ್ರದ ಸಮೀಪದಲ್ಲಿರುವ ಎರಡು ಚಕ್ರಗಳ ಮಧ್ಯದಲ್ಲಿರುವ ಚತುಷ್ಕೋಷ್ಠಗಳ ಮಧ್ಯದ ಎರಡುದಳಗಳಲ್ಲಿ ಳಕಾರಕ್ಷಕಾರಗಳಿಗೆ ಬದಲಾಗಿ ಹಕಾರಳಕಾರಗಳನ್ನು ವಿನ್ಯಾಸಮಾಡಬೇಕು. ಚಕ್ರಭೇದ ಪಟಲದಲ್ಲಿ ಕಲ್ಪಿಸಿರುವಂತೆ ಇಲ್ಲಿಯೂ ರುದ್ರರನ್ನೂ ರುದ್ರ ಶಕ್ತಿಗಳನ್ನೂ ಕಲ್ಪಿಸಿಕೊಳ್ಳಬೇಕು. ॥ ೨೩ ॥

---

1 ಣ್ಯಥೋಚ್ಯತೇ—ಗ, ಚ, ಝ.
2 ಗಲಾಂತಂ ತು—ಥ.
3 ವರ್ಣಾಂಶ್ಚ—ಥ.
4 ನ್ಯಸೇದ್ವರ್ಣಾನಿ ಪೂರ್ವವತ್—ಗ, ಚ, ಝ.
5 ಷಟ್ಚಕ್ರಾಸ್ಯಾದಿ ತಾನ್ಯೇವಂ—ಝ.
ಆಜ್ಞಾಯಾಂ ತು ವಿಶೇಷೇಣ—ಗ, ಚ, ಝ.
6 (ಹ) ಕ್ಷಳಂ—ಚ.
ಹಳಂ—ಪ.
7 ವರ್ಣಾದಿ—ಗ, ಚ, ಝ.
8 ದೈವತಂ ತತ್ರ—ಟ, ಠ, ಥ.

ಏವಂ ಷಟ್ಚಕ್ರ ಮಾಖ್ಯಾತಂ
ಮೂರ್ತಿಮನ್ತ್ರಂ[1]ನ್ಯ ಸೇತ್ತತ:[2]
ನಾದಂ ಲಿಂಗೇಚ[3] ವಿನ್ಯಸ್ಯ[4]
ಬಿನ್ದು ಮಾಜ್ಯಪ್ರಧಾರಿಕೇ[5] ॥ ॥ ೨೪ ॥

ಪಟ್ಯಾದಿ ಕಂಜ ಪರ್ಯನ್ತಂ
ಮಕಾರಂ ವಿನ್ಯಸೇತ್ತತ: [6] ।
ವೃತ್ತೇ ತೂಕಾರಂ ವಿನ್ಯಸ್ಯ[7]
ಚಾಕಾರಂ[8] ಕಂಜಪಟ್ಟಕೇ[9] ॥ ॥ ೨೫ ॥

ಹೀಗೆ ಆರು ಚಕ್ರಗಳ ನ್ಯಾಸವನ್ನು ಹೇಳಿದ್ದಾಯಿತು. ಚಕ್ರನ್ಯಾಸದ ತರುವಾಯ ಮೂರ್ತಿಮನ್ತ್ರನ್ಯಾಸವನ್ನು ಮಾಡಬೇಕು. ಆಜ್ಯ ಪ್ರಧಾರಿಕೆಯ ಮೇಲಣ ಚತುಷ್ಕೋಷ್ಠಗಳ ಮಧ್ಯದಲ್ಲಿ ಹಕಾರವನ್ನು ವಿನ್ಯಾಸಮಾಡಿ ಓಂಕಾರವನ್ನು ಆಜ್ಯ ಪ್ರಧಾರಿಕೆಯಲ್ಲಿ ವಿನ್ಯಾಸಮಾಡಬೇಕು. ॥ ೨೪ ॥

ಊರ್ಧ್ವಪಟ್ಟಿಕೆ ಮೊದಲಾಗಿ ಊರ್ಧ್ವಕಂಜದವರೆಗೆ ಮಕಾರವನ್ನು ವಿನ್ಯಾಸ ಮಾಡಬೇಕು. ವೃತ್ತವೆಂದು ಕರೆಯುವ ಕಣ್ಠಸ್ಥಾನದಲ್ಲಿ ಉಕಾರವನ್ನೂ ಅಧಃ ಕಂಜಪಟ್ಟಿಕೆಯಲ್ಲಿ ಅಕಾರವನ್ನೂ ವಿನ್ಯಾಸಮಾಡಬೇಕು. ॥ ೨೫ ॥

---

1 ಮೂರ್ತಂ ತಂತ್ರಂ—ಥ.
ಮೂಲಮಂತ್ರಂ—ಧ.
ಮೂರ್ತಮಂತ್ರಂ—ಘ, ಛ, ಟ, ಢ, ತ, ದ.
2 ಪ್ರವಿನ್ಯಸೇತ್—ಗ, ಚ, ಝ.
3 ತು—ಪ.
4 ವಿನ್ಯಸೇತ್—ಟ.
5 ಪ್ರಸಾರಿಕೇ—ಗ, ಚ, ಝ, ಥ.
6 ವಿನ್ಯಸೇತ್ ಕ್ರಮಾತ್—ಗ, ಚ, ಜ, ಝ.
7 ವೃತ್ತೇ ಉಕಾರಂ ವಿನ್ಯಸ್ಯ—ಗ, ಚ, ಜ, ಝ.
ವೃತ್ತೆತೂಕಾರಂ ನ್ಯಸ್ಯ—ಪ.
ವೃತ್ತೇತೂಕಾರಂ ನ್ಯಸ್ತ್ಯ—ಕ, ಘ, ಛ, ಟ, ಠ, ತ, ಥ, ದ.
ವೃತ್ತೇ ಕ್ಷಕಾರಕಂ ನ್ಯಸ್ಯ—ಧ.
8 ಹಕಾರಂ—ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಡ, ಢ, ತ, ಥ, ದ, ಪ.
ಯಕಾರಂ—ಘ.
9 ಕಮಲಪಟ್ಟಿಕೇ—ಕ, ಘ, ಚ, ಟ, ಡ, ತ, ಥ, ದ.
ಕಮಲಪಟ್ಟಿಕೇ—ಖ.
ಕಂಜಪಟ್ಟಿಕೇ—ಗ, ಜ, ಝ.

ಸೂಕ್ಷ್ಮ ಪಂಚಾಕ್ಷರಂ ಪ್ರೋಕ್ತಂ[1]
ಸ್ಥೂಲಪಂಚಾಕ್ಷರಂ ಶೃಣು ।
ನಕಾರಾದಿ[2] ಯಕಾರಾನ್ತಂ
ಪಂಚಾರ್ಣಂ ತತ್ರವಿನ್ಯಸೇತ್ ॥ ॥ ೨೬ ॥

ಪಂಚಾಕ್ಷರಮಿದಂ[3] ಪ್ರೋಕ್ತಂ
ಷಡಕ್ಷರ ಮಥೋಚ್ಯತೇ ।
ತಾರಂ[4] ಲಿಂಗೇ ಪ್ರವಿನ್ಯಸ್ಯ
ಪಟ್ಟಿಕಾಯಾಂ ನಕಾರಕಮ್[5] ॥ ॥ ೨೭ ॥

ಮಕಾರ ಮೂರ್ಧ್ವ ಕಂಜೇ ತು[6]
ಶಿಕಾರಂ ವೃತ್ತ ಮಧ್ಯಕೇ[7] ।

ಹೀಗೆ ಹ. ಓಂ ಮ ಉ ಅ ಎಂಬ ಸೂಕ್ಷ್ಮ ಪಂಚಾಕ್ಷರಗಳ ನ್ಯಾಸವನ್ನು ಹೇಳಲಾಯಿತು. ಇನ್ನು ಸ್ಥೂಲ ಪಂಚಾಕ್ಷರಗಳ ನ್ಯಾಸವನ್ನು ತಿಳಿಸುವೆನು, ನ, ಮಃ, ಶಿ, ವಾ, ಯ, ಎಂಬ ಪಂಚಾಕ್ಷರಗಳನ್ನು ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಎಂಬ ಚಕ್ರಗಳ ಸ್ಥಾನಗಳಲ್ಲಿ ಕ್ರಮವಾಗಿ ವಿನ್ಯಾಸಮಾಡಬೇಕು. ॥ ೨೬ ॥

'ನಮಃ ಶಿವಾಯ' ಎಂಬ ಸ್ಥೂಲಪಂಚಾಕ್ಷರನ್ಯಾಸವನ್ನು ಹೇಳಿದ್ದಾಯಿತು. ಇನ್ನು ಷಡಕ್ಷರ ನ್ಯಾಸವನ್ನು ಹೇಳುವೆನು ಶಿವಲಿಂಗದಲ್ಲಿ ಓಂಕಾರವನ್ನೂ ಊರ್ಧ್ವಪಟ್ಟಿಕೆಯಲ್ಲಿ ನಕಾರವನ್ನು ವಿನ್ಯಾಸಮಾಡಬೇಕು. ॥ ೨೭ ॥

ಊರ್ಧ್ವಕಂಜದಲ್ಲಿ ಮಕಾರವನ್ನು, ವೃತ್ತ ಮಧ್ಯದಲ್ಲಿ ಶಿಕಾರವನ್ನು, ಅಧಃ ಕಂಜದಲ್ಲಿ ವಾಕಾರವನ್ನು ಅಧಃಪಟ್ಟಿಕೆಯಲ್ಲಿ ಯಕಾರವನ್ನು ವಿನ್ಯಾಸಮಾಡಬೇಕು.

---

[1] ನ್ಯಸ್ತಂ—ಛ, ಠ, ಥ, ದ, ಧ.
ನ್ಯಸ್ಯ—ಪ.
[2] ಅಕಾರಾದಿ—ಪ.
[3] ಮಿತಿ—ಪ.
